# ನಮ್ಮ ಮಾನಸ

ಸಂಪುಟ : 3 ಸೆಪ್ಟೆಂಬರ್ 2009 ಸಂಚಿಕೆ : 5



# ಡೆಂಗಿ ಜ್ವರ ತಡೆಗಟ್ಟುವ ಬಗ್ಗೆ ಮುಂಜಾಗ್ರತೆ ಕ್ರಮಗಳು

*ಡೆಂಗಿ ಜ್ವರ ಎಂದರೇನು?*

*ಡೆಂಗಿ ಜ್ವರವು ಡೆಂಗಿ ವೈರಸ್‌ನಿಂದ ಉಂಟಾಗುವ ಕಾಯಿಲೆ. ಈ ಕಾಯಿಲೆಯು ಸೋಂಕು ಹೊಂದಿದ ಈಡಿಸ್ ಈಜಿಪ್ಟೈ ಎಂಬ ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ.*

*ಈ ರೋಗದ ಮುಖ್ಯ ಲಕ್ಷಣಗಳು*

*ಇದ್ದಕ್ಕಿದ್ದಂತೆ ತೀವ್ರಜ್ವರ, ವಿಪರೀತ ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳುವುದು ಈ ರೋಗದ ಲಕ್ಷಣ. ಹಲವು ಬಾರಿ ಮೂಗು, ಬಾಯಿ ಮತ್ತು ವಸಡುಗಳಲ್ಲಿ ರಕ್ತಸ್ರಾವದ ಚಿಹ್ನೆಗಳು ಕಂಡುಬರುತ್ತವೆ. ಈ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ರಕ್ತಪರೀಕ್ಷೆ ಮಾಡಿಸಿ, ಸೂಕ್ತ ಚಿಕಿತ್ಸೆ ಪಡೆಯುವುದು.*

*ಸಾರ್ವಜನಿಕರು ಡೆಂಗಿ ರೋಗವನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು*

1) *ಡೆಂಗಿ ಹರಡುವ ಈಜಿಪ್ಟ್ ಸೊಳ್ಳೆಗಳು ಮನೆಯಲ್ಲಿನ ನೀರು ಶೇಖರಿಸುವ ಸಿಮೆಂಟ್ ತೊಟ್ಟಿಗಳು, ಬ್ಯಾರೆಲ್‌ಗಳು, ಡ್ರಮ್‌ಗಳು, ಏರ್‌ಕೂಲರ್, ಹೂಕುಂಡದ ನೀರಿನ ಸಂಗ್ರಹಗಳು, ಇತ್ಯಾದಿಗಳಲ್ಲಿ ಉತ್ಪತ್ತಿಯಾಗುವುದರಿಂದ ಇವುಗಳನ್ನು ವಾರಕ್ಕೊಮ್ಮೆ ಸಂಪೂರ್ಣವಾಗಿ ಶುಚಿಗೊಳಿಸಿ, ಯಾವಾಗಲೂ ಭದ್ರವಾದ ಮುಚ್ಚಳಿಕೆಯಿಂದ ಮುಚ್ಚಿ ಸೊಳ್ಳೆ ಉತ್ಪತ್ತಿಯಾಗದಂತೆ ಎಚ್ಚರವಹಿಸಿ.*
2) *ಬಯಲಲ್ಲಿ ಪೈರು, ಎಳನೀರಿನ ಚಿಪ್ಪು ಮತ್ತು ತ್ಯಾಜ್ಯ ವಸ್ತುಗಳಲ್ಲಿ ನೀರು ಸಂಗ್ರಹವಾಗದಂತೆ ಸೂಕ್ತ ವಿಲೇವಾರಿ ಮಾಡುವುದು ಅಥವಾ ನಾಶಗೊಳಿಸುವುದು.*
3) *ಈ ರೋಗ ಹರಡುವ ಸೊಳ್ಳೆಗಳು ಹಗಲಲ್ಲಿ ಕಚ್ಚುವುದರಿಂದ ಸೊಳ್ಳೆ ಕಡಿತದಿಂದ ಪಾರಾಗಲು ಮಕ್ಕಳು, ವಿಶ್ರಾಂತಿ ಪಡೆಯುವ ವಯೋವೃದ್ಧರು, ಕಾಯಿಲೆಯಿಂದ ನರಳುವವರು ತಪ್ಪದೇ ಸೊಳ್ಳೆಪರದೆಯನ್ನು ಉಪಯೋಗಿಸುವುದು ಹಾಗೂ ಇತರೆ ಸೊಳ್ಳೆ ನಿರೋಧಕಗಳನ್ನು ಬಳಸುವುದು. ಹೀಗೆ ಮಾಡುವುದರಿಂದ ಈ ರೋಗವನ್ನು ತಡೆಗಟ್ಟುವುದು ಸುಲಭ.*

***ನಿಮ್ಮ ಮನೆಯ ಒಳಗೆ ಹಾಗೂ ಮನೆಯ ಸುತ್ತಮುತ್ತ ಸೊಳ್ಳೆ ಉತ್ಪತ್ತಿಯನ್ನು ತಡೆಗಟ್ಟಿ ಡೆಂಗಿ ಜ್ವರ ನಿಯಂತ್ರಿಸಿ***

ಕರ್ನಾಟಕ ವಾರ್ತೆ

# ನಮ್ಮ ಮಾನಸ

**ಸೆಪ್ಟೆಂಬರ್ 2009**

ಸಂಪುಟ : 3 ಸಂಚಿಕೆ : 5

*Editor, Printer and Publisher*
***Rajeshwari H.S.,***
*No. 114/5, 9th Cross, 2nd Main*
*Chamarajpet, Bangalore - 560 018.*
*Mobile : 9449345698*

*Printed at*
***ILA Mudrana***
*No. 36, 40 Ft. Road, Raghavanagara,*
*New Timberyard Layout*
*Bangalore-26.*
*©: 26757159*

*ಸಂಪಾದಕ ಮಂಡಳಿ*
**ಚಂಪಾವತಿ ಹೆಚ್.ಎಸ್., ಸವಿತಾ ಎ.**
**ವೆಂ. ವನಜಾ, ಗೀತಾ, ಎಚ್.ಎಸ್. ಪುಷ್ಪಾ.**

*ಸಲಹೆ – ಸಹಕಾರ*
**ಇಳಾ ವಿಜಯಾ, ಸುಮಿತ್ರಾಬಾಯಿ ಬಿ.ಎನ್.**

*ಮಾನಸ ಬಳಗ*
**ತಸ್ನೀಂ ತಾಜ್, ವೇದವಲ್ಲಿ ಜಿ.ವಿ.**
**ವತ್ಸಲ ವೈ.ಎನ್., ಶ್ಯಾಮಲ, ತಾಜುಮಾ**

*ಚಂದಾ ವಿವರ*

| | |
|---|---|
| ಬಿಡಿಪ್ರತಿ | 8–00 ರೂ. |
| ವಾರ್ಷಿಕ ಚಂದಾ (ವಿಶೇಷ ಸಂಚಿಕೆಯೊಂದಿಗೆ) | 100–00 ರೂ. |
| ಸಂಸ್ಥೆಗಳಿಗೆ | 150–00 ರೂ. |

## ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018

*ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು*


– – –

***ಮೈಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ ಚಂದಾ ನವೀಕರಣಕ್ಕೆ ಸಂಪರ್ಕಿಸಿ***

**ವೆಂ. ವನಜ**

*2329, 12ನೇ ಮೈನ್, 2ನೇ ಹಂತ,*
*ವಿಜಯನಗರ, ಮೈಸೂರು – 570 017*

**ಪ್ರಾರಂಭ : 'ಮಾನುಷಿ' (1985ರಲ್ಲಿ), ಅನಂತರ 'ಮಾನಸ', ಈಗ 'ನಮ್ಮ ಮಾನಸ'**


# ಸಬಲೀಕರಣ – ಅಭಿವೃದ್ಧಿ ಪ್ರಕ್ರಿಯೆ ಮಹಿಳೆಯರನ್ನು ಎತ್ತ ಕರೆದೊಯ್ಯುತ್ತಿದೆ !

**ಪಂ**ಚಾಯತ್‌ರಾಜ್ ವ್ಯವಸ್ಥೆಯ ಮೂರು ಹಂತಗಳಲ್ಲಿ ಶೇ.50ರಷ್ಟು ಮೀಸಲಾತಿಯನ್ನು ಕಲ್ಪಿಸುವ ಪ್ರಸ್ತಾವಕ್ಕೆ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆಯನ್ನು ನೀಡಿರುವುದು ಪ್ರಸ್ತುತ ರಾಜಕೀಯ ಸಂದರ್ಭದಲ್ಲಿ ಮಹತ್ವದ ತೀರ್ಮಾನವಾಗಿದೆ. ವಿಧಾನಸಭೆ ಹಾಗೂ ಸಂಸತ್ತಿನಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿಯನ್ನು ನೀಡಲು ಮೀನಮೇಷ ಎದುರಿಸುತ್ತಿರುವ ಹಿನ್ನಲೆಯಲ್ಲಿ ಶೇ.50ರಷ್ಟು ಮೀಸಲಾತಿಯನ್ನು ಸ್ಥಳೀಯ ಮಟ್ಟದಲ್ಲಿ ಮಹಿಳಾ ನಾಯಕತ್ವವನ್ನು ಬೆಳೆಸುವ, ಪೋಷಿಸುವ ಉದ್ದೇಶ ಮಸೂದೆಗಿದೆ.

ಶೇ.33ರಿಂದ ಶೇ.50ರಷ್ಟು ಮೀಸಲಾತಿಯನ್ನು ಹೆಚ್ಚಿಸಬೇಕಾದ ಸಂದರ್ಭದಲ್ಲಿ 243ನೇ (ಡಿ) ಪರಿಚ್ಛೇದಕ್ಕೆ ತಿದ್ದುಪಡಿ ಮಾಡುವುದು ಅತ್ಯಗತ್ಯವಾಗಿದೆ. ಈ ತಿದ್ದುಪಡಿಗೆ ಮುಂದಿನ ಸಂಸತ್ ಅಧಿವೇಶನದಲ್ಲಿ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ. ಈ ಮಹತ್ವದ ತಿದ್ದುಪಡಿ ಜಾರಿಗೆ ಬಂದರೆ ಗ್ರಾಮ ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ನಿರ್ಣಾಯಕ ಪಾತ್ರವನ್ನು ವಹಿಸುವ ಅವಕಾಶ ಮಹಿಳೆಯರಿಗಿದೆ. ಮಹಿಳೆಯರ ಸಬಲೀಕರಣ ಮುಖ್ಯವಾಹಿನಿಯಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಮಹಿಳೆಯರ ಪಾಲುದಾರಿಕೆ, ಗ್ರಾಮೀಣಾಭಿವೃದ್ಧಿಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಮುಂತಾದ ವಿಷಯಗಳಲ್ಲಿ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರಿಗೆ ಈ ತಿದ್ದುಪಡಿ ವಿಪುಲವಾದ ಅವಕಾಶವನ್ನು ಒದಗಿಸಿಕೊಡುತ್ತದೆ.

ಆದರೆ, ಪ್ರಸ್ತುತ ರಾಜಕೀಯ ಸಂದರ್ಭದಲ್ಲಿ ಮಹಿಳೆಯರ ರಾಜಕೀಯ ಪರಿಕಲ್ಪನೆಗಳೇನು ಎಂಬ ಪ್ರಶ್ನೆ ಬಹುಮುಖ್ಯವಾಗುತ್ತದೆ. ಮಹಿಳೆಯರಿಗೆ ಅವರದೇ ಆದ ರಾಜಕೀಯ ಆಲೋಚನೆಗಳು, ನಂಬಿಕೆಗಳು ಇವೆಯೆ? ಪ್ರಮುಖ ರಾಜಕೀಯ ಪಕ್ಷಗಳು, ಪಕ್ಷದ ನಾಯಕರು ಬಿಂಬಿಸುವ ರಾಜಕೀಯ ಮೌಲ್ಯಗಳಿಗಿಂತ ಭಿನ್ನವಾದ, ಸಮಾಜಕ್ಕೆ ಪೂರಕವಾದ ನಿಲುವುಗಳನ್ನು ಮಹಿಳೆಯರು ಪ್ರತಿಪಾದಿಸಬಲ್ಲರೆ? ಅಥವಾ ಪ್ರಸ್ತುತ ರಾಜಕೀಯದ ಅಲೆಯೊಳಗೆ ಅವರೂ ಎಲ್ಲಾ ಪುರುಷ ರಾಜಕಾರಣಿಗಳಂತೆ ಒಬ್ಬ 'ಯಶಸ್ವಿ' ರಾಜಕಾರಣಿ ಮಾತ್ರ ಆಗಬಲ್ಲರೆ?

ಜಾತಿ ರಾಜಕಾರಣ, ಲಂಚ, ಭ್ರಷ್ಟಾಚಾರ, ಅಪರಾಧೀಕರಣಗೊಂಡ ರಾಜಕೀಯ, ಹಣ ತೋಳ್ಬಲದ ಶಕ್ತಿ ಪ್ರದರ್ಶನ ರಾಜಕೀಯದಲ್ಲಿ ತುಂಬಿ ತುಳುಕಾಡುತ್ತಿವೆ. ಇಂತಹ ಸಂದರ್ಭದಲ್ಲಿ ಮುಖ್ಯವಾಹಿನಿಗೆ ಬರುವ ಮಹಿಳೆಯರು ಭಿನ್ನರಾಜಕೀಯ ನಿಲುವನ್ನು ಹೇಗೆ ರೂಪಿಸಿಕೊಳ್ಳಬಲ್ಲರು. ಪುರುಷ ರಾಜಕಾರಣವೆ ಅವರಿಗೆ ಮಾದರಿಯಾಗಿ ಕಾಣಬಹುದು. ಹಾಗಾಗಿ ಮಹಿಳೆಯರೆಂದ ಮಾತ್ರಕ್ಕೆ ಅವರು ಜಾತಿ ರಾಜಕಾರಣ ಮಾಡುವುದಿಲ್ಲವೆಂದಾಗಲೀ, ಭ್ರಷ್ಟಾಚಾರದಲ್ಲಿ ಪಾಲ್ಗೊಳ್ಳುವುದಿಲ್ಲ ಎಂದಾಗಲೀ ಹೇಳಲು ಸಾಧ್ಯವಿಲ್ಲ. ಇಂತಹ ರಾಜಕಾರಣ ಮಾಡುವ ಮಹಿಳಾ ನಾಯಕಿಯರಾಗಲೇ ನಮ್ಮ ಮುಂದಿದ್ದಾರೆ. ಸಬಲೀಕರಣ ಹಾಗೂ ಅಭಿವೃದ್ಧಿಯ ಪ್ರಕ್ರಿಯೆ ಮಹಿಳೆಯರನ್ನು ಎತ್ತ ಕರೆದೊಯ್ಯುತ್ತಿವೆ ಎನ್ನುವುದು ಬಹುಮುಖ್ಯ ಪ್ರಶ್ನೆಯಾಗುತ್ತದೆ.

ಮಹಿಳೆಯಲ್ಲಿನ ಸಶಕ್ತತೆ, ಸಬಲೀಕರಣಗಳು ಸಮಾಜಮುಖಿ ಚಿಂತನೆಗಳಿಂದ ರೂಪುಗೊಳ್ಳಬೇಕಾಗಿದೆ. ಈ ಚಿಂತನೆಗಳಿಲ್ಲದಿದ್ದರೆ ಆಕೆ ಪುರುಷ ರಾಜಕಾರಣಿಗಿಂತ ಭಿನ್ನವಾದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಧ್ಯದ ರಾಜಕೀಯ ವಾತಾವರಣದಲ್ಲಿ ಸಾಧ್ಯವಿಲ್ಲ. ಮಹಿಳೆ ತನಗೆ ಸಿಕ್ಕಿರುವ ಸವಲತ್ತುಗಳನ್ನು ಉಪಯೋಗಿಸಿಕೊಂಡು ತನಗಿಂತ ದುರ್ಬಲ ಜನಾಂಗದ ಮೇಲೆ ತನ್ನ ಅಧಿಕಾರವನ್ನು ಪ್ರಯೋಗಿಸುತ್ತಿರುವ ನಿದರ್ಶನಗಳು ನಮ್ಮ ಮುಂದೆ ಸಾಕಷ್ಟಿವೆ. ಮಹಿಳೆಯರು ಸುಲಭವಾಗಿ ಧಾರ್ಮಿಕ ಮೂಲಭೂತವಾದಿಗಳೊಂದಿಗೆ ಕೈಜೋಡಿಸುತ್ತಿರುವುದೂ ಕಂಡುಬರುತ್ತಿದೆ. ಮಹಿಳೆಯರ ಸಬಲೀಕರಣದ ಈ ಪ್ರಕ್ರಿಯೆಯನ್ನು ನಮ್ಮ ಸಮಾಜದಲ್ಲಿ

ಬೇರು ಬಿಟ್ಟಿರುವ ಜಾತಿ ರಾಜಕಾರಣ, ಭ್ರಷ್ಟಾಚಾರ, ಜಾಗತೀಕರಣ, ಕೋಮುವಾದದಂತಹ ಸಮಸ್ಯೆಗಳು ಸುಲಭವಾಗಿ ತಮ್ಮ ತೆಕ್ಕೆಗೆ ತೆಗೆದುಕೊಳ್ಳುತ್ತವೆ.

ನಮ್ಮ ಸಮಾಜದ ಸಮಗ್ರ ಸಮಸ್ಯೆಗಳ ಸುತ್ತ ಮಹಿಳೆಯರು ತಮ್ಮದೇ ದೃಷ್ಟಿಕೋನವನ್ನು ಬೆಳೆಸಿಕೊಳ್ಳುತ್ತಾ, ಪ್ರಗತಿಪರ ಆಲೋಚನೆಗಳಿಂದ ತಮ್ಮದೇ ಆದ ಮಹಿಳಾ ರಾಜಕಾರಣವನ್ನು ಅರ್ಥೈಸಿ ಸಂಘಟನೆಗೊಂಡಾಗ ಮಾತ್ರ ಮೀಸಲಾತಿ ಅರ್ಥಪೂರ್ಣವಾಗಲು ಸಾಧ್ಯ.

ಬಂಟ್ವಾಳದ ಕಾಲೇಜಿನಲ್ಲಿ ಮುಸ್ಲಿಂ ಮಹಿಳೆಯರು ಬುರ್ಕಾ ಧರಿಸಿ ಕಾಲೇಜಿಗೆ ಬರುತ್ತಿರುವ ವಿಚಾರದಲ್ಲಿ ನಡೆಯುತ್ತಿರುವ ವಿವಾದ ಧರ್ಮ, ಸಂಸ್ಕೃತಿ ಹಾಗೂ ಮಹಿಳೆಯರ ಅಸ್ತಿತ್ವಕ್ಕೆ ಸಂಬಂಧಪಟ್ಟಂತೆ ಕೆಲವು ಮೂಲಭೂತ ಪ್ರಶ್ನೆಗಳನ್ನು ಎತ್ತುತ್ತವೆ. ಮಹಿಳೆಯ ಅಸ್ತಿತ್ವವನ್ನು ಮೂಲೆಗೊತ್ತಿ. ಆಕೆಯನ್ನು ಧರ್ಮದ ಹಿನ್ನೆಲೆಯಲ್ಲಿ ಗುರುತಿಸುವ ಯತ್ನವನ್ನು ಎರಡೂ ಧರ್ಮದ ಮೂಲಭೂತವಾದಿಗಳು ಮಾಡುತ್ತಿದ್ದಾರೆ.

ಬುರ್ಕಾ ಧರಿಸುವುದು, ಬಳೆ, ಕುಂಕುಮ ಇವೆಲ್ಲಾ ಧಾರ್ಮಿಕ ಆಚರಣೆಯ ಪ್ರತೀಕಗಳಾಗಿವೆ. ಇವುಗಳನ್ನು ಕಡ್ಡಾಯ ಮಾಡುವುದು, ವಿಜ್ರಂಭಿಸುವುದು, ಧರ್ಮರಕ್ಷಣೆಯ ಪ್ರತಿಪಾದನೆಯಾಗಿದೆ. ಈ ಮೂಲಕ ಮಹಿಳೆಯರ ಮೇಲೆ ಧಾರ್ಮಿಕ, ಸಾಂಸ್ಕೃತಿಕ ಕಟ್ಟುಪಾಡುಗಳನ್ನು ಹೇರುತ್ತಾ, ಅವಳ ಸ್ವಾತಂತ್ರ್ಯವನ್ನು ಹತ್ತಿಕ್ಕುವುದು ಧಾರ್ಮಿಕ ಮೂಲಭೂತವಾದಿಗಳ ಹುನ್ನಾರವಾಗಿದೆ. ಇಂತಹ ಪುರುಷಪ್ರಧಾನ ಧಾರ್ಮಿಕ ಹುನ್ನಾರಗಳ ಹಿಂದಿರುವ ಮಹಿಳಾವಿರೋಧಿ ನಿಲುವು ಹಾಗೂ ರಾಜಕಾರಣವನ್ನು ಮಹಿಳೆಯರು ಗುರುತಿಸಿಕೊಳ್ಳುವುದು ಅತ್ಯಗತ್ಯವಾಗಿದೆ. ಈ ಎಚ್ಚರಿಕೆ ಮಹಿಳೆಯರಲ್ಲಿರಬೇಕಾಗುತ್ತದೆ. ಹಾಗಲ್ಲದೆ ಹೋದರೆ ಕೋಮುವಾದಿ ಪುರುಷಪ್ರಧಾನ ಸಮಾಜವು ಧರ್ಮ, ಸಂಸ್ಕೃತಿಯ ಹೆಸರಿನಲ್ಲಿ ಮಹಿಳೆಯರನ್ನು ಪುನಃ ಪುನಃ ಸಂಕೋಲೆಗಳ ಗೋಜಿನಲ್ಲಿ ಸಿಲುಕಿಹಾಕಿಸುತ್ತದೆ.

* * *

ಮಣಿಪುರದಲ್ಲಿ ರಕ್ಷಣಾ ಪಡೆಗಳು ಅಮಾಯಕ ಜನರ ಮೇಲೆ ನಡೆಸುತ್ತಿರುವ ದೌರ್ಜನ್ಯ ಈಗಾಗಲೇ ದೇಶ ವಿದೇಶಗಳಲ್ಲಿರುವ ಮಾನವೀಯ ಕಾಳಜಿಯುಳ್ಳವರ ಗಮನವನ್ನು ಸೆಳೆಯುತ್ತಲೇ ಇದೆ. ಉಗ್ರವಾದಿಗಳನ್ನು ಹತ್ತಿಕ್ಕುವ ನೆಪದಲ್ಲಿ ಜನಸಾಮಾನ್ಯರ ಮೇಲೆ ನಡೆಸುತ್ತಿರುವ ಹಿಂಸೆ ಅಮಾನವೀಯವಾದುದು, ಅಮಾನುಷವಾದುದು. ಅನುಮಾನದ ಮೇಲೆ ಅಮಾಯಕರನ್ನು ಗುಂಡಿಕ್ಕಿ ಕೊಲ್ಲುವುದು, ನಕಲಿ ಎನ್‌ಕೌಂಟರ್‌ನಲ್ಲಿ ಸಾಯಿಸುವುದು, ಹೆಣ್ಣುಮಕ್ಕಳ ಮೇಲೆ ಅತ್ಯಾಚಾರವೆಸಗುವುದು, ಮಕ್ಕಳು ಕಾಣೆಯಾಗುವುದು, ಅಲ್ಲಿನ ದೈನಂದಿನ ಜೀವನದ ಒಂದು ಭಾಗವೇ ಆಗಿದೆ.

ಇತ್ತೀಚೆಗೆ ಹನ್ನೊಂದು ವರ್ಷದ ಹಸುಳೆ ಬಿದಿಯಾರಾಣಿ ರಕ್ಷಣಾ ಪಡೆಗಳ ಕ್ರೌರ್ಯಕ್ಕೆ ಒಳಗಾಗಿದ್ದಾಳೆ. ಉಗ್ರವಾದಿಗಳಿಗೆ ಆಶ್ರಯ ನೀಡಿ ಬೆಂಬಲಿಸುತ್ತಿದ್ದಾರೆಂಬ ನೆಪದಲ್ಲಿ ಬಿದಿಯಾರಾಣಿಯ ಮನೆಗೆ ಬಂದ ರಕ್ಷಣಾ ಪಡೆಗಳು, ಆಕೆಯ ತಂದೆ-ತಾಯಿ ಮನೆಯಲ್ಲಿ ಇಲ್ಲದ ಕಾರಣ ಆಕೆಯನ್ನೇ ಆಗಸ್ಟ್ 14ರಂದು ಹತ್ತಿರದ ಸ್ಟೇಷನ್‌ಗೆ ಕರೆದೊಯ್ದರು. ಆಗಸ್ಟ್ 18ರಂದು ಆಕೆಯನ್ನು ಬಿಡಲಾಗಿತ್ತು. ಆರನೇ ಕ್ಲಾಸ್‌ನಲ್ಲಿ ಓದುತ್ತಿರುವ ಬಿದಿಯಾರಾಣಿಯನ್ನು ಸುಮಾರು 5.30 ಗಂಟೆಗಳ ಕಾಲ ತಮ್ಮ ಬಳಿ ಇಟ್ಟುಕೊಂಡ ರಕ್ಷಣಾಪಡೆ ಸಿಬ್ಬಂದಿ ಅಮಾನವೀಯವಾಗಿ ವರ್ತಿಸಿದ್ದಾರೆ. ಆಕೆಯ ಆರೋಗ್ಯ ಸಂಪೂರ್ಣವಾಗಿ ಹದಗೆಟ್ಟ ಕಾರಣ ನಂತರ ಆಕೆಯನ್ನು ಸರ್ಕಾರಿ ಆಸ್ಪತ್ರೆಗೆ ಸೇರಿಸಲಾಗಿದೆ. ಈ ಬಾಲಕಿಯ ಮೇಲೆ ನಡೆದ ಅಮಾನುಷ ಹಿಂಸೆಯನ್ನು ಅಮ್ನೆಸ್ಟಿ ಇಂಟರ್ ನ್ಯಾಷನಲ್ ಹಾಗೂ ಸ್ಥಳೀಯ ಮಕ್ಕಳ ಹಕ್ಕುಗಳ ವೇದಿಕೆಯವರು ವ್ಯಾಪಕವಾದ ಪ್ರತಿಭಟನೆಯನ್ನು ನಡೆಸಿ, ತನಿಖೆಗೆ ಒತ್ತಾಯಿಸಿವೆ. ಮಣಿಪುರದಲ್ಲಿ ರಕ್ಷಣಾ ಪಡೆಗಳು ಅಮಾಯಕರ ಮೇಲೆ, ವಿಶೇಷವಾಗಿ ಮಕ್ಕಳು ಹಾಗೂ ಮಹಿಳೆಯರ ಮೇಲೆ ಸತತವಾಗಿ ನಡೆಸುತ್ತಿರುವ ಅಮಾನುಷ ಹಿಂಸೆ, ದೌರ್ಜನ್ಯ ಖಂಡನೀಯವಾದುದು. ಇಂಥ ಸಂಗತಿಗಳು ಕೇವಲ ಸುದ್ದಿಯ ನೆಲೆಯಲ್ಲಿ ನಿಂತು ಹೋಗದೆ ಸಾರ್ವಜನಿಕರು ಸಂಬಂಧಪಟ್ಟವರಿಗೆ ತಟ್ಟುವಂತೆ ಪ್ರತಿಭಟಿಸುವ ಅಗತ್ಯವಿದೆ.

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಮೂಲಕ ನೀಡುವ 'ಮಾತೋಶ್ರೀ ರತ್ನಮ್ಮ ಹೆಗಡೆ ಮಹಿಳಾ ಗ್ರಂಥ ಬಹುಮಾನ'ವನ್ನು ಗುಲಬರ್ಗಾದ ಸಂಧ್ಯಾ ಹೊನಗುಂಟಿಕರ್ ('ಹರಿದ ಹಾಸಿಗೆ ಹಂಬಲ' ಕಥಾಸಂಕಲನ) ಹಾಸನದ ಜಾನಕಿ ಸುಂದರೇಶ್ ('ಮದ್ದಾನೆಗಳು' ಕಾದಂಬರಿ) ಧಾರವಾಡದ ಡಾ. ವಿನಯಾ ('ಊರ ಒಳಗಿನ ಬಯಲು' ಕಥಾಸಂಕಲನ) ಅವರು ಪಡೆದಿದ್ದಾರೆ. ಇವರಿಗೆಲ್ಲ ಮಾನಸದ ಅಭಿನಂದನೆಗಳು.

❑

# "ಮಹಿಳಾ ವಿಮರ್ಶೆ ಮತ್ತು ಸಂಶೋಧನೆ": ಲೇಖನ ಕುರಿತ ಸಂವಾದ

## ಒಂದು ಸಾರ ವಿಶ್ಲೇಷಣೆ

*ಬಿ.ಎನ್. ಸುಮಿತ್ರಾಬಾಯಿ*

*ಸಾಂಸ್ಕೃತಿಕವಾದ ಮತ್ತು ಸಮಕಾಲೀನವೂ ಆಗಿರುವ, ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂಥ ವಿಷಯಗಳನ್ನು ವಿದ್ವಾಂಸರ ನಡುವೆ ಗಂಭೀರ ಚರ್ಚೆಗೆ ಒದಗುವಂತೆ ಮಾಡುವುದು ಮತ್ತು ಅಂತಹ ಚರ್ಚೆಯನ್ನು ದಾಖಲುಗೊಳಿಸುವುದು 'ನಮ್ಮ ಮಾನಸ' ಬಳಗದ ಬಹುದಿನದ ಆಶಯ. ಈ ನಿಟ್ಟಿನ ಮೊದಲಯತ್ನವಾಗಿ ಪ್ರೀತಿಶುಭಚಂದ್ರರ "ಮಹಿಳಾ ವಿಮರ್ಶೆ ಮತ್ತು ಸಂಶೋಧನೆ" ಎಂಬ ಲೇಖನವನ್ನು ಕುರಿತಂತೆ ಕಳೆದ ಜೂನ್ 21, 2009ರಂದು ಒಂದು ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.*

*ಸುಮಾರು 15 ಜನ ವಿವಿಧ ಕ್ಷೇತ್ರಗಳ ಚಿಂತನಶೀಲರಿಗೆ ಒಂದು ತಿಂಗಳು ಮೊದಲು ಆ ಪ್ರಬಂಧದ ಪ್ರತಿಗಳನ್ನು ಓದಿಗಾಗಿ ಒದಗಿಸಲಾಗಿತ್ತು. ಸಂವಾದದ ಕಾರ್ಯಕ್ರಮಕ್ಕೆ ಹೀಗೆ ಪೂರ್ವ ಸಿದ್ಧತೆಯೊಂದಿಗೆ ಬಂದು ಭಾಗವಹಿಸಿದವರಲ್ಲಿ ಪ್ರತಿಭಾ ನಂದಕುಮಾರ್, ಎನ್.ಎಸ್. ಶ್ರೀಧರಮೂರ್ತಿ, ಶಿವಸುಂದರ್, ಕೆ. ಆಶಾದೇವಿ, ಸಿ.ಜಿ. ಮಂಜುಳಾ, ಎನ್. ವಿದ್ಯಾಶಂಕರ್, ಎನ್. ಮನುಚಕ್ರವರ್ತಿ ಹಾಗೂ ಎಚ್.ಎಸ್. ರಾಜೇಶ್ವರಿ ಪ್ರಮುಖರು. ಪ್ರಬಂಧದ ಲೇಖಕಿ ಪ್ರೀತಿಶುಭಚಂದ್ರರೊಂದಿಗೆ ಇವರೆಲ್ಲ ನಡೆಸಿಕೊಟ್ಟ ಸಂವಾದದಲ್ಲಿ ಮಾನಸ ಬಳಗದ ಡಾ॥ ವಿಜಯಾ, ಎಚ್.ಎಸ್. ಚಂಪಾವತಿ, ಎಚ್.ಎಸ್. ಪುಷ್ಪಾ ಮತ್ತು ಬಿ.ಎನ್. ಸುಮಿತ್ರಾಬಾಯಿ ಅನೌಪಚಾರಿಕವಾಗಿ ಭಾಗವಹಿಸಿದರು. ಸುಮಾರು ಎರಡು ಗಂಟೆಗಳ ಕಾಲ ನಡೆದ ಈ ಸಂವಾದವನ್ನು ಧ್ವನಿ ಮುದ್ರಿಸಲಾಗಿದೆ. ಮುಂದೆಯೂ ಕಾಲಕಾಲಕ್ಕೆ ಇಂತಹ ಸಂವಾದಗಳನ್ನು ನಡೆಸಿ ದಾಖಲಿಸುವ, ಅವಕಾಶ ದೊರೆತಾಗ ಅವೆಲ್ಲವನ್ನೂ ಒಗ್ಗೂಡಿಸಿ ಪ್ರಕಟಿಸುವ ಅಪೇಕ್ಷೆ ನಮ್ಮದಾಗಿದೆ. ಸಧ್ಯಕ್ಕೆ ಆ ಒಟ್ಟು ಚರ್ಚೆಯ ಸಾರರೂಪದ ವಿಶ್ಲೇಷಣೆಯನ್ನು ಇಲ್ಲಿ ನಿಡುತ್ತಿದ್ದೇವೆ. ಪ್ರೀತಿ ಶುಭಚಂದ್ರರ ಆ ಲೇಖನವು 'ನಮ್ಮ ಮಾನಸ'ದ ಕಳೆದ 3–4 ಸಂಚಿಕೆಗಳಲ್ಲಿ ಪ್ರಕಟವಾಗಿದ್ದುದನ್ನು ಓದುಗರು ಗಮನಿಸಿರುತ್ತಾರೆಂದು ಭಾವಿಸಿ, ಈ ಟಿಪ್ಪಣಿ ಅದಕ್ಕೆ ಪೂರಕವಾಗಿ ಓದುವಿಕೆಗೆ ಒದಗೀತು ಎಂದು ಆಶಿಸುತ್ತೇವೆ.*

*–ಸಂ.*


**ಕ**ಳೆದ ಎರಡೂವರೆ ದಶಕಗಳಲ್ಲಿ ಕನ್ನಡದಲ್ಲಿ ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯು ಸಾಕಷ್ಟು ಬೆಳೆದಿದ್ದು ಇದೀಗ ಅದು ಶ್ರೇಣೀಕೃತ ಲಿಂಗರಾಜಕಾರಣದ ಸಂಸ್ಕೃತಿಯ ಮೀಮಾಂಸೆಯಾಗಿ ಖಚಿತವಾದ ಸೈದ್ಧಾಂತಿಕತೆಯನ್ನು ಕಟ್ಟಿಕೊಳ್ಳುವತ್ತ ಹೊರಳುತ್ತಿದೆ. ಎರಡನೆಯ ಪೀಳಿಗೆಯ ಸ್ತ್ರೀವಾದಿ ವಿಮರ್ಶಕರೆದುರು ಹೀಗೆ ಸೈದ್ಧಾಂತಿಕತೆಯೊಂದನ್ನು ಸ್ಪಷ್ಟವಾಗಿ ರೂಪಿಸಬೇಕಾದ ಜವಾಬ್ದಾರಿ ಇದೆ. ಜಾಗತೀಕರಣಕ್ಕೆ ಒಳಪಟ್ಟಿರುವ ಇಂದಿನ ಸಾಂಸ್ಕೃತಿಕ ಪರಿಸರದಲ್ಲಿ ಈ ವಿಮರ್ಶಕರೂ ಸ್ವತಃ ಅನೇಕ ಸವಾಲುಗಳನ್ನು ಪ್ರತಿಷ್ಠಿತ ಪರಂಪರೆಯಿಂದ ಎದುರಿಸುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ಪ್ರೀತಿಶುಭಚಂದ್ರರ ಪ್ರಸ್ತುತ ಲೇಖನವು ಮಹಿಳೆಯರ ಅಭಿವ್ಯಕ್ತಿಯು ಸಾಹಿತ್ಯ, ಕಲೆ, ವಿಮರ್ಶೆ, ಪತ್ರಿಕೋದ್ಯಮ, ಸಂಶೋಧನೆ ಮುಂತಾದ ಯಾವ ಕ್ಷೇತ್ರದಲ್ಲೇ ಇರಲಿ, ಅದಕ್ಕೆ ಪ್ರತಿಷ್ಠಿತ ಪುರುಷ ರಚಿತ ವ್ಯವಸ್ಥೆಯ ಲಿಂಗರಾಜಕಾರಣದ ಧೋರಣೆ, ನಂಬಿಕೆ, ಮೌಲ್ಯಗಳಿಂದಾಗಿ ಹಲವು ಸವಾಲುಗಳು ಎದುರಾಗುವುದನ್ನು ಚರ್ಚೆಯ ಮುನ್ನೆಲೆಗೆ ತರುತ್ತದೆ ಎನ್ನಬಹುದು. ಮಹಿಳೆಯರ ಪ್ರತಿಭೆ, ಸಾಮರ್ಥ್ಯ ಹಾಗೂ ಕಲಾಸೃಷ್ಟಿಗಳನ್ನು ಲಿಂಗರಾಜಕಾರಣದ ವ್ಯವಸ್ಥೆಯು ಎಲ್ಲ ಕಾಲದಲ್ಲೂ ಅವಜ್ಞೆ, ನಿರ್ಲಕ್ಷ್ಯ, ಉದಾಸೀನತೆ, ತಿರಸ್ಕಾರಗಳಿಂದ ಬದಿಗೆ ಸರಿಸಿಬಿಡುವುದನ್ನು ಲೇಖಕಿ ಚಾರಿತ್ರಿಕವಾಗಿ ಇಲ್ಲಿ ಗುರುತಿಸಲೆತ್ನಿಸುತ್ತಾರೆ. ಪಿತೃಪ್ರಧಾನ ವ್ಯವಸ್ಥೆ ಸ್ಥಿರವಾದದ್ದಲ್ಲ. ಆರ್ಥಿಕ, ರಾಜಕೀಯ, ಸಾಮಾಜಿಕ ಪರಿಸರಗಳು ಬದಲಾದಂತೆ ಅದೂ ಚಲಿಸುತ್ತ, ಹೊಸ ಪರಿಸರದಲ್ಲಿ ಹೊಸ ರೂಪಗಳಿಂದ ತನ್ನನ್ನು ಸ್ಥಾಪಿಸಿಕೊಂಡು ಬಿಡಬಲ್ಲದು. ಆದ್ದರಿಂದ ಅಭಿವ್ಯಕ್ತಿಯ ನೆಲೆಯಲ್ಲಿ ಮಹಿಳೆಯರು ಎದುರಿಸುವ ಪ್ರಶ್ನೆಗಳ ಹೊರ ರೂಪಗಳು ಭಿನ್ನವಾಗಿದ್ದಂತೆ ಕಾಣಿಸಿದರೂ ಒಳಗಿನ ಸಾರದಲ್ಲಿ ಅಲ್ಲಿರುವುದು ತನ್ನ ನಿಜವನ್ನು ಹೇಗೆ ಸ್ಥಾಪಿಸಿ, ಸಮರ್ಥಿಸಿಕೊಳ್ಳಬೇಕು ಎಂಬುದೇ ಆಗಿರುತ್ತದೆ.

ಉದಾಹರಣೆಗೆ, ಕಳೆದ ಶತಮಾನದ ಆರಂಭದಲ್ಲಿ ಸೃಜನಶೀಲ ಕಲೆಗಾರಿಕೆ ಹಾಗೂ ಭಾಷೆಯ ಬಳಕೆಗೆ ಸಂಬಂಧಿಸಿದಂತೆ ನಂಜನಗೂಡು ತಿರುಮಲಾಂಬಾ ಅವರು ಮಾಸ್ತಿ ಮತ್ತು ಅವರ ಸಮಕಾಲೀನ ವಿಮರ್ಶಕರಿಂದ ಬದಿಗೆ ಒತ್ತರಿಸಲ್ಪಟ್ಟಿದ್ದರೆ, ಅವರ ನಂತರದ ಪೀಳಿಗೆಯಲ್ಲೂ ಆ ಸಮಸ್ಯೆಯೇನೂ ಇಲ್ಲವಾಗಲಿಲ್ಲ. ಅಲ್ಲಲ್ಲಿ ಅಷ್ಟಿಷ್ಟು ಮಹಿಳಾ ಬರಹಗಾರಿಕೆಗೆ ಶಾಭಾಸ್‌ಗಿರಿ ದೊರೆತಹಾಗಿದ್ದರೂ ಅದರ ಹಿಂದೆ ಮಹಿಳೆಯೆಂಬ ರಿಯಾಯ್ತಿಯ ಔದಾರ್ಯ ಇರುತ್ತಿದ್ದುದನ್ನು ಸರಸ್ವತಿಬಾಯಿ ರಾಜವಾಡೆ, ಶ್ಯಾಮಲಾದೇವಿ, ಕೊಡಗಿನ ಗೌರಮ್ಮ ಕೂಡ ಅಸಮಾಧಾನದಿಂದಲೇ ದಾಖಲಿಸಿರುತ್ತಾರೆ. ಪತ್ರಕರ್ತೆಯರಲ್ಲಿ

ಮೊದಲಿಗರಾಗಿ ತಿರುಮಲಾಂಬಾ ಎದುರಿಸಿದ ಅವಜ್ಞೆ, ಟೀಕೆ, ಅನುಮಾನದ ಅವಮಾನಗಳನ್ನು ಆ ಶತಮಾನದ ಉತ್ತರಾರ್ಧದಲ್ಲಿ ಇಳಾ ವಿಜಯಾರಂಥವರೂ ಅನುಭವಿಸಿರಬಹುದು. ಈ ಅನುಭವಗಳು ದಾಖಲು ಆಗಿರಲಿ, ಆಗದಿರಲಿ, ಅವು ಲಿಂಗರಾಜಕಾರಣದ ನಿರಂತರತೆ ಯನ್ನು ಬೆರಳು ಮಾಡುತ್ತವೆ. ಅಂದರೆ, ಪ್ರತಿಷ್ಠಿತ ಪುರುಷಾಹಮಿಕೆಯ ಪರಂಪರೆಯ ಮಾನದಂಡಗಳು ಮಹಿಳೆಯರ ಅರ್ಹತೆ, ಸಾಮರ್ಥ್ಯ ಗಳನ್ನು ಕುರಿತು ನೀಡುವ ತೀರ್ಪುಗಳಿಂದಾಗಿ ಮಹಿಳಾಭಿವ್ಯಕ್ತಿ ಆ ಪರಂಪರೆಯಲ್ಲಿ 'ಅದೃಶ್ಯ'ವಾಗಿಸಲ್ಪಡುವ ಬಗೆಯನ್ನು ಈ ಲೇಖನವು ಚರ್ಚಿಸಲು ಯತ್ನಿಸುತ್ತದೆ. ವಾಸ್ತವದಲ್ಲಿ ಈ ಅಂಶದತ್ತ ಸಂವಾದಕಾರರ ಚರ್ಚೆಯು ಮುಖ್ಯವಾಗಿ ನಡೆಯಬಹುದು ಎಂಬುದು ನಮ್ಮ ನಿರೀಕ್ಷೆ ಯಾಗಿತ್ತು. ಹಾಗಾಗಲಿಲ್ಲ. ಚಿಂತಕರು ತಮ್ಮದೇ ನಂಬಿಕೆಗಳ, ನಿರೀಕ್ಷೆಗಳ ಮೂಲಕ ಪ್ರೀತಿಯವರ ಲೇಖನವನ್ನು ಅರ್ಥೈಸಿಕೊಂಡು ವ್ಯಾಖ್ಯಾನಿಸು ತ್ತಿದ್ದುದರಿಂದ ಕುತೂಹಲಕರವಾದ, ಇನ್ನಷ್ಟು ವೈವಿಧ್ಯಮಯ ವಿಷಯಗಳು ಅಲ್ಲಿ ಚರ್ಚಿತವಾದವು.


ಲೇಖನದ ಸೈದ್ಧಾಂತಿಕ ಚೌಕಟ್ಟನ್ನು ಕುರಿತಂತೆ ಯಾರದೂ ಆಕ್ಷೇಪ ಇರಲಿಲ್ಲ. (ಮನು ಚಕ್ರವರ್ತಿಯವರ ಒಂದು ಪ್ರಶ್ನೆ ಮಾತ್ರ ಈ ವಿಷಯದಲ್ಲಿ ಕೊಂಚ ಭಿನ್ನವಾಗಿತ್ತು. ಅದನ್ನು ಮುಂದೆ ಪ್ರಸ್ತಾಪಿಸ ಲಾಗುವುದು). ಚರ್ಚೆಯನ್ನು ಆರಂಭಿಸಿದ ಶ್ರೀಧರಮೂರ್ತಿಯವರು ಹಲವು ಪ್ರಶ್ನೆಗಳನ್ನು ಮುಂದಿಟ್ಟು ತಮ್ಮ ವಿಚಾರವನ್ನು ಪ್ರತಿಪಾದಿಸಿದರು. ಮುಖ್ಯವಾಗಿ ಅವರ ಆಕ್ಷೇಪಣೆಯಿದ್ದದ್ದು :

1. ಪ್ರೀತಿಯವರು ತಮ್ಮ ವಿಚಾರಗಳ ಸಮರ್ಥನೆಗೆ ಆರಿಸಿಕೊಳ್ಳುವ ಉದಾಹರಣೆ ಪಠ್ಯಗಳು ಅಷ್ಟು ಸಶಕ್ತವಾದವುಗಳಾಗಿಲ್ಲ; ಅವುಗಳಿಗಿಂತ ಹೆಚ್ಚು ಬಲವಾಗಿ ಅವೇ ಪ್ರಶ್ನೆಗಳನ್ನು ಕೇಳುವಂಥ ಬೇರೆ ಕೃತಿಗಳು ಲಭ್ಯವಿದ್ದರೂ ಏಕೆ ಇಂಥ ಆಯ್ಕೆ? ಹಾಗೂ



2. ಬೇರೆಯವರ ಅಭಿಪ್ರಾಯ/ ವಿಚಾರಗಳನ್ನು ಅವಿಮರ್ಶಿತವಾಗಿ/ ತಮ್ಮದೇ ಎಂಬ ಹಾಗೆ Sweeping ಆದ ರೀತಿಯಲ್ಲಿ ಬಳಸಿರುವುದು ಸರಿಯಲ್ಲ ಎಂಬುದಾಗಿತ್ತು. ವೇಶ್ಯಾಸಮಸ್ಯೆ ಯನ್ನು ಸಾಹಿತ್ಯದಲ್ಲಿ ತರುವ ಯತ್ನದಲ್ಲಿ ಪ್ರಗತಿಶೀಲರ ವಾಸ್ತವವಾದಿ ಪ್ರಗತಿಪರ ಸಿದ್ಧಾಂತಕ್ಕೂ, ನಿಜವಾಗಿ ಆ ವಸ್ತುವಿನ ನಿರ್ವಹಣಾ ಕ್ರಮ ಮತ್ತು ಭಾಷೆಗಳಿಂದ ಹುಟ್ಟುವ ಅರ್ಥಕ್ಕೂ ಸ್ಪಷ್ಟವಾದ ವಿರೋಧವಿದೆ. ಬರಹದೊಳಗೆ ಸ್ತ್ರೀದೇಹ, ಸ್ತ್ರೀಯ ಲೈಂಗಿಕಾನುಭವದ ಬಗ್ಗೆ ಪುರುಷ ಮನಸ್ಸಿನ ನಿರೀಕ್ಷೆಗಳೇ ರೋಚಕವಾಗಿ sexist ಆಗಿ ಬಿತ್ತರಗೊಳ್ಳುತ್ತವೆ. ಇದಕ್ಕಿಂತ ಭಿನ್ನವಾಗಿ ಮಹಿಳೆಯಾಗಿ ಇದೇ ವಸ್ತುವನ್ನು ನಿರ್ವಹಿಸಲು 'ಹೂವು-ಹಣ್ಣು' ಕಾದಂಬರಿಯಲ್ಲಿ ತ್ರಿವೇಣಿ ಅನುಸರಿಸಿರುವ ವಿಧಾನ ಹೇಗೆ sexist ಆಗದ ಹಾಗೆ ಎಚ್ಚರವುಳ್ಳದ್ದಾಗಿದೆ ಎಂಬುದನ್ನು ಪ್ರೀತಿಯವರ ಲೇಖನವು ಚರ್ಚೆಗೆ ತರುತ್ತದೆ. ಆದರೆ ತ್ರಿವೇಣಿ ಕೂಡ ಆ ಕಾಲದ ಎಲ್ಲಾ ಮಹಿಳಾ ಬರಹಗಾರರಂತೆ ಕಾದಂಬರಿಗಳಲ್ಲಿ, ಮಧ್ಯಮ ವರ್ಗಕ್ಕೆ ಪ್ರಿಯವಾಗುವಂಥ Syndrella Myth ಅನ್ನೇ ಸೃಷ್ಟಿಸಿದ್ದು. 'ಹೂ-ಹಣ್ಣು' ಕೂಡ ಕಪ್ಪುಬಿಳುಪಿನ ಚಿತ್ರಣವೇ ಆಗಿದೆ. ಆದ್ದರಿಂದ ತ್ರಿವೇಣಿಯವರ ಅಭಿವ್ಯಕ್ತಿಯು sexist ಅಲ್ಲ ಅನ್ನುವುದಾದರೆ, ಜನಪ್ರಿಯ ಲೇಖಕಿಯರಾದ ರಾಧಾದೇವಿ, ಸಾಯಿಸುತೆಯಂಥವರ ಕೃತಿಗಳಲ್ಲಿನ ಸೈದ್ಧಾಂತಿಕತೆ ಏನು ಎಂಬುದನ್ನು ಗಮನಿಸಬಹುದಿತ್ತು ಎಂಬುದು ಶ್ರೀಧರ್ ಅವರ ವಿಚಾರ.

ಪ್ರೀತಿಶುಭಚಂದ್ರರ ಲೇಖನವು ಚರ್ಚೆಗೆ ತರುವ ಮುಖ್ಯ ವಿಚಾರಗಳಲ್ಲಿ ಒಂದು ಮಹಿಳೆಯ ಲೈಂಗಿಕಾನುಭವ ಮತ್ತು ಭಾಷೆಯಲ್ಲಿ ಅದರ ಅಭಿವ್ಯಕ್ತಿಯ ಪ್ರಶ್ನೆ. ಪ್ರಾಚೀನ ಕಾಲದಲ್ಲಿ ಮಹಿಳೆಯ ಲೈಂಗಿಕತೆ ಎಂಬುದನ್ನು ವೇಶ್ಯಾತನಕ್ಕಿಂತ ಪ್ರತ್ಯೇಕವೆಂದು ನೋಡುತ್ತಲೇ ಇರಲಿಲ್ಲ. ಆದರೆ ಆಧುನಿಕತೆಯ ಪ್ರವೇಶವಾದಾಗ ನವೋದಯ ಸಾಹಿತ್ಯದಲ್ಲಿ, ವಿಶೇಷವಾಗಿ ಕಾವ್ಯದಲ್ಲಿ 'ಶುದ್ಧಪ್ರೇಮ'ದ ಪರಿಕಲ್ಪನೆಯೊಂದು ಕಟ್ಟಲ್ಪಟ್ಟಿತು. ದಾಂಪತ್ಯ – ಪ್ರೇಮ ಮತ್ತು ನೈತಿಕ ಸಭ್ಯತೆಗಳೊಂದಿಗೆ ಈ ಗ್ರಹಿಕೆ ಬೆರೆತುಕೊಂಡಿದ್ದು, ಇಂತಹ ನೈತಿಕ ಶುದ್ಧತೆಯ ನೆಲೆಯಿಂದ ಮಾಸ್ತಿಯವರು ತಿರುಮಲಾಂಬಾ ಅವರ ಕೃತಿಗಳಲ್ಲಿನ 'ಶೃಂಗಾರ' ಸನ್ನಿವೇಶಗಳ ಸಭ್ಯಾಸಭ್ಯತೆ ಯನ್ನು ವಿಶ್ಲೇಷಿಸಿದ್ದುದು ಇದೀಗ ಚರಿತ್ರೆ ಯಾಗಿದೆ. ಆದರೆ ಪ್ರಗತಿಶೀಲ ಲೇಖಕರು ವಾಸ್ತವವಾದ ಮತ್ತು ಪ್ರಗತಿಪರತೆಯ ಬಲವಾದ ಘೋಷಣೆಯೊಂದಿಗೆ ವೇಶ್ಯಾಸಮಸ್ಯೆ ಚಿತ್ರಿಸ ಹೊರಟವರು. ಆದರೂ ಪುರುಷರ ಪ್ರತಿಷ್ಠಿತ, ರೂಢಿಗತ ನೆಲೆಯಿಂದ ಸ್ತ್ರೀಯ ದೇಹವನ್ನೂ, ಅವಳ ಲೈಂಗಿಕಾನುಭವವನ್ನೂ ಗಂಡುದೃಷ್ಟಿಗೆ ಹೊರನಿಂತು ಚಿತ್ರಿಸುವುದು



ಅವರಿಗೆ ಸಾಧ್ಯ ವಾಗಲಿಲ್ಲ ಎಂಬ ವಿಷಯ ಚರ್ಚೆಗೆ ಬಂದಾಗ ಮನುಚಕ್ರವರ್ತಿ ಯವರು ತಮ್ಮನ್ನು ತುಂಬಸಲ ಕಾಡಿರುವ ಪ್ರಶ್ನೆಯೊಂದನ್ನು ಮುಂದಿಟ್ಟರು. ಶೃಂಗಾರ ವರ್ಣನೆ, ಸ್ತ್ರೀಯ ಲೈಂಗಿಕಾನುಭವದ ನಿರೂಪಣೆ – ಅದು ಪುರುಷರಿಂದ ರಚಿತವಾದ ಕೃತಿಯಾಗಿದ್ದಾಗ ಸಾಮಾನ್ಯ ವಾದ ಜನಪ್ರಿಯ ಸ್ತರದಲ್ಲಿ 'ಸ್ತ್ರೀದೇಹದತ್ತ ಗಂಡಿನ ದೃಷ್ಟಿ' ಎಂದು ಅಥವಾ ದೇಹದ ಶೋಷಣಾತ್ಮಕ ವರ್ಣನೆ ಎಂದೋ ಆಕ್ಷೇಪಗಳು ಏಳುತ್ತವೆ. ಆದರೆ ಸೂಕ್ಷ್ಮವಾಗಿ ಮಾತನಾಡುವುದಾದರೆ, ಮೀಮಾಂಸೆ ಮಾಡಿ 'ಹೆಣ್ಣಿನ ಲೈಂಗಿಕ ಶೋಷಣೆ' ಬಗ್ಗೆ ಮಾತನಾಡುವುದು ಎಷ್ಟರ ಮಟ್ಟಿಗೆ ಸೂಕ್ಷ್ಮ? ದೇಹವನ್ನು ವೈಭವೀಕರಿಸಿ ಬರೆದರೆ ಹೆಣ್ಣನ್ನು ಭೋಗವಸ್ತುವಾಗಿ ಬಳಸುತ್ತಿದ್ದಾನೆ ಪುರುಷ ಅನ್ನಲಾಗುತ್ತದೆ. ಆದರೆ ಹೆಂಗಸರೇ ತಮ್ಮ ಲೈಂಗಿಕ ಅನುಭವವನ್ನೂ ದೈಹಿಕ ಸಂವೇದನೆಯನ್ನೂ ತೀವ್ರವಾಗಿ ವಿವರಿಸಿದಾಗ ಉದಾಹರಣೆಗೆ Black Women ಬರಹದಲ್ಲಿ ಇಂಥ shocking ಆದ ರೀತಿಯಲ್ಲಿ ತಮ್ಮನ್ನೂ, ತಮ್ಮ ಅನುಭವವನ್ನೂ ಹೇಳಿಕೊಳ್ಳುವುದನ್ನು ಕಾಣಬಹುದು – ಇಂಥಾದ್ದನ್ನು ಯಾವ ಮೀಮಾಂಸೆಗೆ ಒಳಪಡಿಸುತ್ತೇವೆ? ಅದು sexist ಹೌದೆ ಅಲ್ಲವೆ? ತುಂಬ spiritualize ಮಾಡಿದರೂ ಸಮಸ್ಯೆ, eroticize ಮಾಡಿದರೂ ಸಮಸ್ಯೆಯೇ ಆಗುತ್ತದೆ. ಸೈದ್ಧಾಂತಿಕ ನೆಲೆಯಲ್ಲೇ ಒಂದು ಸಾಹಿತ್ಯ ಕೃತಿಯನ್ನು ಓದುವುದು ಸಾಧ್ಯವೆ? ಸಾಹಿತ್ಯಕೃತಿಯು ಬೇರೆ ರೀತಿಯ ಓದುವಿಕೆಯನ್ನು ಅಪೇಕ್ಷಿಸುವುದಿಲ್ಲವೇ? Counter Reading ಎಂಬ ಬಗ್ಗೆ ಎಲ್ಲಾ ವಿಮರ್ಶೆಯೂ ಇನ್ನೂ ಆಳವಾಗಿ ವಿಚಾರ



ಮಾಡಬೇಕಿದೆ. ಸೈದ್ಧಾಂತಿಕತೆ ಮತ್ತು ಕೃತಿಯ ಸೂಕ್ಷ್ಮವಾದ ಓದುವಿಕೆ ಎರಡೂ ಮೇಳೈಸಿರುವಂಥ ನಿಟ್ಟಿನಲ್ಲಿ ಸ್ತ್ರೀವಾದಿ ವಿಮರ್ಶೆ ಬಹಳ Crucial Demands ಅನ್ನು ಮುಂದಿಟ್ಟಿದೆ. ನಿರ್ಭಿಡೆಯಿಂದ ಶೃಂಗಾರ, ತಾಯ್ತನ, ವಾತ್ಸಲ್ಯ, ಬಾಂಧವ್ಯ ಎಲ್ಲವನ್ನೂ ಒಳಗೊಂಡೇ ಹೇಳಲು ಸಾಧ್ಯವಾದಲ್ಲಿ ಅದನ್ನು ದೇಹ – ಮನಸ್ಸುಗಳ ಧೃವೀಕೃತ ಸೈದ್ಧಾಂತಿಕತೆಯಿಂದ ವಿವರಿಸಲು ಸಾಧ್ಯವೆ? ಎನ್ನುವುದು ಮನು ಅವರು ಎತ್ತಿದ ಪ್ರಶ್ನೆಯಾಗಿತ್ತು.

ಚರಿತ್ರೆಯಲ್ಲಿ ಹುದುಗಿ ಹೋಗಿರುವ ದೀರ್ಘವಾದ ರಹಸ್ಯ ವೊಂದನ್ನು ಹೆಕ್ಕಿ ತೆಗೆಯುವಾಗ ನಾವು ನೈತಿಕ ನೆಲೆಯಲ್ಲಿ ಹೇಗೆ ಅದನ್ನು ಸಂದರ್ಭೀಕರಿಸುತ್ತೇವೆ ಎಂಬುದೂ ಮುಖ್ಯವಾಗುತ್ತದೆ. ಗಾಯತ್ರಿ ಸ್ಪಿವಾಕ್ ಅವರು ಜೂಲಿಯಾ ಕ್ರಿಸ್ತೇವಾ ಎಂಬ ಚೈನೀ ಮಹಿಳೆಯು ಲೈಂಗಿಕ ಶೋಷಣೆಯ ಬಗ್ಗೆ ಬರೆದುದನ್ನು ಸೈದ್ಧಾಂತಿಕವಾಗಿ ಪ್ರಶ್ನಿಸುತ್ತಾರೆ. ಸ್ವತಂತ್ರ ಭಾರತದಲ್ಲಿ ಬದುಕುತ್ತಿದ್ದರೂ ಇಬ್ಬರು ಧೋಬಿ ಹೆಣ್ಣುಗಳು East India Companyಯ ನೀರಿನ ಬಗ್ಗೆಯೇ ಇನ್ನೂ ಮಾತನಾಡುವುದನ್ನು ಉಲ್ಲೇಖಿಸಿ ಅವರ ಮನಸ್ಸು ಇನ್ನೂ 1815ರಲ್ಲೇ ಉಳಿದಿರುವುದರತ್ತ ಗಮನ ಸೆಳೆಯುತ್ತಾರೆ. ಆದ್ದರಿಂದ ಇಂದಿನ ಸೈದ್ಧಾಂತಿಕತೆಯ ದೃಷ್ಟಿಯಿಂದ ಮಹಿಳೆಯರನ್ನು ಸಂದರ್ಭೀಕರಿಸು ವುದರಲ್ಲಿ ದೇಶ, ಕಾಲ, ಅಂದಿನ ಸಮಸ್ಯೆ, ಅನುಭವಗಳ ಪರಿಚಯ ವಿಲ್ಲದೆಯೇ ಹೊರಡುವ ತೀರ್ಮಾನಗಳು ಎಷ್ಟರಮಟ್ಟಿಗೆ ನ್ಯಾಯಯುತ ವಾಗಿರಬಲ್ಲವು? ಎಂಬ ಪ್ರಶ್ನೆಯನ್ನು ಸ್ಪಿವಾಕ್ ಕೇಳುತ್ತಾರೆ. ಆದರೆ ಅದೇ ಸ್ಪಿವಾಕ್ ಮಹಾಶ್ವೇತಾದೇವಿಯವರ ದೋಪ್ತಿ, ಸ್ತನದಾಯಿನಿ ಕಥೆಗಳನ್ನು ದೇಶದ ಮೇಲಾದ ವಸಾಹತುಶಾಹಿ ಪ್ರಭಾವ, Nation, Nationalityಗಳ ಮೂಲಕ 'ಸರಿ'ಯಾಗಿ ಸೈದ್ಧಾಂತಿಕವಾಗಿ ವಿಶ್ಲೇಷಿಸುತ್ತಾರಾದರೂ ಆಕೆ ಕೇಳದೆ ಇರುವ ಪ್ರಶ್ನೆಯೂ ಇದೆ. ದೋಪ್ತಿ ಒಬ್ಬ ಬುಡಕಟ್ಟು ನಕ್ಸಲೈಟ್ ಮಹಿಳೆ. Naxalite ಚಳವಳಿ, Naxalite ಮಹಿಳೆಯ ನೆಲೆಗಳ ಅರಿವಿದ್ದರೂ ಅದರಿಂದ ದೇಶದ ಮೇಲಾಗುವ ಪ್ರಭಾವ ಪರಿಣಾಮಗಳೇನು ಎಂಬುದನ್ನು ಸ್ತ್ರೀವಾದಿಗಳಾರೂ ಏಕೆ ಕೇಳುವುದಿಲ್ಲ? ಮಹಿಳೆಯರ ಸಂದರ್ಭದಲ್ಲಿ ಬಹುಮುಖ್ಯವಾಗಿ ಕೇಳಬೇಕಾದ ರಾಜಕೀಯ ಪ್ರಶ್ನೆ ಇದು – ಎಂಬುದನ್ನು ಮನು ಅವರು ಮುಂದಿಟ್ಟರು.

ಒಬ್ಬ ಕವಿಯಾಗಿ ಪ್ರತಿಭಾ ನಂದಕುಮಾರ್ ತಮ್ಮ ವಿಚಾರಗಳನ್ನು ಐದು ಅಂಶಗಳಾಗಿ ವಿಭಜಿಸಿ ಮುಂದಿಟ್ಟರು.



1. ಮುಖ್ಯ ಪರಂಪರೆಯಲ್ಲಿ ಸ್ತ್ರೀ ಸೇರ್ಪಡೆಗೆ ಇರುವಂಥದೇ ಅಡ್ಡಿಗಳ ರೀತಿಯಲ್ಲೇ ಮಹಿಳಾ ಪರಂಪರೆಯಲ್ಲಿ "ಒಳಗೊಳ್ಳದಿರುವಿಕೆ"ಯಲ್ಲೂ ಕಂಡು ಬರುತ್ತವೆ, ನಿದರ್ಶನವಾಗಿ ಸೂಸಿಥಾರು ಮತ್ತು ಲಲಿತ ಅವರು ಇಪ್ಪತ್ತು ವರ್ಷಗಳ ಹಿಂದೆ ಸಿದ್ಧಪಡಿಸಿದ Women Writing in English ಸಂಪುಟಗಳಲ್ಲಿ ಸ್ತ್ರೀವಾದಿ ಅಲ್ಲ ಎಂಬುದಕ್ಕಾಗಿ ತಮ್ಮ ಬರಹ ಸೇರ್ಪಡೆ ಆಗಲಿಲ್ಲವಂತೆ. ಆ ವೇಳೆಗೆ 3–4 ಕೃತಿಗಳು ಹೊರಬಂದಿದ್ದವು, ಒಳ್ಳೆಯ ವಿಮರ್ಶೆಯೂ ಬಂದಿತ್ತು, ಹಲವಾರು ಅವಾರ್ಡ್‌ಗಳೂ ಬಂದಿದ್ದವು. ಇಷ್ಟಿದ್ದರೂ ಹೇಗೆ ಎಂಬತ್ತರ ದಶಕದ ನಂತರದ ಲೇಖಕಿಯರ ಸಾಲಿನಲ್ಲಿ ಆ ಗ್ರಂಥದ ಸಂಪಾದಕರು ತನ್ನನ್ನು ಕೈಬಿಟ್ಟರು ಎಂಬುದು ಪ್ರತಿಭಾಗೆ ಕಾಡುವ ಪ್ರಶ್ನೆ.

2. ಸಮಕಾಲೀನ ಸಾಹಿತ್ಯದಲ್ಲಿ ಮಹಿಳೆಯ ಜಾಗವನ್ನು ಹೇಳುವ ಮುಖ್ಯ ಪರಂಪರೆಯ ಎಲ್ಲ ಚರ್ಚೆ, ವಿಮರ್ಶೆ, ಸಂವಾದಗಳೂ ಪಂಪನಿಂದ ಆರಂಭಿಸಿ, ಅಡಿಗರ ವರೆಗೆ ಕಷ್ಟಪಟ್ಟು ಬಂದು ನಿಂತುಹೋಗುತ್ತವೆ. ವಾಸ್ತವದಲ್ಲಿ 80ರ ದಶಕದಿಂದ ಈಚೆಗೆ ಮಹಿಳೆಯರ ಬರಹವೇ ಬೇಕಾದಷ್ಟು ಬದಲಾಗಿದೆ. ಅದಕ್ಕೆ ತಕ್ಕಂತೆ ಅದನ್ನು ವಿಮರ್ಶಿಸುವ ರೀತಿಯೂ ಬದಲಾಗಿದೆ. ಹಿಂದಿನ ಪುರಾಣಕಾಲದ ಮಹಿಳೆಯ ಪಾತಿವ್ರತ್ಯದ ಕಲ್ಪನೆಯಿಂದ ಇಂದಿನ ಹೆಣ್ಣು ಹೊರಬಂದಿದ್ದಾಗಿದೆ. ಇಂದಿನ ಮಹಿಳೆ ಪ್ರೇಮ, ಸಿಟ್ಟು, ಸಂಬಂಧ, ತನ್ನತನ ಎಲ್ಲವನ್ನೂ ಸಮಗ್ರವಾಗಿ ಒಳಗೊಳ್ಳುತ್ತಲೇ ಬರೆಯುತ್ತಾಳೆ. ಈ 'ಸಮಗ್ರವ್ಯಕ್ತಿ'ಯಾದ ಹೆಣ್ಣನ್ನು ಪುರುಷ ವಿಮರ್ಶಕರು Feminist ಗಾರ್ಗಿ, Feminie ಕಾತ್ಯಾಯಿನಿ ಎಂದು ಛಿದ್ರಗೊಳಿಸಿ ಮಾತ್ರ ನೋಡಲೆತ್ನಿಸುತ್ತಾರೆ. 'ಫೂಲನ್‌ದೇವಿ, ಸಂಭೋಗ, ಭಾರತೀಯ ನಾರಿ' ಎಂಬ ತಮ್ಮ ಲೇಖನದಲ್ಲಿ ಈ ವಿಚಾರಗಳನ್ನು ತಾವು ಸ್ಪಷ್ಟವಾಗಿ ಚರ್ಚಿಸಿರುವುದಾಗಿ ಪ್ರತಿಭಾ ಹೇಳಿದರು.

3. ಇಂಥ ಸ್ತ್ರೀವಾದಿ ಚರಿತ್ರೆಯನ್ನು 20 ವರ್ಷದ ಹಿಂದೆ ಬರೆಯುತ್ತಿದ್ದ ರೀತಿಯಲ್ಲೇ ಈಗಲೂ ಬರೆಯಬೇಕಾದ ಅಗತ್ಯವಿಲ್ಲ. ಅದೇ ರೀತಿ ಹನ್ನೆರಡನೆಯ ಶತಮಾನದ ಒಬ್ಬ ಅಕ್ಕಮಹಾದೇವಿ, ಇಪ್ಪತ್ತನೆಯ ಶತಮಾನದ ಪ್ರತಿಭಾ ನಂದಕುಮಾರ್‌ರ, ಮಧ್ಯೆ ಒಬ್ಬ ಸಂಚಿ ಹೊನ್ನಮ್ಮಳನ್ನು ತೂರಿಸಿ ಮೂವರನ್ನೂ ಒಂದೇ ತಕ್ಕಡಿಯಲ್ಲಿಟ್ಟು ವಿಮರ್ಶಿಸುವುದು ಎಷ್ಟರ ಮಟ್ಟಿಗೆ ಸರಿ?

4. ಈಗಿನ ಕಾಲದ 16ರ ಹುಡುಗಿಯರು ಏನು ಬರೆಯುತ್ತಿದ್ದಾರೆ? ನಾವು ಏನು ಬರೀತಿದ್ದೀವಿ ಎಂಬುದನ್ನು ಲೆಕ್ಕಕ್ಕೇ ತೆಗೆದುಕೊಳ್ಳದೆ ಯಾವುದೋ ಗಾಯತ್ರಿ ಸ್ಪಿವಾಕ್ ಬಗ್ಗೆ–ಯಾರನ್ನೋ ಮೆಚ್ಚಿಸಲಿಕ್ಕಾಗಿ–ಉಲ್ಲೇಖಿಸುವುದು ನಮ್ಮ ಮಟ್ಟಿಗೆ 'ಸಂದರ್ಭ'ದ ಹೊರಗೇ ನಮ್ಮನ್ನು ಉಳಿಸಿದಂತಲ್ಲವೆ? ಕಳೆದ ಒಂದುನೂರುವರ್ಷಗಳಲ್ಲಿ ಕನ್ನಡದಲ್ಲಿ ಮಹಿಳೆಯರ ವಿಮರ್ಶೆ ಏನಾಗಿದೆ ಎಂಬ ಚೌಕಟ್ಟು ಇಟ್ಟುಕೊಂಡು ಬರೆದಿದ್ದರೆ ಇಂದಿನ ಲೇಖಕಿಯರಿಗೆ ಕಿಂಚಿತ್ತು ನ್ಯಾಯವಾದರೂ ದೊರಕುತ್ತಿತ್ತು.

5. ಕಮಲಾ ಹಂಪನಾ ಜನ್ನನ 'ಯಶೋಧರ' ಚರಿತೆಯಲ್ಲಿ ಬರುವ ಅಮೃತಮತಿಯನ್ನು ಕನ್ನಡದ 'ಮೊದಲ ಸ್ತ್ರೀವಾದಿ' ಎಂದು ವ್ಯಾಖ್ಯಾನಿಸಿದ್ದಕ್ಕೆ ಪ್ರತಿಯಾಗಿ ತಾವು ಬರೆದ ಲೇಖನದಲ್ಲಿ ಈ ಕಾಲದ ಒಬ್ಬ ಸ್ವತಂತ್ರ ಚಿಂತನೆ ಸಾಧ್ಯವಾಗಿರುವ ಸವಲತ್ತಿನ ನೆಲೆಯಲ್ಲಿರುವ ಮಹಿಳೆಯಾಗಿ ತಾವು ಅಮೃತಮತಿಯ ವರ್ತನೆಯನ್ನು ಮಾನವೀಯ ನೆಲೆಯಲ್ಲಿ ಗ್ರಹಿಸಬಹುದಾದರೂ, ಆ ಕಾಲದ ಕವಿ ಜನ್ನನ ದೃಷ್ಟಿಯೂ ಅದೇ ಆಗಿತ್ತೆಂದು ಹೇಳಲಾಗುವುದಿಲ್ಲ ಎಂಬುದನ್ನು ಪ್ರತಿಭಾ ಉದಾಹರಿಸಿ, ನಾಗವರ್ಮನ ಕೃತಿಯಲ್ಲಿ ಸ್ತ್ರೀ–ಪುರುಷ ಸಂಬಂಧದ ಅತ್ಯಂತ ಆದರ್ಶೀಕೃತ ಚಿತ್ರಗಳು ದೊರೆಯುವತ್ತ ಗಮನ ಸೆಳೆದರು. ಒಟ್ಟಾರೆಯಾಗಿ ಎಂಬತ್ತರ ದಶಕದಿಂದ ಈಚೆಗೆ ಆಗಿರುವ ಬದಲಾವಣೆಗಳ ಬಗ್ಗೆ ಪ್ರೀತಿಶುಭಚಂದ್ರರು ಪ್ರಬಂಧದ ಕೊನೆಯಲ್ಲಿ




ಪ್ರಸ್ತಾಪಿಸಿ ಕೈಬಿಡುವ ಬದಲು ನಿಜವಾದ ಚರ್ಚೆಯನ್ನು ಅಲ್ಲಿಂದಲೇ ಪ್ರಾರಂಭಿಸಬೇಕಿತ್ತು ಎನ್ನುವುದನ್ನು ಪ್ರತಿಭಾ ಆಗ್ರಹಪಡಿಸಿ ಹೇಳಿದರು.

ಪ್ರೀತಿ ಶುಭಚಂದ್ರರ ಲೇಖನವನ್ನು ಸ್ತ್ರೀವಾದಿ ವಿಮರ್ಶೆಯ ಚರಿತ್ರೆ ಎಂದು ನೋಡುವುದನ್ನು ನಿರಾಕರಿಸುತ್ತಾ



ಕೆ.ಆಶಾದೇವಿ, ಇದು ನಿಜವಾಗಿ ಅಂತರ ಶಿಸ್ತೀಯವಾದ ಸೈದ್ಧಾಂತಿಕತೆಯೊಂದರ ಸಂಕಥನ ಎಂದು ಸೂಚಿಸಿದರು. ಹಾಗೆಯೇ ಆವರೆಗೆ ಮಾತನಾಡಿದ್ದವರು ಪ್ರಸ್ತಾಪಿಸಿದ್ದಂತೆ ವೈಚಾರಿಕತೆಯ ಕಟ್ಟೋಣ ದಲ್ಲಿ ಪ್ರೀತಿಯವರು ಆರಿಸಿಕೊಂಡಿರುವ ಪಠ್ಯಗಳು ಉದಾಹರಣೆಗಳಾಗಿ ಬಲ ವಾಗಿರುವ ಪಠ್ಯಗಳಲ್ಲ, ಆದರೆ ಶ್ರೇಣೀಕೃತ ಲಿಂಗರಾಜಕಾರಣದ ವ್ಯವಸ್ಥೆಯ ಸಂಸ್ಕೃತಿಯಲ್ಲಿ ಮಹಿಳೆಯ ಸ್ಥಾನ ನಿರ್ದೇಶನವನ್ನು ಕುರಿತ ಈ ಜಿಜ್ಞಾಸೆ ಸೈದ್ಧಾಂತಿಕವಾಗಿ ಸ್ಪಷ್ಟವಾಗುವ ಕಡೆಗೆ ನಡೆದಿರುವ ಒಂದು ಒಳ್ಳೆಯ ಯತ್ನವಾಗಿ ಅಭಿನಂದನಾರ್ಹ. ಆದರೆ ಸಮಸ್ಯೆಯ ವಿಶ್ಲೇಷಣೆಯಲ್ಲಿ ಅದರ ಸಂಕೀರ್ಣ ಮುಖಗಳತ್ತಲೂ ಸೂಕ್ಷ್ಮವಾಗಿ ನೋಡಬೇಕಾಗುತ್ತದೆ. 'ಚಿಕ್ಕಮಲ್ಲಮ್ಮ'ದಂಥ ಕೃತಿಯ ಬಗ್ಗೆ ಅದರಲ್ಲಿರುವ ಸತೀ ಪದ್ಧತಿಯ ವೈಭವೀಕರಣದ ಕಾರಣಕ್ಕಾಗಿ ಮಹಿಳಾವಿರೋಧಿ ಯೆಂದು ಗುರುತಿಸಿರುವ ವಿಜಯಾದಬ್ಬೆಯವರ ಬರಹಗಳಲ್ಲಿ ಕಾಣುವ ಮಾನವೀಯ ಅಂತಃಕರಣದ ಅಂಶವನ್ನು ಇಷ್ಟು ಸರಳವಾಗಿ ತಳ್ಳಿಹಾಕಲು ಸಾಧ್ಯವೆ? ಎಂದು ಆಶಾದೇವಿ ಪ್ರಶ್ನೆ ಮಾಡಿದರು. ಏಕಮುಖತೆಯಿಂದ ಸೈದ್ಧಾಂತಿಕತೆಯನ್ನು ಕಟ್ಟಲೆತ್ನಿಸುವುದರ ಮಿತಿಗಳ ಬಗ್ಗೆ ನಾವು ಎಚ್ಚರ ವಹಿಸಬೇಕಿದೆ. ವಿಚಾರಗಳಿಗೆ ಪೂರಕವಾಗಿ ವಿವರಗಳು ಲೇಖನದಲ್ಲಿ ಸಾಕಷ್ಟಿಲ್ಲ. ಉದಾಹರಣೆಗೆ ನವೋದಯ, ಪ್ರಗತಿಶೀಲ, ನವ್ಯ ಮುಂತಾದವರನ್ನು ಇಲ್ಲಿ ಮತ್ತೆ ಎತ್ತಿಕೊಳ್ಳುವು ದರಲ್ಲಿರುವ ಸಮಸ್ಯೆ ಎಂದರೆ ಅವರ ಎಲ್ಲ ತಾತ್ತ್ವಿಕತೆಗಳಲ್ಲೂ ನಮಗೆ ತಕ್ಷಣಕ್ಕೆ ಒದಗುವ ಲಿಂಗರಾಜಕಾರಣದ ಅಥವಾ ಶ್ರೇಣೀಕೃತ ವ್ಯವಸ್ಥೆಯ ರೂಪಾಂತರಗೊಂಡ ಶಕ್ತಿಗಳೇ ಆಗಿರುತ್ತವೆ ಎಂಬುದು. ಹೆಣ್ಣನ್ನು ನಿಯಂತ್ರಿಸುವ ಹೊಸ ಹೊಸ ರೂಪ, ಸಾಧನಗಳನ್ನು ಅವು ಕಟ್ಟಲೆತ್ನಿಸುತ್ತಿರುತ್ತವೆ ಎಂಬುದನ್ನೂ ನಾವು ಕಾಣುತ್ತೇವೆ. ಆದರೆ ವಿಚಿತ್ರವೆಂದರೆ ದೇವನೂರು ಮಹಾದೇವ ಹೇಳುವ ರೀತಿಯ 'ಅರಿವಿನಹಿಂಸೆ'ಯ ತಲ್ಲಣ ನವೋದಯದ ಕಾಲದ ಲೇಖಕಿಯರ ಪೈಕಿ ಕೊಡಗಿನ ಗೌರಮ್ಮನವರಲ್ಲಿ ಕಾಣಿಸುವಂಥ 'ಅರಿವಿನ ಹಿಂಸೆ'ಯ ತಲ್ಲಣಗಳ ಮೂಲಕ ನಾವು ಕಟ್ಟಬಹುದಾದ ತಾತ್ತ್ವಿಕತೆಯ ಬಗ್ಗೆ ಈ ಪ್ರಬಂಧ ಹೆಚ್ಚು ಆಸಕ್ತಿ ತೋರಿಸಿದೆ ಅನ್ನಿಸುವುದಿಲ್ಲ ಎನ್ನುವುದು ಆಶಾ ಅವರ ಸ್ಪಷ್ಟ ನಿಲುವಾಗಿತ್ತು.

ವನಮಾಲಾವಿಶ್ವನಾಥ್ ಈ ಲೇಖನ ಅಲ್ಲಲ್ಲಿ ಹೊಸದೊಂದು ವಿಚಾರವನ್ನು ಕಟ್ಟಿಕೊಡುವಂತೆಯೂ ತಮಗೆ ಕಂಡಿದೆ, ಮಹಿಳಾ ವಿಮರ್ಶೆ ಕೇವಲ ಸಾಹಿತ್ಯಕ ಓದಿಗೇ ಸೀಮಿತವಾಗದೆ ಚರಿತ್ರೆ, ಸಂಸ್ಕೃತಿಗಳ ಅಧ್ಯಯನವನ್ನೂ ಒಳಗೊಳ್ಳಬೇಕೆಂಬ ಕಳಕಳಿಯಿಂದಲೇ ಲೇಖಕಿ ಇಲ್ಲಿ ಅದನ್ನು ಕಟ್ಟುವ ಯತ್ನ ಮಾಡಿರುವುದು




ಮೆಚ್ಚಬೇಕಾದದ್ದು ಎಂದರು. ಕನ್ನಡ ಸಾಹಿತ್ಯದಲ್ಲಿರುವ ಅನೇಕ ಶಾಸ್ತ್ರೀಯ ವಿಷಯಗಳನ್ನು ಬಳಸಿಕೊಳ್ಳುತ್ತಾ ವೈವಿಧ್ಯ ವನ್ನೂ, ಸಮೃದ್ಧತೆ ಯನ್ನೂ ಹೊಂದಿರುವ ಈ ಲೇಖನದಲ್ಲಿ ಮೊದಲ ಓದಿಗೆ ಗೊಂದಲ ಹುಟ್ಟಿದರೆ ಅದಕ್ಕೆ ಕಾರಣ ಬಹುಶಃ Logic of Thinking ಹಾಗೂ Logic of Presentation – ಇವುಗಳನ್ನು ಬೇರೆ ಮಾಡಿಕೊಳ್ಳದಿರುವುದು ಅನ್ನಿಸುತ್ತದೆ. ಪಾಶ್ಚಾತ್ಯ ಸೈದ್ಧಾಂತಿಕ ಪರಿಭಾಷೆಯನ್ನು ಕನ್ನಡೀಕರಿಸಿ ಹೇಳುವ ಕ್ರಮ ಅನುವಾದ ಕ್ಷೇತ್ರದಲ್ಲಿ ಒಲವಿರುವ ತಮಗೆ ಇಷ್ಟವಾಯಿತು ಎಂದು ಅವರು ಹೇಳಿದರು. ಸಿದ್ಧಾಂತವನ್ನು ನೇರವಾಗಿ ಹೇಳಿದರೆ Dry ಅನ್ನಿಸಬಹುದು; ಅದನ್ನೇ ರೂಪಕಗಳ ಮೂಲಕವಾಗಿ ಹೇಳಿದಾಗ ವಿಚಾರದ ಸಂವಹನೆ ತುಂಬ ಚೆನ್ನಾಗಿ ಆಗಬಹುದು. ಪ್ರೀತಿಯವರು ಬಳಸುವ 'Watch Tower' 'ಅವಿಮುಕ್ತ ಕುರುಕ್ಷೇತ್ರ' ಎಂಬ ರೀತಿಯ ರೂಪಕಗಳು ಹೀಗೆ ಒಮ್ಮೆಗೆ ವಿಸ್ತಾರವಾದ ಧ್ವನಿಯಿಂದ ಮನಸ್ಸನ್ನು ತಲುಪುತ್ತವೆ. ಆದರೂ ಮಹಿಳಾ ವಿಮರ್ಶೆಯ ಇಲ್ಲಿನ ಪ್ರತಿಪಾದನೆಯಲ್ಲಿ ಒಂದು ರೀತಿಯ ಅಲ್ಪತೃಪ್ತಿ ಹೊಂದಿದಂತೆ ಅನ್ನಿಸುತ್ತದೆ. ಸ್ವವಿಮರ್ಶೆಯ ಶಕ್ತಿಯ ಬಗ್ಗೆ ಇರುವ ಅಲ್ಪತೃಪ್ತಿ ಹಾಗೂ ಮಹಿಳೆಯರ ಪರ ವಹಿಸುವ ಒಂದು ಧೋರಣೆ ಇಲ್ಲಿಯ ಮಿತಿಯೂ ಹೌದು ಎನ್ನುವುದನ್ನು ವನಮಾಲಾ ಪ್ರಸ್ತಾಪಿಸಿದರು.

ಎಚ್.ಎಸ್.ರಾಜೇಶ್ವರಿ ಮೊದಲ ಓದಿಗೆ ಲೇಖನ ಕ್ಲಿಷ್ಟವಾಗಿ ಕಂಡರೂ, ಮತ್ತೆ ಮತ್ತೆ ಓದಿದಾಗ ಸರಳವಾಗಿ ಹೇಳಬಹುದಾದುದನ್ನು ತುಂಬ ಕ್ಲಿಷ್ಟಮಾಡಿ ಹೇಳಿರುವಂತೆ



ಅನ್ನಿಸಿತು ಎಂದು ಹೇಳಿದರು. ಈ ಲೇಖನ ಪ್ರತಿಪಾದಿಸುವಂತೆ ಚಾರಿತ್ರಿಕ ವಾಗಿ ಶ್ರೇಣೀಕೃತ ಲಿಂಗರಾಜಕಾರಣದ ವ್ಯವಸ್ಥೆಯ ನಿರಚನ ಹೊಸದೇನೂ ಅಲ್ಲ, ಕಳೆದ 20–25 ವರ್ಷಗಳಿಂದಲೂ ಪರಿಚಿತವಾಗಿರು ವಂಥವೆ. ಹಾಗೆಯೇ ಕನ್ನಡದಲ್ಲಿ ಸ್ತ್ರೀವಾದಿ ವಿಮರ್ಶೆ ಎಂಬ ಹೆಸರಿನಲ್ಲಿ ಬರೆಯುವವರ ಒಂದು ವಿಶಿಷ್ಟ ಧಾಟಿ ಇಲ್ಲೂ ಕಾಣಿಸುತ್ತದೆ ಎಂದರು. ರಾಜೇಶ್ವರಿ ಕನ್ನಡದಲ್ಲಿ ಮಹಿಳೆಯರೇ ಬರೆದ ಸಣ್ಣಕಥೆಗಳನ್ನು ವಿಶೇಷವಾಗಿ ಅಧ್ಯಯನ ಮಾಡಿದ ತಮ್ಮ ಅನುಭವವನ್ನೂ ಉದಾಹರಿಸಿದರು. ಸುಮಾರು ಇಪ್ಪತ್ತು ಜನರಾದರೂ ಇಂತಹ ವಿಮರ್ಶೆ ಮಾಡಿರುವುದನ್ನು ಅವರು ಓದಿದ್ದರು. ಎಲ್ಲರೂ 'ವಿಜಯಾದಬ್ಬೆ ಹೀಗೆ ಹೇಳಿದ್ದಾರೆ', 'ಸುಮಿತ್ರಾಬಾಯಿ ಹೀಗೆ ಹೇಳಿದ್ದಾರೆ' ಎಂದು ಅವರಿಬ್ಬರ ಮಾತುಗಳನ್ನೇ ಉಲ್ಲೇಖಿಸಿಬಿಟ್ಟರೆ ಸಾಕು, ಅದೇ ತಾವು ವಿಮರ್ಶೆ ಮಾಡಿದಂತೆ ಎಂದು ನಂಬಿದ್ದ ಹಾಗೆ ತಮಗೆ ಕಂಡುಬಂತು. ಪ್ರೀತಿಯವರೂ ಹೀಗೆಯೇ ಇತರರ ವಿಚಾರಗಳನ್ನು ಅವಿಮರ್ಶಿತವಾಗಿ ಬಳಸಿದ್ದಿದೆ – ನಿಜವಾಗಿ ಆ ಉಲ್ಲೇಖಗಳ ವಿಚಾರಗಳನ್ನು ಒರೆಹಚ್ಚಿ, ತಮ್ಮದೇ ಒಳನೋಟಗಳನ್ನು ನೀಡಿದ್ದರೆ ಈ ವಿಮರ್ಶೆಗೆ ಒಂದು ಹೊಸತನ, ಮುಂದುವರೆದ ಸ್ಥಿತಿ ಇರುತ್ತಿತ್ತು. ಹಾಗೆ ಮಾಡದಿರುವುದು ಒಂದು ಕೊರತೆಯೆಂದು ಸ್ಪಷ್ಟವಾಗಿ ತಮ್ಮ ಅಭಿಪ್ರಾಯವನ್ನು ತಿಳಿಸಿದರು.

ಸಿ.ಜಿ.ಮಂಜುಳ ತಮಗೆ ಲೇಖನ ತಡವಾಗಿ ತಲುಪಿದ ಕಾರಣ ಒಮ್ಮೆ ಮಾತ್ರ ಓದಲು ಸಾಧ್ಯವಾಯಿತೆಂದೂ, ಆದರೂ ಇಲ್ಲಿ ನಡೆಯುವ ಚರ್ಚೆಯನ್ನು ಆಲಿಸಲು, ಅದರಿಂದ ಕಲಿಯಲು ಕುತೂಹಲದಿಂದ ತಾವು ಪಾಲ್ಗೊಂಡಿರುವುದಾಗಿ ನಮ್ರವಾಗಿ ಸೂಚಿಸಿದರು. ತಮ್ಮದು ಪೂರ್ಣರೂಪದ ವಿಚಾರಗಳಲ್ಲ, ಇವು Fragments of Thoughts ಎಂದು ಹೇಳಿ 'ಹೂವು-ಹಣ್ಣು' ಕಾದಂಬರಿ ಯನ್ನು ಚರ್ಚಿಸುವಾಗ



ತ್ರಿವೇಣಿಯವರ ಭಾಷೆ sexist ಅಲ್ಲ ಅನ್ನುತ್ತಾರೆ. ಅದಕ್ಕೆ ಅವರು ಉದ್ದೇಶಿಸಿರುವ ಅರ್ಥ ಏನು? sexist ಎಂಬುದಕ್ಕೆ ವಿಶಾಲವಾದ ಅರ್ಥ ವಿರುವಾಗ ಯಾವ ಅರ್ಥದಲ್ಲಿ ಲೇಖಕಿ ಅದನ್ನು ಇಲ್ಲಿ ಬಳಸುತ್ತಿದ್ದಾರೆಂಬುದು ಸ್ಪಷ್ಟವಾಗುವುದಿಲ್ಲ.

ಒಂದು ಕೃತಿಯ ಹೆಸರು, ಬರೆದವರು ಮುಂತಾದ ಯಾವುದೇ ಗುರುತನ್ನೂ ಹೇಳದೆ ಅದರ ಭಾಷೆ sexist ಆದ್ದರಿಂದ ಅದು ದಂಡನಾರ್ಹ ಎಂಬ ತೀರ್ಪು ಕೋರ್ಟಿನಿಂದ ಹೊರಬಿದ್ದಿತು ಎಂದು ಹೇಳಿದ್ದಾರೆ. ಆ ಸಂದರ್ಭದ ಇನ್ನೂ ಸ್ಪಷ್ಟ ವಿವರಗಳು ಇರಬೇಕಿತ್ತು. ಸ್ವಾತಂತ್ರ್ಯಪೂರ್ವದ ಲೇಖಕಿಯರ ಬಗ್ಗೆ ಹೇಳುತ್ತಾ 'ವೈಧವ್ಯದಿಂದ ಬಳಲುವ ವಿಧವೆಯರ ಸಮಸ್ಯೆಯನ್ನು ಎದುರಿಸುವುದಕ್ಕಾಗಿ ಶಿಕ್ಷಣವು ಒಂದು ರಕ್ಷಣಾತ್ಮಕ ವಿಧಾನವಾಗಿತ್ತು' ಎಂದು ಹೇಳುವುದು ಸೀಮಿತ ಚಿಂತನೆಯಿಂದ ಹುಟ್ಟಿದ ವಿಚಾರ ಅನ್ನಿಸುತ್ತದೆ ಎಂದರು.

ಲಿಂಗರಾಜಕಾರಣದ ವ್ಯವಸ್ಥೆಯಲ್ಲಿ ಮಹಿಳಾ ಅಭಿವ್ಯಕ್ತಿಗೆ ಎದುರಾಗುವ ಅವಜ್ಞೆ, ತಿರಸ್ಕಾರಗಳ ರಾಜಕೀಯವನ್ನು ದಮನಿತರ/ದಲಿತರ, ಮೇಲಿನವರ ಸಂಬಂಧಗಳ ವಿಶ್ಲೇಷಣೆಯ ಮೂಲಕವಾಗಿ ಅರ್ಥಮಾಡಿಕೊಳ್ಳಬಹುದು ಎಂದು ಶಿವಸುಂದರ್ ಅವರು ಈ ಚರ್ಚೆಗೆ ಇನ್ನೊಂದು ಆಯಾಮವನ್ನು ಸೇರಿಸಿದರು.




ಖೈರ್ಲಾಂಜಿ ತೇಲ್ ತುಂಬ್ಡೆ ಜಾತಿ ಸಂಬಂಧವಾದ ದೌರ್ಜನ್ಯದ ಬಗ್ಗೆ ನಾಗರಿಕ ಸಮಾಜ ನಿರ್ಲಕ್ಷ್ಯ ವಹಿಸುವುದಕ್ಕೆ ಕಾರಣಗಳನ್ನು ಹೀಗೆ ಗುರುತಿಸುತ್ತಾರೆ: ಅಲ್ಲಿ ಮಹಿಳೆಯ ಮೇಲೆ ಅತ್ಯಾಚಾರ ನಡೆದಿರಬಹುದು. ಅಥವಾ ಭೂವಿವಾದ ಅಂಟಿಕೊಂಡಿರುತ್ತದೆ – ಅನ್ನುವುದೇ ನಾಗರಿಕ ಸಮಾಜಕ್ಕೆ ಅದನ್ನು ತಳ್ಳಿಹಾಕಲು ಒಂದು ಕಾರಣವಾಗಿತ್ತು. ಆದರೆ ಜಾತಿಗಳ ಒಳಗೂ ಅತ್ಯಾಚಾರಗಳು ನಡೆದಿರಬಹುದು, ಭೂವಿವಾದದ ಜಗಳಗಳೂ ನಡೆಯಬಹುದು, ಆದರೆ ಎಲ್ಲಾ ಕಡೆಯೂ ಭೀಕರ ಜಾತಿ ದೌರ್ಜನ್ಯದ ರೂಪ ಅದಕ್ಕೆ ಉಂಟಾಗಿರುವುದಿಲ್ಲ. ದಲಿತ ಜಾತಿಯ ಮೇಲೆ ಮಾತ್ರ ಇಡೀ ನಾಗರಿಕ ಸಮಾಜಕ್ಕೆ ಇರುವ ತೀವ್ರವಾದ ಅಸಹನೆ ದೌರ್ಜನ್ಯವಾಗಿ ಪ್ರಕಟವಾಗುತ್ತದೆ. ಆದ್ದರಿಂದ ಅಲ್ಲಿ ನಡೆವ ಘರ್ಷಣೆಯನ್ನು ಜಾತಿ ದೌರ್ಜನ್ಯದ ಭೀಕರತೆಯೆಂದು ಗ್ರಹಿಸಲಾಗುತ್ತದೆ. ಹಾಗೆಯೇ ಇಡೀ ಸಾಹಿತ್ಯ ಲೋಕದಲ್ಲಿ ಪುರುಷಾಹಂಕಾರದ ಮೂಲದ್ದಾದ ಮಾನದಂಡಗಳೇ ಮಹಿಳಾಭಿವ್ಯಕ್ತಿಯ ಅರ್ಹತೆ, ಸಾಮರ್ಥ್ಯಗಳನ್ನು ಅಳೆಯುತ್ತಿರುತ್ತವೆ. ಪ್ರೀತಿಯವರ ಇಡೀ ಪ್ರಬಂಧವು ಇಂಥ ತಿರಸ್ಕಾರದ ಧೋರಣೆಯನ್ನು ಅಂಥದೇ ಸಂದರ್ಭಗಳಲ್ಲಿ ಇರುವ ಪುರುಷರಿಗೂ ಏಕೆ ಅನ್ವಯಿಸುವುದಿಲ್ಲ? ಎಂಬ ಪ್ರಶ್ನೆಯನ್ನು ಮತ್ತೆ ಮತ್ತೆ ಕೇಳುತ್ತದೆ.

ಇದು ತುಂಬ ಮುಖ್ಯವಾದ ಪ್ರಶ್ನೆಯೇ. ಶೋಷಿತ ವರ್ಗಗಳ, ದಮನಿಕ ಜನಗಳ ಅಭಿವ್ಯಕ್ತಿಗಳ ಅರ್ಹತೆಯ ಮಾನದಂಡಗಳನ್ನು ಕುರಿತಂತೆ ಇಂದಿಗೂ ಪ್ರತಿಷ್ಠಿತವರ್ಗದವರೇ ನಿರ್ಣಯಗಳನ್ನು ಹೇಳುವವರು. ಆದ್ದರಿಂದ ಸಾಂಸ್ಕೃತಿಕವಾಗಿ ಮುಖ್ಯವಾದ ಈ ಸಮಸ್ಯೆಯಲ್ಲಿರುವ ರಾಜಕೀಯವನ್ನು Deconstruct ಮಾಡಬೇಕಾದ್ದು ತುಂಬ ಅವಶ್ಯಕವಾದದ್ದು. ಆದರೆ ಇಡೀ ಲೇಖನದಲ್ಲಿ ಒಂದು ಒಮ್ಮುಖತೆ ಇದ್ದು ಇದೇ ಲೇಖನದ ಮಿತಿಯೂ ಆಗಿದೆ ಅನ್ನಿಸುತ್ತದೆ. ಉದಾಹರಣೆಗೆ ಕೆನೆಪದರದ ವಿಷಯದಲ್ಲಿ ಪ್ರಸ್ತಾಪಿಸುತ್ತಾ 'ತಮ್ಮ ಮಿತಿಗಳನ್ನು ಪರಿಶೀಲಿಸುವಷ್ಟು ಸ್ವವಿಮರ್ಶಾತ್ಮಕ ಪ್ರಜ್ಞೆಯನ್ನು ಸಮೃದ್ಧವಾಗಿ ನಮ್ಮ ಲೇಖಕಿಯರು ಹೊಂದಿದ್ದಾರೆ' ಎನ್ನುವಾಗ ಕೆನೆಪದರದ ರಾಜಕೀಯದ ಪ್ರಶ್ನೆ, ಜಾತಿಪ್ರಾತಿನಿಧ್ಯದ್ದೂ ಇರಬಹುದು. ಮೇಲ್ಜಾತಿ ಮಹಿಳೆಯರ ಅಹಂಕಾರದ ಪ್ರಶ್ನೆಯನ್ನು ಗಮನಿಸದೆ ಈ ಮಾತನ್ನು ಎಲ್ಲಾ ಮಹಿಳಾ ಬರಹಗಾರರಿಗೂ ಅನ್ವಯಿಸಲು ಸಾಧ್ಯವೆ ಎಂಬುದು ಶಿವಸುಂದರ್ ಎತ್ತಿದ ಪ್ರಶ್ನೆ.

ಹಿಂದಿನ ಸಂದರ್ಭವನ್ನು ಮಹಿಳೆಯರು ಮೀರಿದಂಥ ರೀತಿಯಲ್ಲಿ 'ಮಹಿಳಾತನ' ಎಂಬದರ ಪಕ್ಷ ವಹಿಸಿಕೊಂಡು ನೋಡುವುದು ಸಾಧ್ಯವಿಲ್ಲ. ಗುಜರಾತಿನಲ್ಲಿ ಆದ ಕೋಮು ಗಲಭೆಯಲ್ಲಿ ಮೇಲ್ಜಾತಿ ಮಹಿಳೆಯರ ಪಾತ್ರ – ಅದು ದುರ್ಗಾವಾಹಿನಿಯದೂ ಇರಬಹುದು – ಭಿನ್ನ ಕೋಮು, ಜಾತಿಗಳ ಹೆಣ್ಣುಗಳ ಮೇಲಾಗುವ ಹಿಂಸೆ, ದೌರ್ಜನ್ಯಗಳನ್ನು ಕಂಡು ಚಪ್ಪಾಳೆ ತಟ್ಟಿ ಆನಂದಿಸುವ, ನೇರವಾಗಿ ಆ ದೌರ್ಜನ್ಯಕ್ಕೆ ಕುಮ್ಮಕ್ಕು ಕೊಡುವ ಜನರ ನೆಲೆಯನ್ನು ಗಮನಿಸದೆ 'ಮಹಿಳಾತನ'ವನ್ನು Essentialise ಮಾಡುವುದು ಮಹಿಳಾ ರಾಜಕಾರಣಕ್ಕೇ ವಿರುದ್ಧವಾದದ್ದು.

ಕೃತಿಚೌರ್ಯದ ವಿಷಯದಲ್ಲೂ ಇದೇ ಅನ್ವಯಿಸುತ್ತದೆ. ವಸಾಹತುಶಾಹಿಯ ಅಡಿಯಲ್ಲಿ ಹಿಂದೆ ಇದ್ದ ಪುರುಷ ಪ್ರಾಧಾನ್ಯಕ್ಕೂ ಇಂದಿನ ಪುರುಷಾಧಿಪತ್ಯಕ್ಕೂ ತುಂಬ ವ್ಯತ್ಯಾಸವಿದೆ. Capitalist Patriarchy ಆಗಿ ವ್ಯವಸ್ಥೆ ಬದಲಾಗುತ್ತಿರುವುದರ ಬಗ್ಗೆ ಇನ್ನೂ ಹೆಚ್ಚು ಚರ್ಚೆ ನಡೆಯಬೇಕಿದೆ ಎಂದು ಶಿವಸುಂದರ್ ಹೇಳಿದರು.

ವಿದ್ಯಾಶಂಕರ್ ಅವರು ಪ್ರೀತಿಶುಭಚಂದ್ರರ ಲೇಖನವನ್ನು ತಳಹದಿಯಾಗಿಟ್ಟುಕೊಂಡು ಮುಖ್ಯವಾದ ತತ್ತ್ವಶಾಸ್ತ್ರೀಯ ಪ್ರಶ್ನೆಯನ್ನು ಒಬ್ಬ ಗಣಿತಶಾಸ್ತ್ರದ ಅಭ್ಯಾಸಿಯಾಗಿ ತಾವು ಇಲ್ಲಿ ಚರ್ಚೆಗೆ ಇಡಲು ಬಯಸಿರುವುದಾಗಿ ಹೇಳಿದರು. ಎಷ್ಟೋ ಶತಮಾನಗಳಿಂದ ಕೇವಲ ದೇಹವಾಗಿ ನೋಡುತ್ತಾ ಬರಲಾಗಿರುವ ಮಹಿಳೆಗೆ ಆತ್ಮವನ್ನು ಯಾವಾಗ ನಿರಾಕರಿಸಲಾಯಿತು? ಯಾವ ಕಾಲದಲ್ಲಿ, ಎಲ್ಲಿ ಈ ರೀತಿ ಆತ್ಮನಿರಾಕರಣೆ ಯಾವ ಕಾರಣಕ್ಕಾಗಿ ಆಗಿದೆ? ಎಂಬುದು ಶೋಧನೆಗೆ ಒಳಪಡ ಬೇಕಾಗಿದೆ. ಗಣಿತಶಾಸ್ತ್ರದ ಚರಿತ್ರೆಯಲ್ಲಿ



ಹದಿನೆಂಟನೆಯ ಶತಮಾನದ ಸೂಸಿ ಜರ್ಮೇನ್ ಉನ್ನತ ಮಟ್ಟದ ಗಣಿತಶಾಸ್ತ್ರೀಯ ಶೋಧನೆಗಳನ್ನು ಪುರುಷನ ಹೆಸರಿಟ್ಟುಕೊಂಡೇ ನಡೆಸ ಬೇಕಾಯಿತು. ಆಮೇಲೆ ನಡೆದ ಸಂಶೋಧನೆಗಳಿಂದ ಆಕೆ ಮಹಿಳೆ ಎಂಬುದು ಬೆಳಕಿಗೆ ಬಂದಿತು. ಆ ರೀತಿ ಮೊಟ್ಟ ಮೊದಲ ಗಣಿತ ಶಾಸ್ತ್ರಜ್ಞೆಯ ಕಥೆ ಹೇಳುವುದೂ ಸ್ತ್ರೀಯ ಆತ್ಮನಿರಾಕರಣೆಯ ಕಥೆಯನ್ನೇ. ಈ ಲೇಖನದಲ್ಲಿ Social, Cultural, Political ಹಿತಾಸಕ್ತಿಗಳೆಲ್ಲವೂ ಇದ್ದು ಬಹುದೊಡ್ಡ Spectrum ಉಂಟಾಗಿದೆ. ಚಾರಿತ್ರಿಕವಾಗಿ ಸಾಮಾಜಿಕ ವಿದ್ಯಮಾನ ಹಿಂದಿನದ್ದಾಗಿದ್ದು ಸಾಂಸ್ಕೃತಿಕ ವಿದ್ಯಮಾನ ಈಚಿನದಾಗಿದೆ. ಇವೆರಡನ್ನೂ ಮಿಶ್ರಣ ಮಾಡಿದಾಗ ಒಂದರಿಂದ ಇನ್ನೊಂದಕ್ಕೆ ವಿಷಯಾಂತರವಾಗುವ ಸಾಧ್ಯತೆ ಇದೆ. ನಮ್ಮ ಎಲ್ಲಾ ಸಾಂಸ್ಕೃತಿಕ ಸಮಸ್ಯೆಗಳೂ ಸಾಮಾಜಿಕ ಅಸಮಾನತೆಗಳಿಗೆ ಸಂಬಂಧಿಸಿದವೇ ಆಗಿರುತ್ತವೆ. ಈ ಅಸಮಾನತೆಗಳು ನಾವು ಯುಗಯುಗ ಗಳಿಂದಲೂ ಸ್ಥಾಪಿಸಿಕೊಂಡು ಬಂದಿರುವಂಥವು. ಪ್ರಸ್ತುತ ಪ್ರೀತಿಯವರು ಎತ್ತಿರುವ ಜ್ಞಾತೃಸ್ಥಾನೀಯತೆಯ ಪ್ರಶ್ನೆ ಕೇವಲ ಮಹಿಳೆಯರಿಗಷ್ಟೇ ಅನ್ವಯವಾಗಬೇಕಿಲ್ಲ; ಪುರುಷರಿಗೂ ಅದು ಅನ್ವಯ ಆಗಬೇಕಾದ್ದಿದೆ. ಜ್ಞಾನಾಧಿಕಾರದ ಪ್ರಶ್ನೆ ಮಹಿಳೆಗಷ್ಟೇ ವಿಶಿಷ್ಟವಾದದ್ದಲ್ಲ.

ಸಮೂಹ ಮಾಧ್ಯಮಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಇಲ್ಲಿ ಇಂದಿನ ದೃಶ್ಯಾತ್ಮಕ ಸಂವಹನದ ಎಲ್ಲಾ ರೂಪಗಳೂ ಬೌದ್ಧಿಕತೆಯ ವಿರೋಧಿಗಳೂ ಮಹಿಳಾ ವಿರೋಧಿಗಳೂ ಆಗಿವೆ ಎನ್ನುವುದರಲ್ಲಿ ಸಂದೇಹವಿಲ್ಲ. ದೃಶ್ಯಮಾಧ್ಯಮಗಳ ಮೂಲಕವಾಗಿ ನಾವು ಈ ಶತಮಾನದಲ್ಲೇ ಬೌದ್ಧಿಕವಾಗಿಯೂ, ಸಂವೇದನೆಯಲ್ಲೂ ಒಂದು ನೂರುವರ್ಷದಷ್ಟು ಹಿಂದೆ ಸರಿದಿದ್ದೇವೆ. ಜ್ಞಾನದ ಬಗ್ಗೆ ಎಲ್ಲ ತಿಳಿವನ್ನೂ ನಿರಾಕರಿಸುತ್ತಾ ಮಹಿಳೆಯ ದೇಹದ ಬಗೆಗಿನ ಪ್ರಜ್ಞೆಗೆ ತೀವ್ರವಾಗಿ ಇವು ಒತ್ತುಕೊಡುತ್ತಿವೆ. ಇಡೀ ಪ್ರಪಂಚದಾದ್ಯಂತ ಚರ್ಚೆಗೆ ಒಳಗಾಗಬೇಕಾದ ಪ್ರಶ್ನೆ ಇದಾಗಿದೆ. ಏಕೆಂದರೆ Woman is the

major victim of modern communication. ಎಂಥ ಪ್ರಮುಖ ಚಿತ್ರನಿರ್ಮಾಪಕರೂ ಈ ಪ್ರಶ್ನೆಯತ್ತ ಗಮನ ಹರಿಸುವುದಿಲ್ಲ. ಕೆಲವೇ ಕೆಲವು ಚಲನಚಿತ್ರ ಸಿದ್ಧಾಂತಗಳು ಇತ್ತ ಪ್ರಸ್ತಾಪಮಾಡುತ್ತವೆ. ಇಂದಿಗೆ ತೆರೆಯಮೇಲೆ ಮೊಟ್ಟಮೊದಲು ಕಣ್ಣಿಗೆ ಬೀಳುವುದು ಶರೀರವೇ.

ಈ ವಿಮರ್ಶೆ ಇಡಿಯಾಗಿ ಸಂಸ್ಕೃತಿಗೆ ತೋರುವ ಒಂದು ಪ್ರತಿಕ್ರಿಯೆ ಮಾತ್ರ. ಆದರೆ ಸೃಜನಾತ್ಮಕವಾಗಿ ಏನೂ ಹೊಸತನ್ನು ಮಾಡದೆ ಹೋದರೆ ಇಂಥ ಪ್ರತಿಕ್ರಿಯೆಗೆ ಸಾಫಲ್ಯ ಇರುವುದಿಲ್ಲ. ಆತ್ಮ–ದೇಹಗಳ ದ್ವಂದ್ವದ ಪರಿಕಲ್ಪನೆಯು ಮಹಿಳೆಗೆ ಆತ್ಮವನ್ನು ನಿರಾಕರಿಸುತ್ತಿರುವ ಸಂದರ್ಭದಲ್ಲಿ To create, where to create, what is the location to create the major problem. ಇಂದು ಭೌತಶಾಸ್ತ್ರ/ಭೌತಾತೀತ ಶಾಸ್ತ್ರಗಳ ನಡುವೆ ತೆಳುವಾದ ಗೆರೆಯ ಅಂತರವಷ್ಟೇ ಇದೆ. ಆತ್ಮ–ದೇಹದ ಕಲ್ಪನೆಯಲ್ಲಿ ಆತ್ಮವನ್ನು ನಿರಾಕರಿಸುವ ಸಮಸ್ಯೆಯನ್ನು ಸಂಬೋಧಿಸುತ್ತ ಆ ಆತ್ಮವನ್ನು ಮತ್ತೆ ಸೃಷ್ಟಿಸಿಕೊಂಡ ಪಕ್ಷದಲ್ಲಿ ಮಾತ್ರ ಈ ಸಾಂಸ್ಕೃತಿಕ ಸಮಸ್ಯೆ ಪರಿಹಾರ ಕಾಣಬಲ್ಲದು ಎಂದು ತತ್ತ್ವಶಾಸ್ತ್ರೀಯ ಆಯಾಮದತ್ತ ವಿದ್ಯಾಶಂಕರ್ ಎಲ್ಲರ ಗಮನ ಸೆಳೆದರು.

ಮಹಿಳಾ ಸಂಶೋಧನೆಯ ಬಗ್ಗೆ ರೂಢಪರಂಪರೆಯ ನಿರ್ಲಕ್ಷ್ಯಕ್ಕೆ ಮಾದರಿಯಾಗಿ ಗುಡಿಬಂಡೆ ಪೂರ್ಣಿಮಾ ಅವರು ಪ್ರಬಂಧಗಳಲ್ಲಿ 'ಕಂತಿ' ಎಂಬ ಕವಯಿತ್ರಿ ಇದ್ದಳು ಎಂಬುದನ್ನು ಸ್ಥಾಪಿಸಲು ಮಾಡಿದ ಪ್ರಯತ್ನಗಳನ್ನು ವಿದ್ವಾಂಸರು 'ಅಶಾಸ್ತ್ರೀಯ' ಎಂದು ಬದಿಗೆ ಒತ್ತರಿಸಿದ್ದನ್ನು ಪ್ರೀತಿ ಶುಭಚಂದ್ರರ ಲೇಖನವು ಪ್ರಸ್ತಾಪಿಸುತ್ತದೆ.

ಈ ರೀತಿ ಬಿಡಿಬಿಡಿಯಾದ ವಿಚಾರ ಪ್ರತಿಪಾದನೆ ಆದ ನಂತರ. ಪ್ರೀತಿ ಶುಭಚಂದ್ರ ಒಟ್ಟಾಗಿ ತಮ್ಮ ಪ್ರತಿಕ್ರಿಯೆಯನ್ನು ಸಮರ್ಥನೆಯನ್ನು ನೀಡಲು ಯತ್ನಿಸಿದರು. ಮಾಸ್ತಿಯವರ 'ಚಿಕ್ಕಮಲ್ಲಮ್ಮ' ಕುರಿತಂತೆ ವಿಜಯಾದಬ್ಬೆ ಮಾಡಿರುವ ವಿಮರ್ಶೆಯನ್ನು ಕೇವಲ ಒಂದು ಕೃತಿಯ ವಿಮರ್ಶೆಯೆಂದಷ್ಟೇ ಭಾವಿಸದೆ ಪ್ರೀತಿಯವರು ಅದು ಸತಿಪದ್ಧತಿಯಂಥ ಅಮಾನವೀಯ ಮೌಲ್ಯದ ಪ್ರತಿಪಾದನೆಗೆ ತೊಡಗುವಂಥ ಒಂದು ಪರಂಪರೆಯ ಬಗೆಗಿನ ವಿರೋಧವೆಂಬುದರತ್ತ ಗಮನ ಸೆಳೆಯಲು ಯತ್ನಿಸಿದರು. ಆ ಕೃತಿಯ ರಚನೆಗೂ ಮುನ್ನವೇ ಸತಿಪದ್ಧತಿಯನ್ನು ನಿಷೇಧಿಸುವ ಕಾನೂನು ಜಾರಿಯಲ್ಲಿತ್ತು. ಅಂಥದ್ದನ್ನು ಪ್ರೋತ್ಸಾಹಿಸುವುದು, ಬೆಂಬಲಿಸಿ ಬರೆಯುವುದೂ ಶಿಕ್ಷಾರ್ಹ ಅಪರಾಧವೆನ್ನುವ ಕಾನೂನೂ ಬಂದಿತ್ತು. ಸರ್ಕಾರದ ಸೇವೆಯಲ್ಲಿ ಉನ್ನತ ಅಧಿಕಾರಿಯಾಗಿದ್ದ ಮಾಸ್ತಿಯವರಿಗೆ ಇಂಥ ಕಾನೂನಿನ ಅರಿವಿರಲಿಲ್ಲವೆ? ಇದ್ದರೂ ಅಂಥ ರಚನೆಯನ್ನು ಧೈರ್ಯವಾಗಿ ಬರೆಯಲು, ಬರೆದೂ ಜಯಿಸಿಕೊಳ್ಳಲು ವ್ಯವಸ್ಥೆಯು ಅವರಿಗೆ ಅವಕಾಶ ನೀಡಲಿಲ್ಲವೆ? ಹಾಗೆಯೇ ಚಿದಾನಂದಮೂರ್ತಿಗಳು ಶಾಸನಗಳ ಸಾಂಸ್ಕೃತಿಕ ಅಧ್ಯಯನದಲ್ಲೂ ಸತಿಕಲ್ಲುಗಳ ಬಗ್ಗೆ 'ನಗು ನಗುತ್ತಾ ಚಿತೆಯೇರುತ್ತಿದ್ದ ಮಹಿಳೆಯರ' ಕೊಂಡಾಟ ಮಾಡುತ್ತಾರೆ. ಇತ್ತೀಚೆಗೆ ತೆರೆಕಂಡ 'ಅರುಂಧತಿ' ಎಂಬ ಚಲನಚಿತ್ರ ಕೂಡ ಕೊಡುವ ಸಂದೇಶ, ಅತ್ಯಾಚಾರ ಮಾಡಿದವನ ಮೇಲೆ ಸೇಡು ತೀರಿಸಿಕೊಳ್ಳಲು ಸತಿಹೋದವಳ ಮೂಳೆಯಿಂದ ತಯಾರಿಸಲಾದ ಖಡ್ಗ ಮುಂದಿನ ಜನ್ಮದಲ್ಲಿ ಅವಳ ಸೇಡಿಗೆ ಉಪಕರಣವಾಗುತ್ತದೆ ಎಂಬ ರೀತಿಯ ಸತಿ ವೈಭವೀಕರಣದ್ದೇ ಆಧುನಿಕ ಮಾದರಿಯಷ್ಟೇ. ಕರ್ನಾಟಕದಾದ್ಯಂತ ದೇವಸ್ಥಾನಗಳ ತುಂಬ ಸತಿಕಲ್ಲುಗಳಿಗೆ, ದೊಡ್ಡ ದೊಡ್ಡ ಟ್ರಸ್ಟ್‌ಗಳು ಪೂಜೆ ಪುರಸ್ಕಾರ, ರಥೋತ್ಸವಗಳನ್ನು ನಡೆಸುತ್ತವೆ. ಇವೆಲ್ಲವೂ ಹೆಣ್ಣಿನ ಜೀವಕ್ಕೆ ಏನೂ ಬೆಲೆಯಿಲ್ಲ ಎಂಬುದನ್ನೇ ಮತ್ತೆ ಮತ್ತೆ ಸಾರಿ ಬಲಗೊಳಿಸುತ್ತಿರುತ್ತವೆ ಎಂಬುದನ್ನು ಗಮನಿಸಬೇಕು ಎಂದರು.



ಶಿವಸುಂದರ್ ಅವರು ಆರಂಭದಲ್ಲಿ ಮನು ಅವರು ಎತ್ತಿದ್ದ ಒಂದು ಪ್ರಶ್ನೆಯ ಮರು ಪ್ರಸ್ತಾಪಕ್ಕೆ ಯತ್ನಿಸಿದರು. ಸಾಮಾಜಿಕ ಮಾನದಂಡಗಳನ್ನು ಇಟ್ಟುಕೊಂಡು ಹೋರಾಟ, ಹಕ್ಕೊತ್ತಾಯ, ನ್ಯಾಯಪರ ಪ್ರಶ್ನೆಗಳನ್ನು ಕೇಳುವುದು ಸುಲಭ. ಆದರೆ ಸಾಹಿತ್ಯ ಕೃತಿಯ ಸಾಹಿತ್ಯಕ ಗುಣಗಳನ್ನೂ ಅದರ ಸೂಕ್ಷ್ಮಲಕ್ಷಣಗಳನ್ನೂ ಹೀಗೆ ಸಾಮಾಜಿಕ ನ್ಯಾಯದ ತಾತ್ತ್ವಿಕತೆಯಿಂದ ಮೀಮಾಂಸೆ ಮಾಡುವುದು ಎಷ್ಟರ ಮಟ್ಟಿಗೆ ಸೂಕ್ತ ಎಂಬುದು ಮನು ಕೇಳಿದ ಪ್ರಶ್ನೆಯ ಸಾರಾಂಶ.

ಈ ವಿಚಾರ ಮೇಲ್ನೋಟಕ್ಕೆ ಸರಿ ಎನ್ನಿಸಬಹುದು. ಆದರೆ ಬದಲಾಗುತ್ತಿರುವ ಸಾಂಸ್ಕೃತಿಕ ಪರಿಸರದಲ್ಲಿ ಅನ್ಯಾಯದ ಅಭಿವ್ಯಕ್ತಿ ಸಾಹಿತ್ಯಕವಾಗಿಯೂ ಆಗುತ್ತದೆ ಎಂಬುದನ್ನು ಗುರುತಿಸುವುದು ಬಹುದೊಡ್ಡ ಸಾವಾಲಾಗಿರುತ್ತದೆ. ಲೆಸ್ಬಿಯನ್ ಅಥವಾ ಗೇ ಬರಹವೇ ಇರಬಹುದು, ಇಂತಹ ಸಂದರ್ಭದಲ್ಲಿ ಇಂದು ಪಡೆಯುತ್ತಿರುವ ಮನ್ನಣೆಯನ್ನು ಪ್ರಗತಿಪರ ಸಾಹಿತ್ಯ ಹಿಂದೆ ಪಡೆದಿರುವುದು ಅಸಾಧ್ಯ. ಆದ್ದರಿಂದ ಯಾವುದು ಸರಿ, ಯಾವುದು ಪ್ರಗತಿಪರವಾದದ್ದು ಎಂಬುದರ ವಿಶ್ಲೇಷಣೆ ಕೂಡ ಕಷ್ಟವೇ. ಆದರೂ ಸಾಹಿತ್ಯವಿಮರ್ಶೆ ಹೇಗೇ ಆದರೂ ಮಾನವೀಯ ನ್ಯಾಯ ದೊರೆತಿದೆಯೆ ಎಂಬುದನ್ನು ಗುರುತಿಸುವ ಯತ್ನವೇ ಆಗಿರುತ್ತದೆ. ಬದಲಾಗಿರುವ ಮಾನದಂಡಗಳ ಸೈದ್ಧಾಂತಿಕತೆಯನ್ನು ಮೊದಲು ಅರಗಿಸಿಕೊಳ್ಳಬೇಕಾಗುತ್ತದೆ. ಸಾಹಿತ್ಯಕ ಸೂಕ್ಷ್ಮಾತಿ ಸೂಕ್ಷ್ಮ ಗ್ರಹಿಕೆಗಳನ್ನು ಇಟ್ಟುಕೊಂಡೇ ಅಳೆದರೂ ಸಾಮಾಜಿಕನ್ಯಾಯ ಅಥವಾ ಸೈದ್ಧಾಂತಿಕತೆ/ತಾತ್ತ್ವಿಕತೆಯ ಮಾನದಂಡದಿಂದ ಅದು ಹೊರತಾಗಿ ಇರಬಲ್ಲುದೆ ಎಂಬ ಪ್ರಶ್ನೆ ಮನು ಅವರ ಪ್ರಶ್ನೆಯಿಂದ ಹುಟ್ಟುತ್ತದೆ ಎಂದು ಶಿವಸುಂದರ್ ಪ್ರತಿಪಾದಿಸಿದರು.

ಒಟ್ಟಾರೆ ಚರ್ಚೆಯಲ್ಲಿ ಲೇಖನದ ಪ್ರಾಸ್ತಾವಿಕ ವಿಷಯಗಳಲ್ಲದೆ ಅವುಗಳ ಆಚೆಗೂ ವ್ಯಾಪಿಸಿರುವ ಅನೇಕ ತಾತ್ತ್ವಿಕ ವಿಚಾರಗಳ ಜಿಜ್ಞಾಸೆ ನಡೆಯಿತು, ಉದಾಹರಣೆಗೆ ಯಾವುದೇ ತಾತ್ತ್ವಿಕ ಚೌಕಟ್ಟಿನ ಒಳಗಿರದೆಯೂ ಶಂಬಾ ಜೋಷಿಯವರು ಮಾನವ ನಾಗರಿಕತೆಯಲ್ಲಿ ವೈಚಾರಿಕ ಆಕೃತಿಗಳು ತಳೆವ ರೂಪವೇನು ಎಂಬುದನ್ನು ನಿರೂಪಿಸುವ ವಿಷಯವನ್ನು ಪ್ರೀತಿಯವರು ವಿವರಿಸಿದ್ದು ಗಮನಾರ್ಹವಾಗಿತ್ತು. ಕತ್ತಲು, ಮರಣ, ರೋಗ, ಸೋಲು ಇವುಗಳ ಹೆದರಿಕೆಯೇ ನಾಗರಿಕತೆಯಲ್ಲಿ ಬೆಳಕಿನ ಹಬ್ಬವಾಗಿ ಮೋಕ್ಷವಾಗಿ ವೈಭವದ ರೂಪ ಪಡೆಯುತ್ತದೆ. ಇದು ಒಂದು ರೀತಿಯ ಅಭಾವಾತ್ಮಕ ವೈಚಾರಿಕತೆ. ದೇವಮಾತೆ 'ಅದಿತಿ' ಅಂದರೆ ಹೆಣ್ಣಿನ ಪ್ರಜನನ ಸಾಮರ್ಥ್ಯ ಮಹಿಳೆಯಲ್ಲಿ ಅತ್ಯಂತ ಪ್ರಬಲ ಶಕ್ತಿಯಾಗಿದ್ದು ಪುರುಷನಲ್ಲಿ ಪೂರ್ತಿ ಅಭಾವಗೊಂಡಿರುವುದರಿಂದ ಆ ಪ್ರಜನನ ಶಕ್ತಿಯ ನಿರಾಕರಣೆಯ ಪ್ರತಿರೂಪವೇ 'ಮೋಕ್ಷ'ದ ಪರಿಕಲ್ಪನೆಯು ಹುಟ್ಟಲು ಮೂಲವಾಯಿತು. ಅದಿತಿ ರೂಪದ ಸ್ತ್ರೀಪ್ರಜನನ ಶಕ್ತಿಯ ಮೇಲಿನ ಅಧಿಕಾರ ಸ್ಥಾಪನೆಯೇ ಮೋಕ್ಷದ ಪರಿಕಲ್ಪನೆಯು ಹುಟ್ಟಲು ಮೂಲವಾಯಿತು. ಅದಿತಿರೂಪದ ಸ್ತ್ರೀಪ್ರಜನನ ಶಕ್ತಿಯ ಮೇಲಿನ ಅಧಿಕಾರ ಸ್ಥಾಪನೆಯೇ ಮೋಕ್ಷದ ಪರಿಕಲ್ಪನೆಯ ಮೂಲದಲ್ಲಿದೆ. ಕೊನೆಯ ಪುರುಷ–ಅರ್ಥವೇ ಮೋಕ್ಷ, ನಾರಿಗೆ ಮುಕ್ತಿಯೆಲ್ಲಿ? ಅವಳು ಮೋಕ್ಷ ಲಕ್ಷ್ಮಿಯ ಜೊತೆಗೂಡಲು ಹೇಗೆ ಸಾಧ್ಯ? ಆದ್ದರಿಂದ ಅವಳನ್ನು "ವಿಮುಕ್ತ ಕುರುಕ್ಷೇತ್ರ" ಎನ್ನುತ್ತದೆ ಜಾಬಾಲೋಪನಿಷತ್ತು. ಹೀಗಿರುವುದರಿಂದಲೇ ನಾರೀಮುಕ್ತಿ ಆಂದೋಲನಕ್ಕೆ ಪ್ರವೇಶಿಸಲು ಅವಕಾಶ ದೊರೆತಿದೆ ಎನ್ನುವ ಶಂಬಾ ದೃಷ್ಟಿಯು ಸಿದ್ಧಾಂತಗಳ ಹೊರಗಿದ್ದೂ ಸ್ತ್ರೀಪರವಾಗಬಲ್ಲದು. ಆದರೆ ನಮ್ಮ ಚರ್ಚೆಗಳಲ್ಲಿ ಅಂಥವರು ಪ್ರವೇಶವನ್ನೇ ಪಡೆಯುವುದಿಲ್ಲವಲ್ಲ ಎಂಬುದು ಸಂವಾದದ ಕೊನೆಯಲ್ಲಿ ಎಲ್ಲರ ಮನದಲ್ಲೂ ಮಾರ್ದನಿ ಪಡೆದ ಪ್ರಶ್ನೆಯಾಯಿತು. ❑

# ಶಶಿ ದೇಶಪಾಂಡೆಯವರ ಕಾದಂಬರಿಗಳಲ್ಲಿ ಭಯದಾಚೆಯ ಬದುಕು

● *ಗಿರಿಜಾ ಶಾಸ್ತ್ರಿ*



ನಮ್ಮ ಸಂಸ್ಕೃತಿಯೊಳಗೆ ಹುಟ್ಟಿನಿಂದ ಸಾವಿನವರೆಗೆ ಹೆಣ್ಣುಮಗುವಿನ ಬದುಕನ್ನು ರೂಪಿಸುವುದು ಭಯವೇ. ಅದು ಹೆಣ್ಣಾಗಿ ಹುಟ್ಟುವ ಭಯ. ಹೆಣ್ಣಾಗಿ ಬದುಕ ನೀಸಬೇಕಾದ ಭಯ. ಮತ್ತು ಹೆಣ್ಣಾಗಿರುವ ಕಾರಣದಿಂದಲೇ ನಾಶವಾಗಬೇಕಾಗಿರುವ ಭಯ. ಒಟ್ಟಾರೆಯಾಗಿ ಅವಳ ಅಸ್ತಿತ್ವವೆನ್ನುವುದು ಈ ಭಯದ ಮೂಲದಲ್ಲಿದೆ. ಯಾಜಮಾನ್ಯದ ಸಂಬಂಧ ರೂಪಗಳಲ್ಲಿ ಈ ಭಯೋತ್ಪಾದನೆ ಪ್ರಕಟವಾಗುತ್ತಿರುತ್ತದೆ. ಮಹಿಳೆ ಈ ಭಯವನ್ನು ದಾಟುವ ಪ್ರಕ್ರಿಯೆಯೇ ಅವಳ ಬಿಡುಗಡೆಯ ಆತ್ಯಂತಿಕವಾದ ಸ್ಥಿತಿ ಎನ್ನುವುದನ್ನು ಶಶಿ ದೇಶಪಾಂಡೆಯವರ The Dark Holds No Terror (1980) ಎನ್ನುವ ಕಾದಂಬರಿ ಅದ್ಭುತವಾಗಿ ಕಟ್ಟಿಕೊಡುತ್ತದೆ.

ನಮ್ಮ ಸಂಸ್ಕೃತಿಯಲ್ಲಿ ಹೆಣ್ಣಾಗಿದ್ದರ ಭಯದ ಪ್ರತೀಕವಾಗಿ ಈ ಕಾದಂಬರಿಯ ಸರಿತಾ ಇದ್ದಾಳೆ. ಇಡೀ ಕಾದಂಬರಿ ಚಲಿಸುವುದು ಭಯದ ನೆರಳಿನಲ್ಲಿ. ಅವಳ ಜೀವನದುದ್ದಕ್ಕೂ ಅವಳನ್ನು ಕರಿನೆರಳಿನಂತೆ ಹಿಂಬಾಲಿಸುವುದು ಬಾಲ್ಯದಲ್ಲಿ ತನ್ನ ತಮ್ಮನನ್ನು ನೀರುಪಾಲಾಗುವುದರಿಂದ ಕಾಪಾಡದೇ ಹೋದುದು. ಈ ಆಘಾತ ತೀವ್ರವಾಗುವುದೇ ಇದ್ದ ಒಬ್ಬನೇ ವಂಶೋದ್ಧಾರಕನಾದ ಮಗನನ್ನು ಕಳೆದುಕೊಂಡ ಅವಳ ತಾಯಿ ತನ್ನ ಮಗನಾದ ಧ್ರುವನ ಸಾವಿಗೆ ಸರುವನ್ನು ಹೊಣೆಗಾರಳನ್ನಾಗಿ ಮಾಡುವಾಗ. "You killed him. Why didn't you die? Why are you alive when he is dead?" (p.191)

ಗಂಡಿನ ಆಶ್ರಯವನ್ನು ಕಳೆದುಕೊಂಡು ಹೆಣ್ಣು ಒಂಟಿಯಾಗುವ ಈ ಭಯವನ್ನು ಸರುವಿನ ತಾಯಿ ಕಮಲಾ ಕೂಡ ತನ್ನ ಬಾಲ್ಯದಿಂದಲೇ ಹೊತ್ತುಕೊಂಡು ಬಂದಿರುತ್ತಾಳೆ. ಅವಳ ತಂದೆಯಾದವನು ಸಂನ್ಯಾಸಿಯಾಗುವುದರ ಮೂಲಕ ಅವಳ ತಾಯಿ ಹಾಗೂ ಒಬ್ಬ ಸಹೋದರಿಯನ್ನು ಅನಾಥರನ್ನಾಗಿ ನಡುನೀರಿನಲ್ಲಿ ಕೈಬಿಟ್ಟು ಹೋಗಿರುತ್ತಾನೆ. ಕಮಲಳಿಗೆ ಅವಳ ತಾಯಿ ಹೊರಿಸಿದ ಭಯವನ್ನು ಅವಳು ತನ್ನ ಮಗಳಿಗೆ ವರ್ಗಾಯಿಸುತ್ತಾಳೆ. ಆದುದರಿಂದಲೇ ಅವಳಿಗೆ ತಾಯಿ ಭಯೋತ್ಪಾದಕಳಂತೆ ಕಾಣುತ್ತಾಳೆ. ಹೀಗೆ ಭಯದ ಮೂಲವರಿಯದ ಅಜ್ಞಾನದಿಂದ ಹೆಣ್ಣು ಅದನ್ನು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ವರ್ಗಾಯಿಸುತ್ತಾ ಬರುತ್ತಿದ್ದಾಳೆ. ಹೀಗಾಗಿ ಕಮಲಳಿಗೆ ಮಗನನ್ನು ಕಳೆದುಕೊಂಡ ದುಃಖದಲ್ಲಿ ಸರಿತಾ ಉಳಿದುದು ಒಂದು ಭಾರವಾಗಿ ಕಂಡಿದೆ. ಸರಿತಾಳ ಕಣ್ಣಿಗೆ ತನ್ನ ತಾಯಿ ಒಬ್ಬ ಅಘೋಷಿತ ಶತ್ರುವಾಗಿ ಮಾರ್ಪಾಡಾಗಿಬಿಡುತ್ತಾಳೆ. ತನ್ನ ತಾಯಿಗೆ ತಾನು ಏನೆಂದು ತೋರಿಸಬೇಕೆಂದು, ತಾಯಿಯ ಇಚ್ಛೆಗೆ ವಿರುದ್ಧವಾಗಿ ಮೆಡಿಕಲ್ ಓದಲು ಸೇರಿಕೊಳ್ಳುತ್ತಾಳೆ, ಅವಳ ಮೇಲೆ ಸೇಡು ತೀರಿಸಿಕೊಳ್ಳಬೇಕೆಂದೇ ಮನು ಎನ್ನುವ ಕೆಳಜಾತಿಯ ಹುಡುಗನನ್ನು ಮದುವೆಯಾಗುತ್ತಾಳೆ. ಪ್ರೀತಿಗಾಗಿ ಹಸಿದು ಹಂಬಲಿಸುವ ಅವಳಿಗೆ ಮದುವೆಯಾದ ಪ್ರಾರಂಭದಲ್ಲಿ ಸ್ವರ್ಗವೆನಿಸಿದರೂ ಕ್ರಮೇಣ ಅವಳ ವೈದ್ಯ ವೃತ್ತಿಯ ಯಶಸ್ಸು, ಅವಳ ಆರ್ಥಿಕ ಸ್ವಾತಂತ್ರ್ಯ ಮನೆಯ ಶಾಂತಿಯನ್ನು ಕದಡಲು ಕಾರಣವಾಗುತ್ತದೆ. ಕೀಳರಿಮೆ ಬೆಳಸಿಕೊಳ್ಳುವ ಅವಳ ಗಂಡನಿಂದ ಪ್ರತಿ ರಾತ್ರಿ ಲೈಂಗಿಕ ಅತ್ಯಾಚಾರಕ್ಕೆ ಗುರಿಯಾಗುತ್ತಾಳೆ. ಜೊತೆಗೆ ತನ್ನ ತಾಯಿ ಬಾಲ್ಯದಿಂದಲೂ ಅವಳ ಮನದಲ್ಲಿ ಬಿತ್ತಿದ ಹೆಣ್ಣೆಂಬ ಕೀಳರಿಮೆಯಿಂದ ನರಳುತ್ತಾಳೆ. ತಾನು ಹೆಣ್ಣಾಗಿರುವುದರಿಂದಲೇ ಅತ್ಯಾಚಾರಕ್ಕೆ ಒಳಗಾಗ ಬೇಕಾದ ಅಸಹಾಯಕತೆಯನ್ನು ಅನುಭವಿಸುತ್ತಾಳೆ.

ಬಾಲ್ಯದಲ್ಲಿ ತಂದೆ, ಯೌವ್ವನದಲ್ಲಿ ಗಂಡ ಹಾಗೂ ವೃದ್ಧಾಪ್ಯದಲ್ಲಿ ಮಗ ಹೆಣ್ಣನ್ನು ರಕ್ಷಿಸುತ್ತಾನೆ ಎನ್ನುವ ನಂಬಿಕೆಯ ವ್ಯಂಗ್ಯದಂತೆ ಅವಳ ಬದುಕು ಸಾಗುತ್ತದೆ. ರಕ್ಷಣೆ ಎನ್ನುವುದು ಹಾವಿನ ಹೆಡೆಯ ನೆರಳಿನಂತಾಗುತ್ತದೆ. ಈ ಎಲ್ಲರೂ ಭಯೋತ್ಪಾದಕರಾಗಿ ಕಾಣುತ್ತಾರೆ. ಅವಳ ವೃತ್ತಿಯೊಳಗೆ ಬರುವ ಪುರುಷ ಸ್ನೇಹಿತರು ಕೂಡ ಅವಳ ಸ್ನೇಹವನ್ನು ದುರುಪಯೋಗಗೊಳಿಸಲು ನೋಡುತ್ತಾರೆ.

ಕಾದಂಬರಿ ಹೀಗೆ ಭಯದ ನರಳುವಿಕೆಯಲ್ಲಿಯೇ ನಿಂತುಬಿಡುವುದಿಲ್ಲ. ಈ ಕಾದಂಬರಿಯ ಯಶಸ್ಸಿರುವುದೇ ಸರಿತಾ ಈ ಎಲ್ಲ ಭಯದ ಆಚೆಗೆ ಬರುವುದರಲ್ಲಿ, ಹೊರಗಿನ ಸಂಗತಿಗಳನ್ನು ಪ್ರಜ್ಞಾಪೂರ್ವಕವಾಗಿ ಅರ್ಥೈಸುವುದರಲ್ಲಿ.


ಸರು ತನ್ನ ತಾಯಿ ಸತ್ತ ಸುದ್ದಿ ಕೇಳಿ ಪ್ರಥಮಬಾರಿಗೆ ತವರಿಗೆ ಮರಳುತ್ತಾಳೆ. ಹೀಗೆ ಮರಳುವುದರ ಹಿಂದೆ ಗಂಡನಿಂದ ನಿತ್ಯ ಹಿಂಸೆಯನ್ನ

ತಪ್ಪಿಸಿಕೊಳ್ಳಬಹುದೆಂಬ ಗ್ರಹಿಕೆಯಿಂದ ಗಂಡನ ಮನೆಯನ್ನು ಬಿಟ್ಟು ಬರುತ್ತಾಳೆ. ತಂದೆಯ ಬಳಿಗೆ ಬರುವ ಅವಳು ಹೊಸ ಅರಿವಿನ ಬೆಳಕಿನಲ್ಲಿ ಹೊರಗಿನ ಜಗತ್ತನ್ನು ನೋಡಲು ಪ್ರಾರಂಭಿಸುತ್ತಾಳೆ. ಬಾಲ್ಯದಿಂದ ಘಾಸಿಗೊಳಗಾದ ಅವಳ ವ್ಯಕ್ತಿತ್ವ ಹೊಸ ಅರಿವಿಗೆ ತೆರೆದುಕೊಳ್ಳುತ್ತದೆ.

You are your own refuge;
There is no other refuge.
This refuge is hard to achieve.

ಕಾದಂಬರಿಯಲ್ಲಿ ಬರುವ ಧಮ್ಮಪದದ ಈ ಸಾಲುಗಳು ಕಾದಂಬರಿಯ ಕೇಂದ್ರವನ್ನು ಬಿಂಬಿಸುತ್ತವೆ. ತನ್ನ ನೊಗವನ್ನು ತಾನೇ ಹೊರಬೇಕು, ತನಗೆ ತಾನೇ ಹೊಣೆ ಎನ್ನುವ ಅರಿವು ಅವಳಲ್ಲಿ ಉಂಟಾಗುವುದೇ ಅವಳ ಬದುಕಿನ ಮುಖ್ಯ ತಿರುವಾಗಿದೆ. ಹೊರಗಿನ ಸಂಗತಿಗಳು ಬದಲಾಗಲಾರವು ಎಂದಾಗ ತಾನೇ ಬದಲಾಗುವುದರ ಮೂಲಕ ಹೊರಗಿನ ಸಂಗತಿಗಳನ್ನು ಎದುರಿಸುವ ತಾಖತ್ತನ್ನು ಬೆಳೆಸಿಕೊಳ್ಳುತ್ತಾಳೆ. ಅವಳ ವ್ಯಕ್ತಿತ್ವ ಬೆಳವಣಿಗೆಯ ಒಳಮುಖದ ಚಲನೆ ಪ್ರಾರಂಭವಾಗುತ್ತದೆ. ತನ್ನೊಳಗಿನ ತನ್ನನ್ನು ಶೋಧನೆಗೆ ಒಳಪಡಿಸಿದಾಕ್ಷಣ ವಿಲಕ್ಷಣ ಆನಂದದಿಂದ ಕುಣಿದಾಡುತ್ತಾಳೆ. ಅವಳ ಶೋಧನೆ ಪೂರ್ಣಗೊಂಡಾಗ ತನ್ನೊಳಗೆ ಬಾಲ್ಯದಿಂದ ಅಡಗಿ ಕೂತಿದ್ದ ಪಾಪಪ್ರಜ್ಞೆಯ ಸಹೋದರಿಯನ್ನು, ಬಂಡುಕೋರ ಮಗಳನ್ನು, ಗಂಡನನ್ನು ಪ್ರೀತಿಸುವಲ್ಲಿ ವಿಫಲಳಾದ ಹೆಂಡತಿಯನ್ನು ಗುರುತಿಸುವುದರ ಮೂಲಕ ಅವರೆಲ್ಲರನ್ನು ಮೀರಲು ಸಾಧ್ಯವಾಗುವುದು – ಈ ಎಲ್ಲದರಿಂದ ತಾನು ಓಡಿ ಹೋಗಬೇಕಾದ ಅಗತ್ಯವಿಲ್ಲವೆಂದು ತಿಳಿದಾಗಲೇ. ತನ್ನನ್ನು ತಾನೇ ರಕ್ಷಿಸಿಕೊಳ್ಳಬೇಕೆಂಬ ಅರಿವು ಮೂಡಿದಾಗಲೇ ವ್ಯಕ್ತಿ ಮನುಷ್ಯ ಸಂಬಂಧದಾಚೆಗೆ ಬದುಕುವುದು ಅಸಾಧ್ಯ, ವ್ಯಕ್ತಿತ್ವವೆನ್ನುವುದು ಅರಳುವುದು ಮನುಷ್ಯ ಸಂಬಂಧದ ಮೂಲಕ, ಇಂತಹ ಸಂಬಂಧದ ಮಾನವೀಯ ಮೌಲ್ಯಗಳನ್ನು ಪರಸ್ಪರ ನಂಬುಗೆ ಹಾಗೂ ವಿಶ್ವಾಸದ ಮೇಲೆ ಬೆಸೆಯುವವಳು ಮಹಿಳೆ ಎಂಬ ಜ್ಞಾನೋದಯವಾದಾಗ ತವರು ಮನೆಯಲ್ಲಿ ಥೇಟ್ ತನ್ನ ತಾಯಿಯ ಹಾಗೆಯೇ ಮನೆಯೊಳಗಿನ ಕೆಲಸಗಳನ್ನು ಮಾಡಲು ಮುಂದಾಗುತ್ತಾಳೆ. ಗಂಡನಿಂದ ವಿಚ್ಛೇದನವನ್ನು ಪಡೆದುಕೊಳ್ಳಬೇಕೆಂದು ತವರು ಮನೆಗೆ ಬಂದಿದ್ದವಳು ಗಂಡ ಬಂದರೆ ಬಾಗಿಲನ್ನು ತೆರೆಯಬಾರದೆಂಬ ಕೋರಿಕೆಯನ್ನು ತಂದೆಯ ಮುಂದಿಟ್ಟವಳು, ಕೊನೆಗೆ ಹೊಸ ಮನುಷ್ಯಳಾಗಿ ಪರಿವರ್ತನೆ ಹೊಂದುತ್ತಾಳೆ. ಈಗ ಅವಳ ಕೋರಿಕೆ ಬದಲಾಗಿದೆ. "'And oh yes Baba, if Manu comes, tell him to wait, I'll be back as soon as I can". ಈ ಬದಲಾವಣೆ ಅವಳ ಇಡೀ ವ್ಯಕ್ತಿತ್ವದಲ್ಲಾದ ಮಾರ್ಪಾಡಿನ ಪ್ರತೀಕವಾಗಿದೆ. ಕತ್ತಲಿನೊಂದಿಗೆ ಪ್ರತಿದಿನಾ ಅವಳಿಗೆ ಆವರಿಸುತ್ತಿದ್ದ ಭಯ ಕರಗಿಹೋಗುತ್ತದೆ. ಹೆಣ್ಣಾಗಿರುವ ಭಯದಿಂದ ಬಿಡುಗಡೆ ಹೊಂದಬೇಕಾಗಿರುವುದು ನಮ್ಮ ಸಂಸ್ಕೃತಿಯ ಪ್ರಶ್ನೆಯಾಗಿದೆ ಎಂಬುದನ್ನು ಮಾರ್ಮಿಕವಾಗಿ ಎತ್ತಿ ಹಿಡಿಯುತ್ತದೆ. (ಈ ಕಾದಂಬರಿಯನ್ನು ಪ್ರೇಮಾ ಕಾರಂತರ ನಿರ್ದೇಶನದಲ್ಲಿ 'ಬಂದ್‌ಜರೊಕೆ' ಎಂಬ ಚಲನಚಿತ್ರವಾಗಿ ತೆರೆಕಂಡಿತ್ತು.)

ಸರಿತಾ ಅನುಭವಿಸುವ ಭಯವನ್ನೇ ಬೇರೊಂದು ರೂಪದಲ್ಲಿ That Long Silence (1989) ಕಾದಂಬರಿಯ ಜಯ ಅನುಭವಿಸುತ್ತಾಳೆ. ಬದುಕಿನ ಕಷ್ಟ ಕೋಟಲೆಗಳಿಗೆ ಸಿಕ್ಕ ಜಯ ಒಬ್ಬ ಮಧ್ಯಮವರ್ಗದ ಗೃಹಿಣಿ. ತನ್ನ ಬದುಕಿನುದ್ದಕ್ಕೂ ಮೌನವನ್ನು ಆರೋಪಿಸಿ ಕೊಳ್ಳುತ್ತಾಳೆ. ಗಂಡ ತನ್ನ ಅವ್ಯವಹಾರಗಳಿಂದಾಗಿ ಅವಳಿಂದ ದೂರವಾದಾಗ ಅವನ ಅನುಪಸ್ಥಿತಿಯಲ್ಲಿ, ಒಬ್ಬ ಪತ್ರಕರ್ತೆಯಾದ ಅವಳು ತನ್ನ ಬಗ್ಗೆ ತನ್ನ ಕುಟುಂಬದ ಬಗ್ಗೆ ಬರೆಯುವುದಕ್ಕೆ ಪ್ರಾರಂಭ ಮಾಡುತ್ತಾಳೆ. ಅವಳೊಳಗಿರುವ ಲೇಖಕಿಯನ್ನು ಗಂಡ ಉತ್ತೇಜನ ಕೊಡದ ಕಾರಣ ಮರೆತು ಬಿಟ್ಟಿದ್ದವಳು, ಮೌನದ ಮೊರೆ ಹೋಗಿದ್ದವಳು ಈಗ




ಬರವಣಿಗೆಯ ಮೂಲಕವೇ ತನ್ನ ಎಂದಿನ ಮೌನವನ್ನು ಮುರಿಯಲು ಪ್ರಯತ್ನಿಸುತ್ತಾಳೆ. ಈ ಮೌನವು ಪ್ರತಿಭಟನೆಯೂ ಹೌದು; ಅಸಹಾಯಕತೆಯೂ ಹೌದು. ತನ್ನ ಬದುಕಿನ ಆಘಾತಗಳನ್ನೂ, ಅನುಭವಿಸಿದ ಒಂಟಿತನನ್ನೂ, ತನ್ನ ಯೌವ್ವನದ ಕನಸುಗಳೆಲ್ಲಾ ನುಚ್ಚುನೂರಾದುದನ್ನೂ ಅರಿವಿಗೆ ತಂದುಕೊಳ್ಳುತ್ತಾಳೆ. ಸಂಸಾರವನ್ನು ಎರಡು ಎತ್ತುಗಳಿಗೆ ಕಟ್ಟಿರುವ ಬಂಡಿಯೆಂಬ ನಮ್ಮ ಕಲ್ಪನೆಯ ಬಗ್ಗೆಯೇ ತಕರಾರುಗಳಿವೆ. ಬಂಡಿ ಯಾಂತ್ರಿಕತೆಯ ಪ್ರತೀಕ ಕೂಡ ಹೌದು. ಸಂಸಾರದ ಭಾರದ ಹೊರೆ ಎರಡೆತ್ತುಗಳ ಮೇಲಿರುವುದು ನಿಜ. ಆದರೆ ಎರಡೂ ಎತ್ತುಗಳು ಒಂದೇ ಮಾರ್ಗದಲ್ಲಿ ಮಾತ್ರ ಎಳೆಯಬೇಕು. ಮಾರ್ಗವನ್ನು ನಿರ್ಧರಿಸುವವನು ಗಂಡನೇ ಆಗಿರುವುದು ಪಿತೃಪ್ರಧಾನ ಸಮಾಜದ ನೀತಿ. ಸೀತಾ ಸಾವಿತ್ರಿಯರ ಮಾದರಿಯನ್ನು ಜಯ ನಿರಾಕರಿಸುತ್ತಾಳಾದರೂ, ಅವಳಿಗೆ ಆ ಮಾದರಿಗಳ ಪರ್ಯಾಯವಿಲ್ಲದಾಗಿದೆ. "No, what I have to do with these mythical women? I can't fool myself. The truth is simpler. Two bullocks yoked together... it is more comfortable for them to move in the same direction. To go in different directions would be painful; and what animal would voluntarily choose pain? (pp-11-12)

ಆದರೆ ಜಯಾಳಿಗೆ ಕೊನೆಗೆ ತನ್ನ ಬದುಕೆನ್ನುವುದು ಮನುಷ್ಯ ಸಂಬಂಧದ ಮೂಲಕವೇ ಅಸ್ತಿತ್ವ ಪಡೆದುಕೊಳ್ಳಬೇಕು ಎನ್ನುವ ಅರಿವಾಗುತ್ತದೆ. ಮನುಷ್ಯ ಸಂಬಂಧಗಳಾಚೆಗೆ ಮಹಿಳೆಗೆ ಯಾವ ಅಸ್ತಿತ್ವವೂ ಇಲ್ಲ. ಅವಳು ತಾಯಿಯಾಗಿ ಹೆಂಡತಿಯಾಗಿ ಮಗಳಾಗಿ ಅತ್ತೆಯಾಗಿ ಹಿಂದಿನಿಂದ ಬಂದಿರುವ ಪಾತ್ರಗಳನ್ನು ಬದುಕುವುದರಲ್ಲೇ ಅವಳ ಅಸ್ಮಿತೆ ಅಡಗಿದೆ. ಆದರೆ ಅದನ್ನು ಅಧೀನತೆಯಿಂದ ಮೌನದಿಂದ ಒಪ್ಪಿಕೊಳ್ಳುವುದರ ಮೂಲಕ ಅಲ್ಲ, ಪ್ರಜ್ಞಾಪೂರ್ವಕವಾಗಿ ನಿಭಾಯಿಸುವುದರ ಮೂಲಕ.

ದೇಶಪಾಂಡೆಯವರ Binding Wire (1993) ನಲ್ಲಿ ಕೂಡ ಮಹಿಳೆಯ ಅಸ್ತಿತ್ವದ ಹುಡುಕಾಟ ನಡೆದಿದೆ. ಇಲ್ಲಿನ ನಾಯಕಿ ಊರ್ಮಿಳಾ ತನ್ನ ಹೆಣ್ಣುಮಗುವನ್ನು ಕಳೆದುಕೊಂಡ ದುಃಖದಿಂದ ಕಾದಂಬರಿ ತೆರೆದುಕೊಳ್ಳುತ್ತದೆ. ಮಗಳನ್ನು ಕಳೆದುಕೊಳ್ಳುವುದೆಂದರೆ ತಾಯಿ ತನ್ನ ಸಧ್ಯದ ಕೊಂಡಿಯನ್ನ ಕಳಚಿಕೊಂಡಂತೆ. ತಾಯಿ

ಬದುಕುವುದೇ ಮಗಳ ಮೂಲಕವಾದುದರಿಂದ ಅವಳನ್ನು ಕಳೆದುಕೊಳ್ಳುವುದು ತಾಯಿಯ ಬದುಕಿನಲ್ಲಿ ನಿರ್ವಾತವನ್ನು ಸೃಷ್ಟಿಸುತ್ತದೆ.

ಪಕ್ಕದ ಜೋಪಡಿಯಲ್ಲಿರುವ ಸಕ್ಕುವಿನ ಮಗಳು ಕಲ್ಪನ ಅತ್ಯಾಚಾರಕ್ಕೆ ಒಳಗಾದಾಗ ಅವಳ ಮೂಲಕ ತಾನು ಕಳೆದುಕೊಂಡ ಮಗಳನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಾಳೆ. ಸಕ್ಕುವಿನ ದುಃಖದಲ್ಲಿ ತನ್ನ ದುಃಖವನ್ನು ಸಮೀಕರಿಸಿಕೊಳ್ಳುತ್ತಾಳೆ. ತನ್ನ ಅಂತರಂಗದ ನೋವನ್ನು ಹೊರಜಗತ್ತಿನ ಜೊತೆಗೆ ಸಮೀಕರಿಸಿಕೊಳ್ಳತೊಡಗಿದಾಗ, ಅವಳ ಅರಿವಿನ ಸ್ವರೂಪವೂ ವಿಸ್ತಾರಗೊಳ್ಳುತ್ತಾ ಹೋಗುತ್ತದೆ. ಅವಳ ಒಳಗಿನ ಜಗತ್ತು ವಿಸ್ತಾರವಾಗುತ್ತಾ ಹೋಗುತ್ತದೆ. ತಾನು ಮತ್ತು ಸಕ್ಕು ಬೇರೆ ಎನಿಸುವುದೇ ಇಲ್ಲ. ಇಡೀ ಮಾನವ ಸಂಬಂಧದ ಜೊತೆಗೆ ತನ್ನನ್ನು ಗುರುತಿಸಿ ಕೊಳ್ಳುವುದರ ಮೂಲಕವೇ ತನ್ನ ಅಸ್ತಿತ್ವವನ್ನು ಸ್ಥಾಪಿಸಲು ಪ್ರಯತ್ನಿಸುವುದು ಅವಳ ಪ್ರಜ್ಞಾವಿಸ್ತಾರದ ದ್ಯೋತಕವಾಗಿದೆ.

ಈ ಮೂರು ಕಾದಂಬರಿಗಳಲ್ಲಿ ಅರಿವಿನ ಸ್ಫೋಟದ ಕ್ಷಣಗಳಲ್ಲಿ ಎಲ್ಲಾ ಪಾತ್ರಗಳೂ ತಾಯ್ತನಕ್ಕೆ ಮರಳುವುದರ ಸ್ವರೂಪವನ್ನು ಕಾಣಬಹುದು. ಸರು ತಾಯಿಯ ವಿರುದ್ಧ ಬಂಡೆದ್ದವಳು, ಕೊನೆಗೆ ತವರು ಮನೆಗೆ ಮರಳಿ ತಾಯಿಯೇ ಆಗಿಬಿಡುತ್ತಾಳೆ. ಜಯ ತನ್ನ ಮೌನ ಮುರಿದ ಗಳಿಗೆಯಲ್ಲಿ ತನ್ನ ಅಸಹಾಯಕತೆಗೆ ಕಾರಣಗಳನ್ನು ಶೋಧಿಸುತ್ತಾ ತಾನು ಹೆಂಡತಿ–ತಾಯಿ ಎಂಬುದನ್ನು ಗುರುತಿಸಿ ಕೊಳ್ಳುತ್ತಾಳೆ, ಊರ್ಮಿ ಜಗತ್ತಿನ ತಾಯಂದಿರ ಜೊತೆ ತನ್ನನ್ನು ಗುರುತಿಸಿಕೊಳ್ಳುವುದರ ಮೂಲಕವೇ ತನ್ನ ಅಸ್ತಿತ್ವವನ್ನು ಶೋಧಿಸುತ್ತಾಳೆ.

ತಾಯಿ ಭಾವುಕ ಒತ್ತಾಸೆಗಾಗಿ ಅವಲಂಬಿಸುವುದು ತನ್ನ ಮಕ್ಕಳನ್ನೇ. ಅದರಲ್ಲೂ ಹೆಣ್ಣುಮಕ್ಕಳನ್ನು. ಯಾಕೆಂದರೆ ಹೆಣ್ಣುಮಕ್ಕಳ ಜೊತೆ ತಾಯಿ ತನ್ನ ಭಾವ ಸಂಬಂಧವನ್ನು ಸುಲಭವಾಗಿ ಕಲ್ಪಿಸಿಕೊಳ್ಳಬಹುದಾಗಿದೆ. ಮಗಳು ತಾಯಿಯ ಚಟುವಟಿಕೆಗಳನ್ನು ಮೆಚ್ಚುವುದು, ಪ್ರೋತ್ಸಾಹಿಸುವುದು ಅದನ್ನು ಅನುಕರಣ ಮಾಡುವುದು ಕೊನೆಗೆ ಅವಳೇ ಆಗಿಬಿಡುವುದು ಇದು ಮಗಳು ತನ್ನ ಆತ್ಮವಿಶ್ವಾಸವನ್ನು ದೃಢೀಕರಿಸುವ ರೀತಿಯಾಗಿದೆ. ಆಲಿಸ್‌ವಾಕರ್‌ಳ ಪ್ರಕಾರ "ತಾಯಿಯೆಂದರೆ ನಡೆದಾಡುವ ಮಾನವಜನಾಂಗದ ಚರಿತ್ರೆ"

ಕುಟುಂಬದ ಯೋಗಕ್ಷೇಮಕ್ಕಾಗಿ ದುಡಿಯುವುದರ ಹಿಂದಿರುವ ಪ್ರೀತಿ, ಕಾಳಜಿ, ಪೋಷಣೆಗಳು ಹೆಣ್ಣಿನ ಶಕ್ತಿಯ ಸ್ವರೂಪಗಳು ದೌರ್ಬಲ್ಯಗಳಲ್ಲ, ಕುಟುಂಬದೊಳಗೆ ಸ್ತ್ರೀ ಪುರುಷರಿಬ್ಬರೂ ಒಂದು ಅಖಂಡತೆಯ ಎರಡು ಭಿನ್ನ ಸ್ವರೂಪಗಳು. ಪರಸ್ಪರ ಅವಿಶ್ವಾಸದಿಂದ ಅಲ್ಲಿ ಭೇದ ಮೊಳಕೆಯೊಡೆಯಲು ಸಾಧ್ಯವೇ ಹೊರತು ಅನ್ಯಥಾ ಅಲ್ಲ. ಹೆಣ್ಣು ಅಜ್ಞಾನದಿಂದ ತನ್ನ ಭೂಮಿಕೆಯನ್ನು ತನ್ನ ವಿಧಿಯೆಂದೋ, ಹಣೆ ಬರಹವೆಂದೋ ಅಸಹಾಯಕವಾಗಿ ಕುರುಡಾಗಿ ಸ್ವೀಕರಿಸುವುದಕ್ಕೂ, ಸರಿತಾ ಅದನ್ನು ಪ್ರಜ್ಞಾಪೂರ್ವಕ (assertive) ಜವಾಬ್ದಾರಿಯಿಂದ ಸ್ಪಷ್ಟ ಗ್ರಹಿಕೆಯಿಂದ ಸ್ವೀಕರಿಸುವುದಕ್ಕೂ ವ್ಯತ್ಯಾಸವಿದೆ. ಸರಿತಾಳಲ್ಲಿ ಉದಯವಾದ ಹೊಸ ಮಹಿಳೆಗೆ ಅದನ್ನು ವಿಧಿಯೆಂದು ಸ್ವೀಕರಿಸಲು ಸಾಧ್ಯವಿಲ್ಲ. ಅವಳಲ್ಲಿ ಉಂಟಾದ ತಾರ್ಕಿಕ ಎಚ್ಚರ, ಸಾಮಾಜಿಕ ಸಂಬಂಧಗಳನ್ನು ರಕ್ಷಿಸಬೇಕಾಗಿರುವ ಜವಾಬ್ದಾರಿ, ಸಾಮಾಜಿಕ ಸವಾಲುಗಳನ್ನು ನಿಭಾಯಿಸಬೇಕಾಗಿರುವ ಗುರುತರವಾದ ಹೊಣೆಗಾರಿಕೆ ಹೆಣ್ಣಿನ ಮೇಲಿದೆ ಎಂಬುದನ್ನು ದೃಢೀಕರಿಸಿಕೊಳ್ಳುವುದರಲ್ಲಿದೆ. ಈ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿಭಾಯಿಸುವುದರ ಮೂಲಕವೇ ಮಹಿಳೆಯ ಸಾಮಾಜಿಕ ಸ್ಥಾನಮಾನದಲ್ಲಿ ಬದಲಾವಣೆಯನ್ನು ತರಬಹುದು. ಮಹಿಳೆ ತನ್ನ ಶಕ್ತಿಯನ್ನು ಸಾಬೀತುಪಡಿಸಬೇಕಾಗಿದೆ. ಈ ಶಕ್ತಿಗೆ ವ್ಯವಸ್ಥೆಯಲ್ಲಿನ ಕಂದರಗಳನ್ನು ಬಯಲಾಗಿಸಬಲ್ಲ, ಬದಲಾಯಿಸಬಲ್ಲ ತಾಖತ್ತು ಇದೆ.


ಈ ಶಕ್ತಿಯೆನ್ನುವುದು ಮಹಿಳೆಗೆ ಹೊರಗಿನಿಂದ ದೊರಕು ವಂತಹುದ್ದಲ್ಲ. ಅದು ತನ್ನೊಡಲಿನಿಂದಲೇ ಬರುವಂತಹುದು. ಪ್ರತಿ ಮಹಿಳೆಯೂ ಆರೋಪ ಆಕ್ಷೇಪಗಳನ್ನು (Blame game) ಬಿಟ್ಟು, ತನ್ನ ಶಕ್ತಿಗೆ ಒದಗಿರುವ ವಿಸ್ಮೃತಿಯತ್ತ ಕೇಂದ್ರೀಕರಿಸಬೇಕು. ಆ ಮೂಲಕವೇ ಬದುಕಿನ ಸ್ವರೂಪವನ್ನು ಗುರುತಿಸಿಕೊಳ್ಳುವ ಮತ್ತು ಸೃಜನಶೀಲಗೊಳಿಸಿಕೊಳ್ಳುವ ಕಲೆಯನ್ನು ಆತ್ಮಸಾತ್ ಮಾಡಿಕೊಳ್ಳಲು ಸಾಧ್ಯ ಎಂಬ ಆಶಯವನ್ನು ಈ ಕಾದಂಬರಿಗಳು ಅನಾವರಣ ಗೊಳಿಸುತ್ತವೆ.

❑

ಮದುವೆ ಚೌಕಟ್ಟಿನೊಳಗೆ ಕ್ರೌರ್ಯ, ವಂಚನೆಗಳಿಗೆ ಒಳಗಾಗಿ ದಿನೇ ದಿನೇ ಕುಬ್ಜರಾಗಿ, ದನಿಯಿಲ್ಲದ ಸ್ಥಿತಿಯನ್ನು ಅನುಭವಿಸುತ್ತ ಹೊಡೆತ, ಬಡಿತಗಳ ದೈಹಿಕ ದಂಡನೆಗೂ ಒಳಗಾಗುವುದು ಗ್ರಾಮೀಣ ಅಥವಾ ಕೊಳಚೆ ಪ್ರದೇಶದ ನಿರಕ್ಷರಿ, ನಿರ್ಗತಿಕ ಮಹಿಳೆಯರೇನೂ ಅಲ್ಲ. ವಿದ್ಯಾವಂತರೆನಿಸಿ ಉನ್ನತ ಪದವಿ, ಹುದ್ದೆ, ಸಂಬಳಗಳಿರುವ ಹೆಂಡತಿಯರನ್ನೂ ಬಡಿದು ಬಿಸಾಕಬಲ್ಲ ವೀರರು ನಮ್ಮ ಸಮಾಜದಲ್ಲಿ ಹೇರಳವಾಗಿ ಕಾಣಸಿಗುತ್ತಾರೆ. ಈ ದೈಹಿಕ ಹಿಂಸಾಚಾರ ಕ್ಷಣಿಕ ಕೋಪಾವೇಶ ಅಷ್ಟೇ ಆಗಿರುವುದಿಲ್ಲ. ಹೆಣ್ಣಿನ ಮೇಲೆ ಅಧಿಕಾರ ಚಲಾಯಿಸಬಲ್ಲೆನೆಂಬ ಗಂಡಿನ ಯಜಮಾನಿಕೆ, ಅಹಮಿಕೆಗಳ ಪ್ರತೀಕ ಇದು. ಹಾಗೆಯೇ ಗಂಡ–ಹೆಂಡತಿಯರ ಅಸಮಾನ ಸಂಬಂಧಗಳ ಕುರುಹು. ಜೀತದಾಳಿನ ಮೇಲೆ ಭೂಮಾಲಿಕನೊಬ್ಬ ಹಕ್ಕಿನಿಂದ ನಡೆಸುವ ದೌರ್ಜನ್ಯದ ರೀತಿಯದೇ ಇದೂ ಆಗಿರುತ್ತದೆ.

*–ಮಾನಸ*

# ಕಾಗೆಯ ರೋದನೆ



*ಮೂಲರಚನೆ : ಪ್ರೊ. ಎಂಡ್ಲೂರಿ ಸುಧಾಕರ್*
*ಅನುವಾದ : ಡಾ॥ ಆಂಜನಪ್ಪ*

**ದಿನಾಂಕ20/06/2009ರಂದು ಶ್ರೀಶೈಲದ ಭ್ರಮರಾಂಬಿಕ ದೇವಾಲಯದ ಒಳಕ್ಕೆ ಅನಪೇಕ್ಷಿತವಾಗಿ ಕಾಗೆಯೊಂದು ಪ್ರವೇಶಿಸಿದ ಕಾರಣಕ್ಕಾಗಿ ಎರಡು ಗಂಟೆಗಳ ಕಾಲ ಪೂಜೆ, ಪುನಸ್ಕಾರ ನಿಲ್ಲಿಸಿ, ದೇವಾಲಯ ಶುದ್ಧೀಕರಣ ಮಾಡಿದರು. ಅದಕ್ಕೆ ಪ್ರೊ. ಎಂಡ್ಲೂರಿ ಸುಧಾಕರ್ ಅವರು ಸ್ಪಂದಿಸಿದ್ದು ಈ ರೀತಿ.**

ಅಮ್ಮ!
ಶ್ರೀಶೈಲ ಭ್ರಮರಾಂಬಿಕಾ ದೇವಿ
"ನನ್ನ ಮುಟ್ಟಬೇಡವೇ, ನನ್ನ ಹೊಲೆಯ ಕಾಗೆ"
ಅಂದಾಗಲೆ ಅರ್ಥವಾಯಿತು ತಾಯಿ!
ನಿನ್ನ ಆಲಯ ಪ್ರವೇಶ ಮಾಡಿದ್ದೇನೆಂದೂ
ಅಪವಿತ್ರವಾಯಿತೆಂದೂ!
ಶುದ್ಧೀಕರಣ ಮಾಡಿಸಿದ್ದೀಯಾ?
ಯಾವ ಧರ್ಮದ ಪ್ರಕಾರ ಮಾಡಿಸಿದ್ದೀಯಮ್ಮ?
ನಾನು ಮಣ್ಣು ಮುಕ್ಕುವವಳು
ಹೆಂಟೆ ತಿಪ್ಪೆಯ ಮೇಲೆ ಬದುಕುವ ತಿರ್ಯಕ್ಕು ನಾನು
ಯಾವ ಸಂಪ್ರದಾಯದ ಪ್ರಕಾರ
ಶುದ್ಧೀಕರಣ ಮಾಡಿಸಿದೆ ಶಿವಕಾಮಿನಿ?
ಗಿಣಿಶಾಸ್ತ್ರ ಏನು ಹೇಳುತ್ತೋ
ಪರೀಕ್ಷಿಸಿದ್ದೀಯಾ?
ನಾನು ಹೊಲೆಯ ಕಾಗೆಯೋ
ಮಾದಿಗ ಕಾಗೆಯೋ
ಖಾತರಿ ಮಾಡಿಕೊಂಡೆಯಾ?
ನಿನ್ನ ಪೂಜಾರಿಗಳಿಗೂ
ನಿನ್ನ ಪುರೋಹಿತವರ್ಗಕ್ಕೂ
ನಿನ್ನ ಧರ್ಮಕರ್ತರಿಗೂ
ನಮಗೊಂದು ಕಾಗೆ ಬಳಗವಿದೆ ಎಂದು ಗೊತ್ತೆ?
ಕಾಕಾಸುರನ ಕಥೆಯಲ್ಲಿ
ಕಣ್ಣು ಕಳೆದುಕೊಂಡ ಕಾಲದಿಂದಲೂ
ಅಪವಾದಕ್ಕೂ
ನಿಷ್ಠೂರಕ್ಕೂ ಗುರಿಯಾಗುತ್ತಲೇ ಇದ್ದೀನಿ

ನನಗೆ ಒಂದು ರೆಕ್ಕೆ ಕತ್ತಲು
ಒಂದು ರೆಕ್ಕೆ ಬೆಳಕು
ನಾನು ಕೂಗಿ ರೆಕ್ಕೆ ಬಡಿದ್ರೇನೆ
ಈ ಜಗತ್ತಿಗೆ ಹಗಲು ರಾತ್ರಿಗಳು
ಆದರೂ, ಸಿಡಿಲು ಬಡಿದರೂ
ಪ್ರವೇಶಾರ್ಹತೆ ಇನ್ನೂ ಇಲ್ಲದ
ಬಾವಲಿಗೂ ನನಗೂ ವ್ಯತ್ಯಾಸವೇನಿದೆ?
ನನ್ನ ಬಣ್ಣದ ದೋಷವೇನು?
ತುಪ್ಪ ನೀವು ತಿಂದಿದ್ದೀರ
ತೊಪ್ಪೆ ನನಗೆ ಉಳಿಸಿದ್ದೀರ
ಪಿತೃಗಳಿಗಾಗಿ
ಪಿಂಡ ಇಟ್ಟು ಖಾವ್ ಖಾವ್ ಎಂದು ಕೂಗುತ್ತೀರ
ನಿಮ್ಮ ಕೊಳೆ ಎಲ್ಲವ್ನೂ ಶುಚಿ ಮಾಡಿದ ಸಫಾಯಿ ಕಾಗೆ
ನಾನು
ಈಗ ನಾನು ಬೇಡವಾದೆನೆ?
ಏಕಾಕಿ ಲೋಕದಲ್ಲಿ
'ಛಿ ಕಾಗೆ' ಯಾದೆನೆ?
ಅಮ್ಮಾಜೀ ನಿನ್ನ ಗುಡಿಗೋಪುರಗಳ ಮೇಲೆ
ಅದೆಷ್ಟು ಸಾರಿ ಕೊಳೆಯ ಗಿಳಿರಾಮರು ಕೂರಲಿಲ್ಲ.
ಅದೆಷ್ಟು ಸಲ ನಿನ್ನ ತಲೆಯ ಮೇಲೆ ಹಾಲಕ್ಕಿಗಳು ಕೂಗಲಿಲ್ಲ
ಸತ್ತ ಇಲಿಗಳನ್ನು ತಂದು ಎಷ್ಟು ಸಲ
ನಿನ್ನ ಧ್ವಜ ಸ್ತಂಭಗಳ ಮೇಲೆ ಹದ್ದುಗಳು ಕುಕ್ಕಿ ತಿಂದಿಲ್ಲ
ನಾನೇನೇ ಅಷ್ಟೊಂದು ಪಾಪದವಳು?
ನನಗೇನಾ ಈ ಶುದ್ಧೀಕರಣ?
ನಾನು ಮಾಡಿದ ಅಪರಾಧವೇನು?

ನು ಹೇಳುತ್ತದೆ ವೇದಾಂತಸಾರ?
ಸಾದ ಭಗವಂತನ ನೈವೇದ್ಯವಾದರೆ,
ುಲ ಯಾರದ್ದೋ ಹೇಳಬಲ್ಲೆಯಾ?
ೀರ್ಥ ಅಮ್ಮನವರದ್ದಾದರೆ
ೆ ಮೂತ್ರ ಯಾರದ್ದೋ ಈ ಒಗಟನ್ನು ಒಡೆಯುವಿರಾ?
ಯಾವ ಗಿಡದ ಮೇಲಿಂದಾದರೂ
ಾನು ಹಿಕ್ಕೆ ಹಾಕಿದರೆ ವಾಸನೆಯೂ ಬರದು
ಾನು ಕಪ್ಪಾಗಿದ್ದರೂ
ನ್ನ ಹೇಸಿಗೆ ಬಳಿಯಾಗಿ ಏಕಿರುತ್ತೋ
ಈ ಗುಟ್ಟು ಯಾರಾದರೂ ಬಲ್ಲಿರಾ?
ನ್ನ ಕಾಗೆ ಪುರಾಣ ನೋಡಿದಿರಾ?
ನ್ನನ್ನು ಪರಿಶುದ್ಧಗೊಳಿಸಲಿಕ್ಕೆ
ಪೂಜಾರಿಗಳಿದ್ದಾರೆ
ಪುರೋಹಿತರಿದ್ದಾರೆ
ನನ್ನನ್ನೂ ನನ್ನ ಜಾತಿಯನ್ನೂ
ಪರಿಶುದ್ಧಗೊಳಿಸಲಿಕ್ಕೆ ಯಾರಿದ್ದಾರೆ?
ಭ್ರಮರಾಂಬಿಕಾದೇವೀ,
ಭದ್ರತೆ ಇಲ್ಲದವಳು
ಬಂಗಾರದ ಪಂಜರಗಳನ್ನು ಕೇಳಿದ್ದೀನಾ?
ಪಟ್ಟೆ ಪೀತಾಂಬರಗಳನ್ನು ಕೇಳಿದ್ದೀನಾ?
ಗಗನ ಕೆಂಡಗಳ ಅಗ್ಗಿಷ್ಟಿಕೆಯಲ್ಲಿ ಬೇಯಲಾರದೇ
ಬಿಸಿಲಿನ ಬೇಗೆಗೆ ತಾಳಲಾರದೇ
ನಿನ್ನ ಗುಡಿಯೊಳಕ್ಕೆ ಅಡಿಯಿಟ್ಟೆ
ತಾಯಿಯ ತಂಪುತನಕ್ಕಾಗಿ
ಒಂದಿಷ್ಟು ಒಳ್ಳೆಯ ನೀರಿಗಾಗಿ
ಕಾವ್ ಕಾವ್ ಎಂದು ಕೂಗಿದೆ
ಅದೇ ನನ್ನ ತಪ್ಪು.
ನನ್ನ ಮುಟ್ಟಿದ ದೋಷಕ್ಕೆ
ಪರಿಶುದ್ಧೀಕರಣ ಸರಿಯಾಗಿ ನಡೆಯಿತೋ ಇಲ್ಲವೋ ಮತ್ತೆ
ಇಲ್ಲದೆ ಹೋದರೆ ನನ್ನ ಆ ಜನ್ಮಪಾಪ
ನನಗೆ ಸುತ್ತಿಕೊಳ್ಳುತ್ತೇನೋ
ಾಗೆ ಬದುಕು
ಸುಡುಗಾಡು ಬದುಕು
ನಮಗೂ ನಮ್ಮವರಿಗೂ ಹೊರತು(ವಿನಾ)
ನಮ್ಮಿಂದಾಗದು...

# ಮಗು ಮತ್ತವಳ ಡೈರಿ



• *ಲೈಲಾ ಯಾಫಿ*

**ಅ**ವಳು ಪ್ರತಿ ರಾತ್ರಿ ತಪ್ಪದೆ ಡೈರಿ ಬರೆದಳು
ಕಿಟಕಿ ಪಕ್ಕದಲ್ಲೇ ಗುಂಡು ಹಾದು ಹೋದಾಗ...ಬರೆದಳು
ಇಸ್ರೇಲಿ ಸೈನಿಕರು ಅವಳಮ್ಮನನ್ನು ಕೊಂದಾಗ...ಬರೆದಳು
ಘೋರ, ಭಯಂಕರಗಳ,
ನಾಶ ನಿರ್ನಾಮಗಳ, ಬೆಂಕಿ ಜ್ವಾಲೆಗಳ...ಕಂಡು ಬರೆದಳು
ಅವಳು-ಪ್ಯಾಲೆಸ್ಟೀನಿಯಾದ ಹೆಣ್ಣುಮಗಳು
ಪ್ರತಿ ರಾತ್ರಿ ತಪ್ಪದೇ ಡೈರಿ ಬರೆದಳು
ತನ್ನ ನೋವ ಶಮನಗೊಳಿಸಲು
ದುಃಸ್ವಪ್ನಗಳ ಮರೆಯಲು
ಬರೆಯುತ್ತಲೇ ಹಾಸಿಗೆಯಲ್ಲಿ ಸತ್ತಳು
ಇಸ್ರೇಲಿಗಳು ಅವಳ ಮನೆಯ ಧ್ವಂಸಗೊಳಿಸಿದಾಗ

ಅವಳೀಗ ಗೋರಿಯಲ್ಲಿ ಮಲಗಿದ್ದಾಳೆ
ಅಸ್ತಿತ್ವವೇ ಇಲ್ಲದಂತೆ ಮರೆತೇ ಹೋಗಿದ್ದಾಳೆ
ಆದರೂ, ಅವಳ ಡೈರಿ ಹೊತ್ತು ಸಾಗುತ್ತದೆ
ಪ್ಯಾಲಿಸ್ಟೀನಿಯಾದ ಕಂದಮ್ಮಗಳ ನೋವನ್ನು
ಈಗವಳ ಗೋರಿಯ ಮೇಲೆ
ಇಸ್ರೇಲಿ ಮಕ್ಕಳು ಆಡುತ್ತವೆ, ಹಾಡುತ್ತವೆ
ನಾಳೆಗಳ ನಡುಕವಿರದೆ.
ಅವಳು ಬದುಕಿದ್ದ ಜಾಗ ಕಸಿದಿದ್ದಾರೆ
ಕುಟುಂಬದ ಉಳಿದವರು ನಿರಾಶ್ರಿತರು
ಆದರೂ, ನಾವು ಇಸ್ರೇಲನ್ನು ಬೆಂಬಲಿಸುತ್ತೇವೆ
ಹತ್ತು ಮಿಲಿಯನ್ ಡಾಲರ್ ನೀಡುತ್ತ!
ಸೃಷ್ಟಿಯಲ್ಲಿ ಎಲ್ಲರೂ ಸಮಾನರು
ಹೇಳುತ್ತಲೇ ಹೋಗುತ್ತೇವೆ
ಆದರೆ, ನಿತ್ಯ ಹತ್ತು ಮಿಲಿಯನ್ ಡಾಲರ್
ತಪ್ಪದೇ ಕಳಿಸುತ್ತೇವೆ!

*(ಅರಬ್ ಹೆಣ್ಣು ಮಗಳ ಕವಿತೆ)*
*ಅನು: ಎಂ.ಆರ್. ಕಮಲ*



# ಭಾರತದಲ್ಲಿ ಮಹಿಳಾ ಚಳವಳಿ: ರೂಪಿಸಿದ ಒತ್ತಡಗಳು, ಸಾಂಕೇತಿಕ ದಿಗಂತಗಳು

*ಮೂಲ: ಕುಂಕುಮ್ ಸಂಗಾರಿ*
*ಸಾರಾನುವಾದ : ಬಿ.ಎನ್. ಸುಮಿತ್ರಾಬಾಯಿ*

*ಶ್ರೀಮತಿ ಕುಂಕುಮ್ ಸಂಗಾರಿ ಅವರು ಸಂಪಾದಿಸಿರುವ "At the Cutting Edge Essays in honour of Kumari Jayavardena" ಗ್ರಂಥದಲ್ಲಿರುವ 'Shaping pressures and symbolic Horizens women's movement in India' ಎಂಬ ಲೇಖನದ ಸಾರಾನುವಾದದ ಮೊದಲ ಕಂತು 'ನಮ್ಮ ಮಾನಸ' ವಿಶೇಷ ಸಂಚಿಕೆ (ಮಾರ್ಚ್ 2009)ಯಲ್ಲಿ ಪ್ರಕಟವಾಗಿತ್ತು. ಮುಂದುವರಿದ ಭಾಗಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಈ ಲೇಖನಗಳು ಪ್ರತ್ಯೇಕ ಲೇಖನಗಳೂ ಹೌದು; ಒಂದು ಚಿಂತನೆಯ ಮುಂದುವರಿಕೆಯೂ ಆಗಬಹುದು.*
*– ಸಂ.*

## ಭಾಗ – 2

ಮಹಿಳಾ ಚಳವಳಿಯ ವೈಲಕ್ಷಣ್ಯಗಳನ್ನು, ಅದರ ಸಾಧನೆಯ ಅಂದಾಜನ್ನು ನೀಡುವ ಈ ಯತ್ನದಲ್ಲಿ ಇದಕ್ಕಿಂತ ಇನ್ನೂ 'ಉತ್ತಮವಾದ' ಮಹಿಳಾ ಚಳವಳಿಯನ್ನು, ಇನ್ನೂ ಹೆಚ್ಚಿನ ಸಾಮಾಜಿಕ ಪರಿವರ್ತನೆಯನ್ನು ಉಂಟುಮಾಡ ಬಹುದಿತ್ತು ಎಂದು (ನಾನು) ಸೂಚಿಸುತ್ತಿಲ್ಲ. ಆದರೂ ಈ ಮೌಲ್ಯ ಮಾಪನ ಕ್ರಿಯೆಯ ಬಗ್ಗೆಯೂ, ಇಂದಿನ ಊಹೆಗಳಿಗೆ ಹೊಂದಿದಂತೆಯೂ ಕೆಲವು ಸಮಸ್ಯೆಗಳು ಉದ್ಭವಿಸುತ್ತವೆನ್ನುವುದಂತೂ ನಿಜ. ಮಹಿಳಾ ಚಳವಳಿಯ ಗೆಲುವು, ಸೋಲುಗಳ ಬಗ್ಗೆ ಆಯ–ವ್ಯಯ ಪಟ್ಟಿ ಮಾಡುವುದು ಕಷ್ಟ. ಏಕೆಂದರೆ ಇಂದಿನ ಅನೇಕ 'ವೈಫಲ್ಯ'ಗಳು ವಾಸ್ತವದಲ್ಲಿ ಸರ್ಕಾರದ ವೈಫಲ್ಯಗಳು. ಮಹಿಳೆಯರ ಉಳಿವು ಅವರ ಸಾಕ್ಷರತೆ, ಉದ್ಯೋಗ ಮತ್ತು ಒಟ್ಟಾರೆ ಜೀವನೋಪಾಯಗಳಿಗೆ ಸಂಬಂಧಪಟ್ಟ ಹಾಗೆ ಆಗುತ್ತಿರುವ ರಾಚನಿಕ ಬದಲಾವಣೆಗಳು ಮಹಿಳೆಯರ ವಿಷಯದಲ್ಲಿ ವಿಶೇಷ ರೂಪ ಪಡೆದುಕೊಳ್ಳುತ್ತಿದ್ದರೂ ಫಲಕಾರಿಯಾಗಿರುವುದಿಲ್ಲ. ಕೃಷಿ ಸುಧಾರಣೆಗಳಲ್ಲಿ ಮೊದಲಲ್ಲಿ ಉಂಟಾದ ವೈಫಲ್ಯಗಳು ಆ ಕ್ಷೇತ್ರದಲ್ಲಿ ಮೂಲಸೌಲಭ್ಯ ರಚನೆಯನ್ನು (infrastructure) ಬೆಳೆಸುವಲ್ಲಿ ಆಗಿರುವ ವೈಫಲ್ಯಗಳು. ಜೊತೆಗೆ, ಈಗ ನವ ಉದಾರವಾದಿ ನೀತಿಗಳಿಂದಾಗಿ ಸಾಮಾಜಿಕ ಅಸಮಾನತೆಗಳು ಹೆಚ್ಚು ದೊಡ್ಡದಾಗುತ್ತಿವೆ, ಬಡತನವು ಇನ್ನಷ್ಟು ಆಳವಾಗುತ್ತಿದೆ. ಕೂಲಿರಹಿತ ಗೃಹಕೃತ್ಯ ಹಾಗೂ ಸಂತಾನೋತ್ಪಾದನೆಯ ಕ್ಷೇತ್ರದ ದುಡಿಮೆಗಳು ಮಹಿಳೆಯರ ಪಾಲಿಗೆ ಹೆಚ್ಚಾಗಿವೆ. ಏಕೆಂದರೆ, ಸಾರ್ವಜನಿಕ ಸೌಕರ್ಯಗಳು ಮತ್ತು ಸೇವೆಗಳಲ್ಲಿ ಅಸಮರ್ಪಕತೆ ಹೆಚ್ಚಿದ್ದು ಆರೋಗ್ಯಕ್ಷೇತ್ರ ಖಾಸಗೀಕರಣಕ್ಕೆ ಒಳಗಾಗಿದೆ.

ಅಲ್ಲದೆ ಮಹಿಳಾ ಚಳವಳಿಯ ಕೆಲವು ಎದ್ದು ತೋರುವ ವಿಫಲತೆಗಳಿಗೆ ನವ ಉದಾರವಾದಿ ನೀತಿಗಳಲ್ಲಿನ ಸಂಕುಚಿತ ಮನೋಧರ್ಮವೇ ಕಾರಣವಾಗಿಲ್ಲ; ಬದಲಾಗಿ ಸ್ತ್ರೀವಾದಿ ವಿರೋಧ ತೀವ್ರವಾಗಿ ಬೆಳೆದಿರುವುದೂ ಮುಖ್ಯ ಕಾರಣ ವಾಗಿದೆ. ಕೆಲವು ಅರ್ಥಗಳಲ್ಲಿ ಸ್ತ್ರೀವಾದ ವಿರೋಧವು ರಾಜಕೀಯ ಕ್ಷೇತ್ರದಲ್ಲಿ ಸ್ತ್ರೀವಾದಿ ತೋರಿಕೆಯನ್ನೇ ಒಳಗೊಂಡದ್ದೂ ಇದೆ. ತಥಾಕಥಿತ ಸಂಪ್ರದಾಯಬದ್ಧ ಸಮಾಜಗಳು ಕೊಡುತ್ತಿರುವ ಹಿಂಚಲನೆ ಅಲ್ಲ ಅದು, ಬದಲಾಗಿ ಜಾಗತಿಕವಾಗಿ ಸ್ತ್ರೀವಾದದ ಚರಿತ್ರೆಯುದ್ದಕ್ಕೂ ನಡೆದುಬರುತ್ತಿರುವ ಸ್ಥಿತಿ ಅದೇ ಆಗಿದೆ. ಒಮ್ಮೆ ಸ್ತ್ರೀವಾದವನ್ನು ಒಂದು ರಾಜಕೀಯ ಪರ್ಯಾಯ ಎಂದು ತೀರ್ಮಾನಿಸಿದ್ದಾದರೆ ಪಿತೃಪ್ರಧಾನ ವ್ಯವಸ್ಥೆಗಳಲ್ಲಿ ಅಂತರ್ಗತವಾಗಿರುವ ಹಿಂಸಾಚಾರ, ದಬ್ಬಾಳಿಕೆಗಳೆಲ್ಲ ಸ್ತ್ರೀವಾದಕ್ಕೆ ವಿರುದ್ಧವಾಗಿ ಎದ್ದು ನಿಲ್ಲುತ್ತವೆ. ಅಲ್ಲದೆ ಸ್ತ್ರೀವಾದದಿಂದ ಆಗಿರುವ ಲಾಭಗಳನ್ನು ನಿರಾಕರಿಸುವುದು, ನೇತ್ಯಾತ್ಮಕವಾಗಿಸುವುದು ಇಲ್ಲವೆ ಅವುಗಳನ್ನೇ ಇಲ್ಲವಾಗಿಸುವುದಕ್ಕೆ ಪಿತೃಪ್ರಧಾನ್ಯದ ತಾತ್ತ್ವಿಕತೆಯಲ್ಲಿ ಆಗುತ್ತಿರುವ ರೂಪಾಂತರ ಗಳೂ ಕಾರಣವಾಗಿರುತ್ತವೆ. ಎಲ್ಲಾ ಮಹಿಳೆಯರೂ ಒಗ್ಗಟ್ಟಾಗಿ ವಿರೋಧಿಸುತ್ತಿರುವ ಸಮಸ್ಯೆಗಳು ಎಂದರೆ ಬಹುಸಂಖ್ಯಾತ್ಮಕ ಹಿಂದೂ ಕೋಮುವಾದ, ಅಲ್ಪಸಂಖ್ಯಾತರು, ಮಹಿಳೆಯರು ಮತ್ತು ದಲಿತರ ಮೇಲಿನ ಹಿಂಸಾಚಾರ. ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ವಿರೋಧಿಸುತ್ತಿರುವ ಸಮಸ್ಯೆಗಳೆಂದರೆ ಮಹಿಳಾ ಹಕ್ಕುಗಳು, ಅವರ ಉಳಿವುಗಳನ್ನು ದಯಾಭಿಕ್ಷೆಯಾಗಿಸಿರುವ ನವಉದಾರವಾದಿ ಆರ್ಥಿಕ ನೀತಿಗಳು ಈ ಸಮಸ್ಯೆಗಳೆಲ್ಲ ಸ್ತ್ರೀವಾದವನ್ನು ವಿರೋಧಿಸುವ ಮೂಲಕ ನಮ್ಮ ಸಾಧನೆಗಳನ್ನು ಕಳಚಿಡಬಲ್ಲವು ಎಂಬುದರ ಸೂಚಕಗಳೇ ಆಗಿವೆ.

ದುಡಿಮೆ ವಿಭಜನೆಯಲ್ಲಿ ಪಿತೃಪ್ರಾಧಾನ್ಯಗಳ ಭೌತಿಕ ನೆಲೆಗಟ್ಟಿಗೆ ಸಂಬಂಧಿಸಿ ದಂತೆ ಸ್ತ್ರೀವಾದ ವಿರೋಧವಾದವು ತಲೆಯೆತ್ತಿದೆ. ಕೌಟುಂಬಿಕ ಶ್ರಮದ ಪ್ರಶ್ನೆಯು ಸಾಮಾಜಿಕ ಸಂಬಂಧಗಳಲ್ಲಿ ಏನೂ ಬದಲಾವಣೆಯಿಲ್ಲದೆ ಬಲವಂತವಾಗಿ ಅದೃಶ್ಯವಾಗಿಸಲ್ಪಟ್ಟಿರುವ, ಮೌಲ್ಯಮಾಪನಕ್ಕೆ ಒಳಗಾಗದ ಮಹಿಳೆಯರ ಮನೆಗೆಲಸದ ಶ್ರಮದ ಆಚೆಗೂ ವ್ಯಾಪಿಸಿದೆ. ಗೃಹದುಡಿಮೆ, ಕೌಟುಂಬಿಕ ದುಡಿಮೆ, ಮನೆಗೆಲಸ, ಜೀವನಾಂಶ ಎಂಬುದು ಅಭಿವೃದ್ಧಿಯ ಮಂದಗತಿಯನ್ನು (Stack) ತಾನು ಹೊತ್ತುಕೊಳ್ಳತೊಡಗಿದೆ. ಸಾಮಾಜಿಕ ಸೇವೆಗಳ ಅಭಾವ, ಶಿಕ್ಷಣ, ಭದ್ರತೆ, ಸಮರ್ಪಕ

ಕೂಲಿ, ಉದ್ಯೋಗಗಳ ಸಂಬಂಧದಲ್ಲಿ ಸರ್ಕಾರಿ ಅಭಿವೃದ್ಧಿ ಹಿಂದೆಗೆದಾಗಲೆಲ್ಲ ಗೃಹಕೃತ್ಯದ ದುಡಿಮೆಯನ್ನು ಪೆಟ್ಟು ಕುಂದಿಸುವ ಸಾಧನವಾಗಿ ಒಡ್ಡಲಾಗುತ್ತದೆ. ವಿಶ್ವಸನೀಯ ಸಾಮಾಜಿಕ ಸಂಬಂಧಗಳ ಒಂದು ಭಾಗವಾದ ಗೃಹಕೃತ್ಯದ ಕ್ರಮದ ತಳಹದಿಯ ಮೇಲೆ ಮಾರುಕಟ್ಟೆ ನಿಂತಿದೆ, ಮುಂದೂ ನಿಂತಿರುತ್ತದೆ. ಈಗ ಖಾಸಗೀಕರಣದೊಂದಿಗೆ ಮಹಿಳೆಯರ ವೇತನರಹಿತ ಗೃಹಕೃತ್ಯದ ಶ್ರಮವು ಮಾರುಕಟ್ಟೆಗೂ ಸಬ್ಸಿಡಿಯನ್ನು ಒದಗಿಸಬಲ್ಲದು. ಉರುಗ್ವೆಯಲ್ಲಿ ಜನಿಸಿದ ಲ್ಯಾಟಿನ್ ಅಮೆರಿಕನ್ ಪತ್ರಕರ್ತ, ಲೇಖಕ, ಕಾದಂಬರಿಕಾರ ಎಡುರಾರ್ಡೋ ಗೆಲಿನೊ ಹ್ಯೂ (Eeduardo Hughes Galeano) ವಿವರಿಸುವ ಪ್ರಕಾರ "ಲ್ಯಾಟಿನ್ ಅಮೆರಿಕನ್ ದೇಶಗಳಲ್ಲಿ ಸಾರ್ವಜನಿಕ ಎಂಟರ್‌ಪ್ರೈಸ್‌ಗಳ ವ್ಯಾಪಾರ ವ್ಯವಹಾರ ವೇಗವಾಗಿ ವರ್ಧಿಸುತ್ತಿರುವುದಕ್ಕೆ ಲಾಭಗಳೆಲ್ಲ ಖಾಸಗೀಕರಣಕ್ಕೂ ನಷ್ಟಗಳೆಲ್ಲ ಸಾಮಾಜೀಕರಣಕ್ಕೂ ಒಳಗಾಗುತ್ತಿರು"ವುದೇ ಕಾರಣ!

ಸ್ತ್ರೀವಾದದ ವೈಫಲ್ಯಗಳಲ್ಲಿ ಸೇರುವ ಇನ್ನೊಂದು ಅಂಶ ಭಾಷೆಯ ಕ್ರೈಸಿಸ್‌ಗೆ ಸಂಬಂಧಿಸಿದ್ದಾಗಿದೆ. ಇಲ್ಲೂ ಬಹುಬಗೆಯ ಕಾರ್ಯಕರ್ತ್ರಗಳು ಬೇಕು. ಎಡಪಂಥೀಯ ಧರ್ಮನಿರಪೇಕ್ಷಿ ಸ್ತ್ರೀವಾದದ ಭಾಷೆ ಹಾಗೂ ಹಿಂದೂವಾದಿ ಬಲಪಂಥೀಯ ಪಕ್ಷಗಳ ಜನತಾಂತ್ರಿಕ ಪ್ರತಿನಿಧೀಕರಣದ ಭಾಷೆ ಎರಡೂ ರೋಗಗ್ರಸ್ತ ಭಾಷೆಗಳು. ಸಮಾನತಾವಾದಿಯಾದ ಭಾಷೆಗಳನ್ನು ಬಳಸಿಕೊಂಡು ಅವುಗಳ ಸಾರವನ್ನೇ ಬುಡಮೇಲು ಮಾಡುವುದು ಬಲಪಂಥೀಯರ ಒಂದು ಮಾದರಿ ಆಚರಣೆ. ಇದು ಭಾರತಕ್ಕಷ್ಟೇ ವಿಶಿಷ್ಟವಾದದ್ದೇನಲ್ಲ. ಹಿಂದೂ ಬಲಪಂಥವು ಸೆಕ್ಯುಲರಿಸಂ ಎಂಬ ಶಬ್ದವನ್ನು ನಿರ್ವಾತವಾಗಿಸಲು ಶಕ್ತಿಮೀರಿ ಶ್ರಮಿಸುತ್ತಿದ್ದರೆ, ಕ್ರಿಶ್ಚಿಯನ್ ಬಲಪಂಥವು ಪ್ರಜಾಪ್ರಭುತ್ವದ ಅರ್ಥವನ್ನೇ ಖಾಲಿಯಾಗಿಸಲು ಓವರ್‌ಟೈಂ ದುಡಿಯುತ್ತಿದೆ. ಇದಕ್ಕೆ ಒಂದು ಉದಾಹರಣೆ, ಸಮಾನ ನಾಗರಿಕ ಕಾನೂನು ಎಂಬ ಪರಿಕಲ್ಪನೆಯು ಹೊಸ ಸೆಕ್ಯುಲರ್ ದೇಶವನ್ನು ಕಟ್ಟುವ ಸಂದರ್ಭದಲ್ಲಿ ಹುಟ್ಟಿಬಂದಿತ್ತು. ಆದರೆ ಈಗ ಅದು ಹಿಂದೂ ಕೋಮುವಾದಿಗಳ ಮಾತಿನ ವರಸೆಯಾಗಿ ಅಲ್ಪಸಂಖ್ಯಾತರಿಗೆ ಗಾಳ ಹಾಕುವುದಕ್ಕೆ ದಿನನಿತ್ಯವೂ ಬಳಕೆಯಾಗುತ್ತಿದೆ. ಇಂತಹ ಸಮಾನ ಕಾನೂನು ಬೇಕೆಂದು ಹಕ್ಕೊತ್ತಾಯಿಸುತ್ತಿದ್ದ ಮಹಿಳಾ ಗುಂಪುಗಳು ಈ ಪ್ರಸ್ತಾಪವನ್ನೇ ಈಗ ಕೈಬಿಟ್ಟಿವೆ. ಸೈದ್ಧಾಂತಿಕವಾಗಿ ಸ್ತ್ರೀವಾದ ವಿರೋಧಿಗಳಾದ ಶಕ್ತಿಗಳು ಅದರ ಶಬ್ದ ಭಂಡಾರವನ್ನೇ ಕೋ-ಆಪ್ಟ್ ಮಾಡಿಕೊಂಡು ತಮಗೆ ಬೇಕಾದ ಹಾಗೆ ತಿರುಚಿರುವ ಮತ್ತೊಂದು ಉದಾಹರಣೆ 'ಏಜೆನ್ಸಿ' ಹಾಗೂ 'ಸಬಲೀಕರಣ'ಗಳಿಗೆ ಹೊಂದಿಕೊಂಡದ್ದಾಗಿದೆ. ಮಾರುಕಟ್ಟೆ ಹಾಗೂ ಸಮೂಹ ಮಾಧ್ಯಮಗಳ ಸಂಕೀರ್ಣ ವ್ಯವಸ್ಥೆಗಳು 'ಹೆಣ್ತನ' ಎಂಬುದನ್ನು 'ಆಯ್ಕೆ'ಗೊಂಡ ಬಳಕೆದಾರ ಮೌಲ್ಯ ಎಂಬ ರೀತಿಯಲ್ಲಿ ಬದಲಾಯಿಸಿ ಮಹಿಳೆ ಈ ಏಜೆನ್ಸಿಯ ಜೊತೆ ಕೈಗೂಡಿಸಿ ತನ್ನನ್ನೇ ಒಂದು ಸರಕನ್ನಾಗಿ ಮಾಡಿಕೊಳ್ಳುತ್ತ, ಮಾರುಕಟ್ಟೆಯನ್ನು ಮುನ್ನಡೆಸುವಂತೆ ಮಾಡುತ್ತಿವೆ. ಮಾರುಕಟ್ಟೆಯ ಪ್ರಗತಿಗೆ ಹೀಗೆ ಕಾರಣವಾಗುವ ಸ್ತ್ರೀಏಜೆನ್ಸಿಗಳೇ ಮಹಿಳೆಯ ವಿಮುಕ್ತ ನೆಲೆಗಳೆಂಬ ಹಾಗೆ ಅವರನ್ನು ಮರುಳುಮಾಡಿ ಗೊಂದಲ ಸೃಷ್ಟಿಸಿವೆ. ಆಯ್ಕೆ ಮತ್ತು ಏಜೆನ್ಸಿಯ ಇಂಥ ಮಾರುಕಟ್ಟೆ ತಾತ್ತ್ವಿಕತೆಯನ್ನು ಬಯಲಿಗೆಳೆಯಬೇಕಾದ ಹೊರೆ ಮತ್ತೊಮ್ಮೆ ಸ್ತ್ರೀವಾದದ ಮೇಲೆ ಬಿದ್ದಿದೆ. ಕೌಟುಂಬಿಕವಾಗಿ ಹಾಗೂ ಸಾಮಾಜಿಕವಾಗಿ ಪಿತೃಪ್ರಧಾನ ನಿರ್ವಹಣೆಗಾರರಾಗಿರುವುದು ಮನೆಗೆಲಸದ ಶ್ರಮ ಹಾಗೂ ಸಂತಾನೋತ್ಪಾದನೆಯ ದೈಹಿಕ ಶ್ರಮದ ಜೊತೆಗೆ ಮಾರುಕಟ್ಟೆಯ ಶೋಷಣೆಯೂ ಸೇರಿದೆ. ತಮ್ಮ ಶರೀರಗಳ ಮೇಲೆ 'ಸ್ವಾಧೀನತೆ' ಹೊಂದಿರುವ ಮಹಿಳೆಯರು ಅವುಗಳನ್ನು ಮಾರಾಟ ಮಾಡಲೂ 'ಸ್ವತಂತ್ರ'ರಾಗಿದ್ದಾರೆ! ಇವುಗಳೆಲ್ಲದರ ಗತಿತಾರ್ಕಿಕ ಸಂಬಂಧವನ್ನು ತೆರೆದು ತೋರಿಸಬೇಕಾದ ಹೊಣೆ ಸ್ತ್ರೀವಾದಕ್ಕೆ ಈಗ ಇನ್ನಷ್ಟು ದೊಡ್ಡದಾಗಿದೆ.

ಸ್ತ್ರೀವಾದವು ಎದುರಿಸುತ್ತಿರುವ ಮೂರನೆ ರೀತಿಯ ವೈಫಲ್ಯವು ಇನ್ನಷ್ಟು ಸಂಕೀರ್ಣ ರೀತಿಯದಾಗಿದೆ. ಸ್ತ್ರೀವಾದಿ ಚಳವಳಿಯ ಎರಡನೆಯ ಹಂತವು ಮಹಿಳೆಯರ ದುರವಸ್ಥೆಗಳನ್ನು ಬೆಳಕಿಗೆ ತರುವ ರಾಜಕೀಯದಲ್ಲಿ ತೊಡಗಿಕೊಂಡಿದ್ದುದಾಗಿತ್ತು. ಈ ಪ್ರಕ್ರಿಯೆಯಿಂದ ಹುಟ್ಟುವ ಪ್ರಜ್ಞಾಜಾಗೃತಿಯು ಬದಲಾವಣೆ ತರಬಲ್ಲದು ಎಂಬುದು ಅದರ ನಂಬಿಕೆಯಾಗಿತ್ತು. ಈಗ ಈ ಪರಿಭಾಷೆಯನ್ನು ಎಷ್ಟರಮಟ್ಟಿಗೆ ಸಲೀಸಾಗಿ ಒಪ್ಪಿಕೊಳ್ಳಲಾಗಿದೆ ಎಂದರೆ ಶಾಲಾ ಪಠ್ಯಪುಸ್ತಕಗಳು, ಮಾಧ್ಯಮಗಳು (ವೃತ್ತಪತ್ರಿಕೆಗಳು, ದೂರದರ್ಶನ ಸಾಕ್ಷ್ಯಚಿತ್ರಗಳು) ಸ್ವೇಚ್ಛೆಯಾಗಿ ಮಹಿಳೆಯರ ದುರವಸ್ಥೆಗಳನ್ನು ಬಣ್ಣಿಸುತ್ತವೆ, ಬೆಳಕಿಗೆ ತರುತ್ತವೆ. ಸ್ತ್ರೀವಾದಿಗಳು ಬಳಸುವ ರೀತಿಯದೇ ವಾಸ್ತವವಾದ ದೃಷ್ಟಿ ಮತ್ತು ಪ್ರಯೋಗಶೀಲತೆಯ ವೈಧಾನಿಕತೆಯನ್ನು ಅನುಸರಿಸುತ್ತವೆ. ಸಾಕ್ಷರತೆಯ ಕೊರತೆ, ಜೀವನೋಪಾಯ, ಬೇರೆ ಬೇರೆ ಸ್ತರಗಳ ಲೈಂಗಿಕ ಹಿಂಸಾಚಾರಗಳು ಮುಂತಾದ ಎಲ್ಲವನ್ನು ಕಣ್ಣಿಗೆ ರಾಚುವಂತೆ ಬಿತ್ತರಿಸುತ್ತವೆ. ಆದರೆ ಯಾವುದೇ ಪರಿವರ್ತನೆಯ ಸಾಧ್ಯತೆಯನ್ನು ಅವು ತೋರಿಸಲಾರವು. ಪ್ರಜ್ಞಾಜಾಗೃತಿಗೆ ಸರಿಸಾಟಿಯಾಗಿ ಸಾಮಾಜಿಕ ಬದಲಾವಣೆಗಳೂ ಏಕೆ ಅಷ್ಟೇ ಬೇಗ ಸಂಭವಿಸಲಾರವು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಿದೆ. ಅದೇ ರೀತಿ, ಎಲ್ಲವನ್ನು 'ಬಯಲು ಮಾಡಿಬಿಡುವ' ಭಾಷೆಯ ಬಗ್ಗೆಯೂ ಮರುಚಿಂತನೆ ನಾವು ನಡೆಸಬೇಕಾಗಿದೆ. ಈ ಭಾಷೆಯನ್ನು ಇಷ್ಟು ಬೇಗ ನಿಸ್ಸಾರವಾಗಿಸಿದ ಶಕ್ತಿ ಯಾವುದು? ಏಕೆ ಅದು ಇಷ್ಟು ಬೇಗ ಸವಕಲಾಗಿ ಹೋಗಿದೆ? ಪ್ರಜ್ಞಾಜಾಗೃತಿಯ ಪ್ರಕ್ರಿಯೆಯು ತನ್ನ ಕ್ರಾಂತಿಕಾರಿ ಅಲಗನ್ನು ಮೊಂಡಾಗಿಸಿಕೊಂಡದ್ದಕ್ಕೆ ಕಾರಣವೇನು? ಸತ್ಯವನ್ನು ಬಯಲಿಗೆಳೆಯುವುದಕ್ಕೂ ಸಮಾಜದ ಪರಿವರ್ತನೆಗೂ ಮಧ್ಯೆ ಇರಬೇಕಾದ ಸಹಯೋಗದ ಸಂಬಂಧವನ್ನು ಈಗ ತೀರಾ ಸುಲಭವಾಗಿ ಬಿಟ್ಟುಬಿಡಲಾಗಿದೆಯೆ? ಲಿಂಗತ್ವ (Gender) ಮತ್ತು ಸಬಲೀಕರಣ (Empowerment) ಎಂಬ ಶಬ್ದಗಳನ್ನು ಸರ್ಕಾರದ ಏಜೆನ್ಸಿಗಳು ಸ್ವಾನುಕೂಲಕ್ಕೆ ಹೊಂದಿಸಿಕೊಂಡಿರುವುದು, ಅಂತಾರಾಷ್ಟ್ರೀಯ ವಾಸಿಗಳು ಹಾಗೂ ಪಾಲಿಸಿಗಳನ್ನು ರೂಪಿಸುವವರು (ಅನೇಕ ಸ್ತ್ರೀವಾದಿಗಳು ಈಗಾಗಲೇ ಗುರುತಿಸಿರುವಂತೆ) ಆ ಶಬ್ದಗಳನ್ನು ಸಾಧಾರಣೀಕರಿಸಿ, ಆಡಳಿತಶಾಹಿಯ ಪದಗಳನ್ನಾಗಿಸಿ, ಆ ಪರಿಭಾಷೆಯನ್ನು ಸೌಮ್ಯೋಕ್ತಿಯನ್ನಾಗಿ ಮಾಡಿಬಿಟ್ಟಿದ್ದಾರೆಯೆ! ವಿವಿಧ ತಾತ್ತ್ವಿಕ ಬಣಗಳನ್ನು ದಾಟಿ ಈ ಭಾಷೆ ಅತಿ ಸುಲಭವಾಗಿ ದೊರಕುತ್ತಿರುವುದರಿಂದ ಹಿಂದೆ ಒಂದು ರಾಜಕೀಯ ಜಾಗವಾಗಿದ್ದ ಆ ಶಬ್ದಗಳ ಅರ್ಥಗಳನ್ನು ಕಾರ್ಯಕರ್ತರು ಮಸುಕಾಗಿಸಿದ್ದಾರೆಯೆ? ಪ್ರಜ್ಞಾಜಾಗೃತಿ ಎಂಬುದು ಕೇವಲ ಒಂದು ಕೈಗೆಟುಕಿದ ಸುಲಭ ಸೂತ್ರವಾಗಿಬಿಟ್ಟಿದ್ದು ಆಮೂಲಾಗ್ರವಾಗಿ ಆಗಬೇಕಾದ ರಾಜನಿಕ ಬದಲಾವಣೆಯ ಅಗತ್ಯವನ್ನೇ ಅದು ನಿರಾಕರಿಸುತ್ತಿದೆಯೆ? ಎಂಬುದನ್ನೆಲ್ಲ ನಾವು ವಿಚಾರ ಮಾಡಬೇಕಾಗಿದೆ. ಪ್ರಜ್ಞಾಜಾಗೃತಿಯು ಪಿತೃಪ್ರಾಧಾನ್ಯದ ಆಚರಣೆಗಳನ್ನು ಜವಾಬ್ದಾರಿ ಹಾಗೂ ತಾತ್ತ್ವಿಕಬದ್ಧತೆ ಗಳಿಂದ ಎದುರಿಸುವುದರ ಬದಲಾಗಿ ಅವು ತೀರಾ ಕೆಟ್ಟ ಪಾಪಾಚರಣೆ ಎಂದು ಬಲುಬೇಗ ತೀರ್ಮಾನಿಸಿ ಕೈಬಿಡಲು ಒಂದು ಸಮಜಾಯಿಷಿ ಯಾಗಿ ಅದು ಒದಗುತ್ತಿದೆಯೆ? ಎಂಬುದನ್ನೂ ನಾವು ವಿಚಾರ ಮಾಡಬೇಕಿದೆ.

ಸರ್ಕಾರೇತರ ಸಂಘಟನೆಗಳನ್ನು ಮೊಳಕೆಯೊಡೆಸಿ ಸಂಖ್ಯೆ ಹೆಚ್ಚಿಸುವುದನ್ನು ರಾಜಕೀಯ ಕ್ಷೇತ್ರದ್ದೇ ವಿಶಾಲ ಶ್ರೇಣಿಯ

ಮರುಸಂಘಟನೆಯೆಂದು ಪರಿಗಣಿಸುವ ಬಗ್ಗೆಯೂ ನಾವು ವಿಚಾರ ಮಾಡಬೇಕಿದೆ. ಮಹಿಳಾ ಚಳವಳಿ ಮತ್ತು ಜನತಾಂತ್ರಿಕ ಗುಂಪುಗಳು ನಿರ್ದಿಷ್ಟ ಸಮಸ್ಯೆಗಳ ನೆಲೆಗಟ್ಟಿನ ಮೇಲೆ ಒಗ್ಗೂಡುವಂಥ ವಿಷಯಗಳ ಭಾಗವಾದ ಅವುಗಳದೇ ಕವಲುಗಳಿಂದ ಅವುಗಳಿಗೆ ಕಟ್ಟಿಕೊಳ್ಳಲಾಗಿರುವ ಅನುದಾನಿತ ಅಥವಾ ಬೆಂಬಲಿಸಬಹುದಾದ ಸಂಗತಿಗಳಿಗಷ್ಟೇ NGO ಗಳೊಂದಿಗಿನ ನಮ್ಮ ಸಂವಾದವು ಈವರೆಗೂ ಸೀಮಿತವಾಗಿತ್ತು. ಆದರೆ ಭಾರತದಲ್ಲಿರುವ NGO ಗಳ ವಿಶಾಲ ಸ್ವರೂಪವನ್ನೂ ಅವುಗಳಲ್ಲಿರುವ ಸ್ತ್ರೀವಾದಿಯಲ್ಲದ್ದು ಎಂದು ಸ್ಪಷ್ಟವಾಗಿಯೇ ಕಂಡು ಬರುವ Matrix ಬಗ್ಗೆ ಇದೀಗ ನಾವು ಚಿಂತನೆ ನಡೆಸುವುದು ಅತ್ಯವಶ್ಯಕವಾಗಿದೆ. NGO ಗಳು, ಸರ್ಕಾರಗಳು, ದಾನಿಗಳು, ಮಾರುಕಟ್ಟೆಗಳು, ನಾಗರಿಕ ಸಮಾಜದ ಆಸಕ್ತಿ ಹೊಂದಿರುತ್ತವೆ ಮತ್ತು ಈ ಎಲ್ಲ ಗಡಿರೇಖೆಗಳನ್ನು ವ್ಯಾಪಿಸುವಷ್ಟು ಸಂಕೀರ್ಣವಾದ ನೆಟ್‌ವರ್ಕ್‌ಗಳನ್ನು ಅವು ಹೊಂದಿರುತ್ತವೆ. ಸರ್ಕಾರ ಗಳು ಮತ್ತು ದಾನಿಗಳಿಂದ ಅವು ನಿರಂತರವಾಗಿ ಮರುಸಂವಿಧಾನ ಗೊಳ್ಳುತ್ತಿವೆ ಮಾತ್ರವಲ್ಲ, ನವ ಉದಾರವಾದಿ ಆರ್ಥಿಕ ನೀತಿಗಳಿಗೆ ಹೊಂದಿಕೊಂಡಂತೆ. ಭಾರತ ಸರ್ಕಾರವು ಅವುಗಳಿಗೆ ತನ್ನ ಸಬ್ಸಿಡಿಯನ್ನು ಹೆಚ್ಚಿಸಿದೆ. ವಿಶ್ವಬ್ಯಾಂಕಿನ ಶರತ್ತುಗಳು ಸರ್ಕಾರ ಮತ್ತು ನಾಗರಿಕ ಸಮಾಜಗಳ ಪಾಲುದಾರಿಕೆಯ ಸ್ವರೂಪವನ್ನು ನಿರ್ಣಯಿಸುತ್ತಿವೆ. ಸರ್ಕಾರದ ಧನ ಸಹಾಯವೂ ಇದಕ್ಕೆ ಹೊಂದಿಕೊಂಡದ್ದಾಗಿದೆ. ಶಿಕ್ಷಣ, ಉದ್ಯೋಗ ತರಬೇತಿ, ಆರೋಗ್ಯ ಸೇವೆಗಳು, ಆದಾಯ ಉತ್ಪಾದಕ ಯೋಜನೆಗಳು, ವಸತಿ, ತರಬೇತಿ ಅಥವಾ ಸರ್ಕಾರಿ ಸಿಬ್ಬಂದಿಯಲ್ಲಿ ಪ್ರಜ್ಞಾಜಾಗೃತಿ ಉಂಟುಮಾಡುವುದು, ಬಡತನ ನಿವಾರಣೆ, ಸಾಕ್ಷರತೆ, ಕಾನೂನು ನೆರವು, ಸಂಪನ್ಮೂಲ, ಭೂಮಿ ಒಡೆತನದ ಹಕ್ಕುಗಳು ಮುಂತಾದ ಅಭಿವೃದ್ಧಿ ಕಾರ್ಯಗಳನ್ನು ಅನೇಕ NGO ಗಳು ಕೈಗೊಳ್ಳುತ್ತಿವೆ. ನವ ಉದಾರವಾದಿ ಸರ್ಕಾರ ವ್ಯವಸ್ಥೆಯು ತೆರವು ಮಾಡಿಕೊಡುವ ಜಾಗಗಳನ್ನು ಈ NGO ಗಳು ತುಂಬಿಸಿವೆ. ಅಷ್ಟೇ ಅಲ್ಲ, ಸರ್ಕಾರವು ತನ್ನ ಹೊಣೆಗಳಿಂದ ಕಳಚಿಕೊಳ್ಳಲೂ ಇವು ಸಾಧನಗಳಾಗಿವೆ. NGO ಗಳನ್ನು ಸೇವೆಗಳನ್ನು ಒದಗಿಸುವವರೆಂದೂ, ಸರ್ಕಾರದ ಉಪಕಾಂಟ್ರಾಕ್ಟರುಗಳೆಂದೂ ಸರ್ಕಾರವು ಭಾವಿಸುತ್ತಿದೆ. ಸೇವೆಗಳ ಖಾಸಗೀಕರಣಕ್ಕೆ ಇದರಿಂದ ನೆರವಾಗುತ್ತದೆ. ಮುಸುಕಿನ ಮರೆಯ enterpreneurialism ಗೆ ಒಂದು ದಿಕ್ ಪರಿಮಾಣ (veetor) ಆಗಬಲ್ಲ ಈ NGO ಕರಣವು ಸರ್ಕಾರದ ಕೆಲವು ಕರ್ತವ್ಯಗಳನ್ನು ಕುಗ್ಗಿಸಲು ಕೆಲಸಮಾಡುತ್ತದೆ, ಹಾಗೆಯೇ ನಾಗರಿಕ ಸಮಾಜವನ್ನು ಕೃತಕವಾಗಿ ಹಿಗ್ಗಿಸಲೂ ನೆರವಾಗುತ್ತದೆ. ಏಕೆಂದರೆ, NGO ಗಳು ಸ್ವ-ಸಹಾಯ ಎಂಬುದಕ್ಕೆ ಸಮಾನಾರ್ಥಕಗಳಾಗಿದ್ದು ಸೇವೆಗಳನ್ನು ಒದಗಿಸುವುದರಲ್ಲಿ ನಾಗರಿಕ ಸಮಾಜಕ್ಕೂ ಈ ಕ್ಷೇತ್ರದ ವಿಸ್ತರಣೆಯ ವಿಷಯದಲ್ಲಿ ಬೇರೆ ಬೇರೆ ಆತಂಕಗಳಿವೆ. ಮೊದಲನೆಯ ದಾಗಿ NGO ಎಂಬ ವಲಯದೊಳಗೆ ಸೇರಿರುವ ದೊಡ್ಡ ಸಂಖ್ಯೆಯಲ್ಲಿರುವ ಸಂಘಟನೆಗಳು ಹಿಂದೂ ಬಲಪಂಥಕ್ಕೆ ಸೇರಿದ್ದಾಗಿವೆ. ಕುಪ್ರಸಿದ್ಧ ಕೇಸರಿ ಪದಕಗಳನ್ನು ತರುವ ಇವು ಮಹಿಳಾ ಪ್ರಶ್ನೆಗಳನ್ನು Co-opt ಮಾಡಿಕೊಳ್ಳಲು ಅಗತ್ಯವಾದ ಅನೇಕ ಜಾಗಗಳನ್ನು ತೆರೆಯಬಲ್ಲವು. ಎರಡನೆಯ ಆತಂಕವೆಂದರೆ ಇಂಡಿಯಾದ NGO ಗಳು ಬೇರೆ ದೇಶಗಳ NGO ಗಳಂತೆಯೇ ಸ್ವಾಯತ್ತ ರಾಜಕೀಯ ಚಳವಳಿಗಳು ಹಾಗೂ ಮರು ಹಂಚಿಕೆಗಾಗಿ ನಡೆವ ಹೋರಾಟದ ಜಾಗಗಳನ್ನು ತಾವು ಆಕ್ರಮಿಸಿಕೊಂಡಿವೆ ಮತ್ತು ಸಾಮಾಜಿಕ ಚಳವಳಿ ಮತ್ತು ಸಮೂಹವನ್ನು ಆಧರಿಸಿದ ರಾಜಕೀಯವನ್ನು ವೃತ್ತಿಪರ ಕಾರ್ಯನಿಷ್ಠೆ, ಸಂಭಾವನೆಯುಳ್ಳ ಸಂರಚನೆಗಳ ಕಡೆಗೆ ಪಲ್ಲಟ ಗೊಳಿಸುತ್ತವೆ.

ಸಾಮಾಜಿಕ ಪ್ರತಿಭಟನಾ ಚಳವಳಿಗಳನ್ನು ಜಾತಿ, ಧರ್ಮ, ಸ್ಥಳ, ವಯಸ್ಸು ಮತ್ತು ಲಿಂಗಗಳ ರೇಖೆಗಳ ಮೇಲೆ ಚಿಕ್ಕ ಚಿಕ್ಕ ತುಂಡುಗಳಾಗಿಸಿ ಅವುಗಳ ಫಲಾನುಭವಿಗಳನ್ನು ವಿಭಜಿಸುವಂಥ ಪ್ರಾಜೆಕ್ಟ್‌ಗಳನ್ನಾಗಿ ಪರಿವರ್ತಿಸಿಬಿಡುತ್ತವೆ. ಸ್ವಾಯತ್ತ ಮಹಿಳಾ ಗುಂಪುಗಳನ್ನು ಸಾಂಕೇತಿಕ ಗುಂಪುಗಳನ್ನಾಗಿ ಮಾಡುವ ವಿಷಯದಲ್ಲಿ ಆತಂಕಗಳು ಪ್ರಚಲಿತವಿವೆ [ಈ ಗುಂಪುಗಳ ಒಳಗಿನಿಂದಲೂ ಹೊರಗಿನಿಂದಲೂ ಮಹಿಳೆಯರು ಆ ಆತಂಕವನ್ನು ವ್ಯಕ್ತಪಡಿಸಿದ್ದಾರೆ]. ಹೀಗೆ ಮಾಡಿದರೆ ದಾನಿಗಳು ನಡೆಸುವ ಅಜೆಂಡಾಗಳಿಗೆ, ಸ್ವಯಂ ಸೆನ್ಸಾರ್‌ಷಿಪ್ ವಿಧಿಸಿಕೊಳ್ಳುವ, ವೃತ್ತಿಪರತೆಗೆ ಒಳಪಡುವ ನಿರ್ವಹಣಾಧಿಕಾರದ ವೈಚಾರಿಕೀಕರಣಗಳಿಗೆ ಸ್ವಾಯತ್ತ ಮಹಿಳಾ ಸಂಘಟನೆಗಳು ಬಲಿ ಬೀಳುವ ಸಾಧ್ಯತೆ ಇರುತ್ತದೆ. ಇದರಿಂದಾಗಿ ಅವರು ತಜ್ಞತೆಯುಳ್ಳ ಪ್ರಾಜೆಕ್ಟ್‌ಗಳ ಭಾಷೆಗೆ, ಪಾಲಿಸಿಗಳ ರೆಕಮೆಂಡೇಶನ್‌ಗಳಿಗೇ ಬಂಧಿತರಾಗಿರಬೇಕಾಗುತ್ತದೆ. ಸಂಕುಚಿತವಾದ ಒಂದೇ ಸಮಸ್ಯೆಯ ಪರ ವಕಾಲತ್ತು ವಹಿಸುವುದು ಹಾಗೂ ದಾನಿಗಳು ನಿರ್ಣಯಿಸುವ ನಿಯಂತ್ರಿತ ಅಜೆಂಡಾಗಳನ್ನು ನಡೆಸುವುದು ಮಹಿಳಾ ಚಳವಳಿಯ ಪಿತೃಪ್ರಾಧಾನ್ಯ ಆಚರಣೆಗಳಿಂದ ಹೊರಕ್ಕೆ ಚಲಿಸಬಲ್ಲ ಸಾಮರ್ಥ್ಯಕ್ಕೆ ಅಡ್ಡಿಯುಂಟುಮಾಡಬಲ್ಲವು. ಪಿತೃಪ್ರಾಧಾನ್ಯದ ರಾಚನಿಕ ವಿಮರ್ಶೆ ಹಾಗೂ ಇತರ ರಾಜಕೀಯ ಚಳವಳಿಯೊಂದಿಗೆ ಸೇರಿಕೊಳ್ಳುವುದಕ್ಕೆ ಅಡ್ಡಿಯುಂಟುಮಾಡಬಲ್ಲವು.

ಇದುವರೆಗೆ 'ಸರ್ಕಾರೇತರ' ಕಾರ್ಯಕ್ಷೇತ್ರ ಮತ್ತು ಅವರಲ್ಲಿ ವೈಯಕ್ತಿಕ ರಾಜಕೀಯ ಚಲನೆಯ ದಾರಿ – ಇವೆರಡೂ ತಾತ್ತ್ವಿಕವಾಗಿ ಬೇರೆ ಬೇರೆಯೇ ಆಗಿವೆ. ಕ್ರಾಂತಿಕಾರಕ ಬದಲಾವಣೆ ತರಬಲ್ಲ ರೂಪಗಳಿಂದ ಹಿಡಿದು ಆಡಳಿತಶಾಹಿ ಹಾಗೂ ವ್ಯವಸ್ಥಾಪಕತೆ ರೂಪದವರೆಗೆ ಅವುಗಳ ಸ್ತರಗಳಿವೆ. ಈ ಇಬ್ಬಂದಿತನಕ್ಕೆ ಸ್ತ್ರೀವಾದಿ ಪರಿಪ್ರೇಕ್ಷ್ಯಗಳು ಮಹಿಳಾ ಚಳವಳಿಯಿಂದಲೇ ಹುಟ್ಟಿ ಬಂದಂಥವು. ಸರ್ಕಾರಗಳಿಂದ ಸಹಾಯಧನ ಪಡೆವ NGO ಗಳನ್ನು ಇವುಗಳೇ ರೂಪಿಸಿ ಕ್ರಾಂತಿಕಾರಕವಾಗುವಂತೆ ಮಾಡಿದ್ದವು. 1980ರ ದಶಕದಲ್ಲಿ ಇವು ಸಾಂಸ್ಥಿಕ ಪರಿಮಿತಿಗಳನ್ನು ಒತ್ತರಿಸಿ ಎಷ್ಟೊಂದು ಹಿಗ್ಗಿಸಿದ್ದವೆಂದರೆ ಕೆಲವು ಮಹಿಳಾ ಗುಂಪುಗಳು ಜನತಾಂತ್ರಿಕತೆಯ ಪಾಲುಗಾರ ರೆಂಬಂತೆಯೇ ಕಾಣತೊಡಗಿದ್ದವು. ಈಗ NGOಕರಣಕ್ಕೆ ಸರ್ಕಾರ ಯತ್ನಿಸುವುದರಲ್ಲಿ ತನ್ನ ಕರ್ತವ್ಯಗಳಿಗೆಲ್ಲ ಒಂದು ಪಾರ್ಸೆಲ್ ರೂಪ ಕೊಡುವ ಪ್ರಯತ್ನದ ಹಾಗೆ ತೋರುತ್ತಿದ್ದು, ಈ ಯತ್ನವು ಖಾಸಗೀಕರಣದ ನೀತಿ ನಿಯಮಾವಳಿಯೊಂದಿಗೆ ನೇರವಾಗಿ ಹೊಂದಿಕೊಂಡದ್ದಾಗಿದೆ. ಬೇರೆ ರೀತಿ ಹೇಳುವುದಾದರೆ ಮಹಿಳಾ ಸಮಸ್ಯೆಗಳನ್ನು ಗಡಿಪಾರುಮಾಡುವುದು (relegation) ಹಾಗೂ ಕೋ-ಆಪ್ಷನ್‌ಗಳ ಎರಡು ಬಗೆಯ ಚಲನೆ ಈಗ ನಡೆದಿದ್ದು ಸರ್ಕಾರವು ತನ್ನ ಹೊಣೆಗಾರಿಕೆಯಿಂದ ತನ್ನನ್ನು ಹಿಂದೆಗೆದುಕೊಳ್ಳುತ್ತಲೇ ತನ್ನ ಎಲ್ಲಾ ಹೊರೆಯನ್ನು NGO ಗಳಿಗೆ ರವಾನಿಸಿ ಉಪಕಾಂಟ್ರಾಕ್ಟ್ ಮಾಡಿಕೊಂಡಂತೆ ಕಾಣುತ್ತದೆ.

NGO ಗಳ ಕಾರ್ಯಕ್ರಮವು ತುಂಬ ವೈವಿಧ್ಯವುಳ್ಳದ್ದು. ಅವುಗಳ ರೇಖಾ ನಕಾಶೆ ಗುರುತಿಸುವುದು ಬಹು ಕಷ್ಟದ್ದು. NGO ಗಳ ವಿಸ್ತಾರವಾದ ಸಂಘಟನೆಯ ಕ್ಷೇತ್ರದಲ್ಲಿ (ಒಂದು ಸಣ್ಣ ಭಾಗವಷ್ಟೇ ಆಗಿರುವ) ಮಹಿಳೆಯರ ಸರ್ಕಾರೇತರ ಸಂಘಟನೆಯ ಸ್ಥಾನ ನಿರ್ದೇಶನದ ಕಾರ್ಯ ಇನ್ನೂ ಆಗಬೇಕಾಗಿದೆ. ಭಾರತದ NGO ಗಳ ಪಾತ್ರ ಚಿತ್ರಣ ಹೇಗೆ ಮಾಡಬಹುದು? ನಾಗರಿಕ ಸಮಾಜಕ್ಕೂ ಮತ್ತು ಸರ್ಕಾರಕ್ಕೂ ಮಧ್ಯವರ್ತಿಗಳು ಎನ್ನಬೇಕೆ? ಅಥವಾ ಸರ್ಕಾರವು ನಾಗರಿಕ ಸಮಾಜದೊಳಗೆ ಪ್ರವೇಶಿಸಲು ಬಳಸುವ ಸಾಂಸ್ಥಿಕ ವಿಧಾನ

(mode) ಎನ್ನಬೇಕೆ? ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವ್ಯವಸ್ಥೆಗಳ ಮಧ್ಯಸ್ತಿಕೆದಾರರೆನ್ನಬೇಕೆ? ಅಥವಾ ಜಾಗತೀಕರಣವನ್ನು ಶಾಂತಿಯುತವಾಗಿಸುವ ಅಸ್ತ್ರವೆಂದು ಹೇಳಬೇಕೆ? ಹೀಗೆ ಈ ಪಾತ್ರವನ್ನು ಚಿತ್ರಿಸುವುದು ಗೋಜಲಿನಿಂದ ಕೂಡಿದ್ದಾಗಿದೆ. ಏಕೆಂದರೆ ಪಾಕಿಸ್ತಾನ, ಶ್ರೀಲಂಕಾ, ಬಾಂಗ್ಲಾದೇಶಗಳಲ್ಲಿ ಸರಕಾರದೊಂದಿಗಿನ ಸಂಬಂಧದಲ್ಲಿ, NGO ಗಳು ಹೊಮ್ಮಿಬಂದ ಚರಿತ್ರೆಗಳು ಬೇರೆ ಬೇರೆ ರೀತಿಯದಾಗಿವೆ. ಉಪಖಂಡದಲ್ಲಿ ಅವರ ಕ್ಷಿಪಣಿ ಮಾರ್ಗ (Trajectory)ಗಳಲ್ಲಿರುವ ವೈವಿಧ್ಯ ಮತ್ತು ಸರಕಾರೇತರಗೊಳಿಸುವಿಕೆಯ ಕ್ರಿಯೆಗಳು ರಾಜಕೀಯ ಮತ್ತು ಆರ್ಥಿಕ ಅಂಶಗಳಿಂದ ಟಿಸಿಲೊಡೆದಿರುತ್ತವೆ. (delegitimation) ನ್ಯಾಯಸಮ್ಮತವಲ್ಲವಾಗಿಸುವಿಕೆ, ವಿಶ್ವವಿದ್ಯಾಲಯಗಳ ಬುದ್ಧಿಜೀವಿ ವರ್ಗದ ಮೇಲಿನ ಆಕ್ರಮಣ ಮತ್ತು ಘರ್ಷಣೆ (attrition), ಸರ್ಕಾರವು ನಾಗರಿಕ ಸೇವಾಕಾರ್ಯಗಳನ್ನು ಬಿಟ್ಟುಕೊಡುವುದರ ಸ್ವರೂಪ ಮತ್ತು ಪ್ರಮಾಣ ಮಟ್ಟ, ಅಂತಾರಾಷ್ಟ್ರೀಯ ರಾಜಕೀಯಾರ್ಥಿಕ ಶ್ರೇಣಿಗಳಲ್ಲಿ ದೇಶ ಹೊಂದಿರುವ ರಾಜಕೀಯ ಸಾಧನೋಪಾಯ (leverage), ನವ ಉದಾರವಾದಿ ಆರ್ಥಿಕ ನೀತಿಗಳನ್ನು ಬಲಗೊಳಿಸಿರುವಿಕೆ ಹಾಗೂ ಸುಭದ್ರವಾದ ಉದ್ಯೋಗಗಳು ಲಭ್ಯವಾಗದಿರುವಿಕೆ ಮೊದಲಾದ ಅಂಶಗಳು NGO ಗಳ ಹುಟ್ಟಿಗೆ ಮೂಲ ಕಾರಣಗಳು. ದಕ್ಷಿಣ ಏಷ್ಯಾದ ದೇಶಗಳಿಗೆಲ್ಲ ಸಮಾನವಾಗಿ ಕಂಡುಬರುವ ಒಂದು ಸಂಗತಿಯೆಂದರೆ ಅಂತಾರಾಷ್ಟ್ರೀಯ ಅಭಿವೃದ್ಧಿಯಲ್ಲಾದ ಪಲ್ಲಟಗಳಿಗೆ ಹೊಂದಿದಂತೆ ಸಂಘಟನೆಗಳನ್ನು ಸರ್ಕಾರೇತರಗೊಳಿಸುವ ಪ್ರಕ್ರಿಯೆ ಕಳೆದ ದಶಕದಲ್ಲಿ ತೀವ್ರಗೊಂಡಿರುವುದು ಸರ್ಕಾರದ ಮರುವಿನ್ಯಾಸಗೊಳಿಸುವಿಕೆ (Reconfiguration) ಮತ್ತು ನಾಗರಿಕ ಸಮಾಜದೊಂದಿಗಿನ ಅದರ ಸಂಬಂಧಗಳು ಪ್ರಭುತ್ವವು ದೇಶಾತೀತ ಸಂಘಟನೆಗಳ ಮೇಲೆ ಅಧಿಕಾರವನ್ನು ಹೊರಿಸಿ ತಾನು ಆಡಳಿತಾತ್ಮಕವಾಗಿರದ ಜಾಗಗಳಾದ ಮಾರುಕಟ್ಟೆ ಮತ್ತು ಮಧ್ಯಸ್ಥಿಕೆಯ ಸಂಘಟನೆಗಳ ಮೇಲೆ ತನ್ನ ಹೊರೆಯನ್ನು ಇಳಿಸಿಕೊಂಡಿರುವುದಕ್ಕೆ ಈ NGOisation ಒಂದು ಸೂಚಕವಾಗಿದೆ.

### ಭಾಗ – 3

ಈ ಒಂದು ದಶಕದಲ್ಲಿ ಮಹಿಳಾ ಚಳವಳಿ ಎದುರಿಸುತ್ತಿರುವ ಅತ್ಯಂತ ದೊಡ್ಡ ಸವಾಲೆಂದರೆ ನವಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಗೆ ಹೊಂದಿಕೊಂಡಂತೆ ಉತ್ಪಾದನಾ ರೂಪಗಳಲ್ಲಿ ಹಾಗೂ ಶ್ರಮದ ಸಂಘಟನೆಯಲ್ಲಿ ಆಗುತ್ತಿರುವ ಬದಲಾವಣೆಗಳದು. ಜಾತಿವಾದಿ ಮತ್ತು ರಾಷ್ಟ್ರೀಯವಾದಿ ತಾತ್ವಿಕತೆಗಳು ಯಾವಾಗಲೂ ಮಹಿಳೆಯರನ್ನು 'ಗಡಿಗಳ ಪಹರೆದಾರರು' (ಸಂಸ್ಕೃತಿಯೂ ಸೇರಿದಂತೆ) ಎಂದೇ ನಿರ್ವಚಿಸುತ್ತಾ ಬಂದಿವೆ. ಬಿಡಿ ವ್ಯಕ್ತಿಗಳಾಗಿ, ಬಳಕೆದಾರರಾಗಿ ಮಾರುಕಟ್ಟೆಯಿಂದ ನಿರ್ದೇಶಿತವಾದ ಏಜೆನ್ಸಿಗಳಾಗಿಯೂ ವಿಧೇಯರಾದ ದುಡಿಮೆಗಾರರಾಗಿಯೂ ಅವರ ಲಕ್ಷಣವನ್ನು ನಿರ್ವಚಿಸಲಾಗುತ್ತಿದೆ. ಬಂಡವಾಳದ ಜಾಗತೀಕರಣವು ಉತ್ಪಾದನೆಯ ಕಾರ್ಯಗಳನ್ನು ಮರುಸಂಘಟಿಸುವುದರಿಂದ ಅದು ಮಹಿಳೆಯರನ್ನು ಕಡಿಮೆ ಕೂಲಿಯ ಅನೌಪಚಾರಿಕ ವಲಯಗಳಿಗೆ ತಳ್ಳುತ್ತದೆ. ಅವರ ಜೀವನೋಪಾಯಕ್ಕಾಗಿ ಅವರು ಹೆಚ್ಚು ದುಡಿಯುವಂತೆ ಮಾಡುತ್ತದೆ ಮತ್ತು ಮನೆ ಎಂಬುದನ್ನು ಸೇವಾನಿರತ ಸಂಸ್ಥೆಯನ್ನಾಗಿ ಹಲವು ಸಲ 'ರಾಷ್ಟ್ರೀಯ'ವಾಗಿ ಸಂಘಟಿತವಾಗಿರುವ ಪಿತೃಪ್ರಧಾನ ದುಡಿಮೆಯ ಕ್ಷೇತ್ರಗಳನ್ನಾಗಿ ಮರುಸ್ಥಾಪನೆ ಮಾಡುತ್ತದೆ. ಅನೇಕಸಲ ಮಹಿಳೆಯರಿಗೆ ರಾಷ್ಟ್ರವ್ಯಾಪಿಯಾದದ್ದು ಎಂಬುದು ಹೊಸ ರೀತಿಯ ದೇಶೀಯ ಶೋಷಣೆಗಳ ಜಾಗಗಳನ್ನು ತೆರೆಯುವುದೂ ಆಗಿರುತ್ತದೆ. ಇಂಡಿಯಾ ಬಹುರಾಷ್ಟ್ರೀಯ ಕಂಪನಿಗಳು ನೇರವಾಗಿ ನಮ್ಮಲ್ಲಿ ಬಂಡವಾಳವನ್ನು ಹೂಡಲಿ ಎಂದು ಅವುಗಳನ್ನು ಓಲೈಸುವುದರಿಂದ ಖಾಸಗಿ ವಲಯವು ಹಿಂದಿನಿಂದ ಬಂದಿರುವ ಲಿಂಗತ್ವ ಆಧರಿತ ದುಡಿಮೆಗಳನ್ನು, ಉದಾಹರಣೆಗೆ, ಗೃಹಕೇಂದ್ರಿತ ಉತ್ಪಾದನೆಗಳಂಥವನ್ನು ಒಪ್ಪುವ ಇಲ್ಲವೆ ತೀವ್ರಗೊಳಿಸುವುದರಿಂದ ಬೇರೆ ಅನೇಕ ಬಗೆಯ ಮಹಿಳಾ ದುಡಿಮೆಗಳನ್ನು ರಫ್ತು ದೃಷ್ಟಿಯುಳ್ಳ ಉತ್ಪಾದನೆಗೆ ತಕ್ಕಂತೆ ಒಗ್ಗಿಸುವ ಹಾಗೂ ದೇಶದಾಚೆಗೂ ಶೋಷಣೆಗೆ ಒದಗುವಂಥ ಸಂಪನ್ಮೂಲವನ್ನಾಗಿ ಪರಿವರ್ತಿಸುತ್ತದೆ. ರಫ್ತು ಪ್ರಕ್ರಿಯೆಯ ವಲಯಗಳಿಗೆ ಭಾರತವು ಬಹು ತಡವಾಗಿ ಪ್ರವೇಶಿಸಿತು. ಆದರೆ ಈಗ ಅದು ಲ್ಯಾಟಿನ್ ಅಮೆರಿಕಾ, ಆಗ್ನೇಯ ಏಷ್ಯಾ ಮತ್ತು ಶ್ರೀಲಂಕಾಗಳಿಗೆ ಸರಿಗಟ್ಟುವಂತಾಗಿದೆ. ಇಲ್ಲೂ ಹದಿಹರೆಯದ ಅಥವಾ ಅವಿವಾಹಿತ ಯುವತಿಯರನ್ನೇ ಉದ್ಯೋಗಕ್ಕೆ ನೇಮಿಸಿಕೊಳ್ಳುವುದು EPZ ಗಳಲ್ಲಿ ಹೆಚ್ಚಾಗುತ್ತಿದೆ. ಈ EPZ ಗಳು ಅಗ್ಗದ, ಕೌಶಲವುಳ್ಳ/ಅರೆಕುಶಲತೆಯ ಮಹಿಳಾ ದುಡಿಮೆಯ ಮೇಲೆ ಅವಲಂಬಿತವಾಗಿದ್ದು ಅಭದ್ರವಾದ ಉದ್ಯೋಗಗಳನ್ನು ಒದಗಿಸುತ್ತವೆ ಮತ್ತು ಅವರು ಯೂನಿಯನ್ನುಗಳನ್ನು ಕಟ್ಟಿಕೊಳ್ಳುವುದನ್ನು ನಿರುತ್ತೇಜನಗೊಳಿಸುತ್ತವೆ.

ಜಗತ್ತಿನಾದ್ಯಂತ ಹೊಮ್ಮಿ ಬಂದಿರುವ ಈ ಹೊಸ ಕಾರ್ಮಿಕ ವರ್ಗವು ಕಾನೂನುಬದ್ಧ ಹಾಗೂ ಕಾನೂನುಬದ್ಧವಲ್ಲದ ವಲಸೆಗಾರರನ್ನು ಒಳಗೊಂಡಿರುತ್ತದೆ. ಇವರು ಅತಿ ಕಡಿಮೆ ಕೂಲಿಗೆ ದುಡಿಯುವವರು, ಸೇವೆಗಳನ್ನು ಒದಗಿಸುವವರೂ ಆಗಿದ್ದು ಜಾಗತಿಕವಾಗಿ ಅನೌಪಚಾರಿಕ ಆರ್ಥಿಕ ವ್ಯವಸ್ಥೆಯ ಶ್ರಮಸಾಮ್ರಾಜ್ಯವು ಲಿಂಗತ್ವ ಆಧರಿತ ದುಡಿಮೆಯ ಪ್ರತ್ಯೇಕ ವಲಯಗಳನ್ನು ಹುಟ್ಟು ಹಾಕಿದೆ. ಉತ್ಪಾದನೆಯ ಅಂತಾರಾಷ್ಟ್ರೀಕರಣ, ಜಾಗತಿಕ ಉತ್ಪಾದನಾ ಸರಪಳಿಗಳು ಹಾಗೂ ಉಪಕಾಂಟ್ರಾಕ್ಟ್‌ದಾರಿಕೆಗಳು ಈ ಪ್ರಕ್ರಿಯೆಯನ್ನು ತೀವ್ರಗೊಳಿಸಿವೆ. ಇಂಡಿಯಾದ ಒಳಗೂ ಏಷ್ಯಾದೊಳಗೆ ಅಂತಾರಾಷ್ಟ್ರೀಯ ವಾಗಿಯೂ ವಲಸೆ ಹೋಗುವವರಲ್ಲಿ ಮಹಿಳೆಯರೂ ಸಾಕಷ್ಟು ದೊಡ್ಡ ಪ್ರಮಾಣದಲ್ಲಿದ್ದಾರೆ. ಹಿಂದೆಂದಿಗಿಂತ ಹೆಚ್ಚು ಚಲನಶೀಲರಾಗಿರುವ ಇವರು ಗಮನಾರ್ಹವಾಗಿ ಮನೆಗೆಲಸದ ಆಳುಗಳಾಗುವಂಥ ಉದ್ಯೋಗಗಳನ್ನು ಹುಡುಕುತ್ತಾ ಫಿಲಿಪೈನ್ಸ್, ಶ್ರೀಲಂಕಾಗಳಿಂದಲೂ ನರ್ಸ್‌ಗಳಾಗಿ ಸೇವೆ ಒದಗಿಸುವ ದಾದಿಯರಾಗಿ ಕೇರಳದಿಂದಲೂ ವಲಸೆ ಹೋಗುತ್ತಾರೆ. ಅವರು ತರುವ ವಿದೇಶೀ ವಿನಿಮಯದ ಹಣವು ಭಾರತ, ಶ್ರೀಲಂಕಾ ಸೇರಿದಂತೆ ಏಷ್ಯಾದ ಅನೇಕ ದೇಶಗಳ ಆರ್ಥಿಕ ವ್ಯವಸ್ಥೆಯನ್ನು ಸಮೃದ್ಧವಾಗಿಸುತ್ತದೆ. ಮಹಿಳೆಯರ ದುಡಿಮೆಯ ಈ ರೀತಿಯ ರಫ್ತುಗಾರಿಕೆ ಪರಿರಚಿತವಾದದ್ದಾಗಿದ್ದು ಭಾಗಶಃ ಕಾರ್ಮಿಕ ಕಾಂಟ್ರಾಕ್ಟ್‌ಗಳ ಮೂಲಕ ನಡೆಯುತ್ತದೆ. ತಮ್ಮ ಆರ್ಥಿಕ (Remittance) ರವಾನೆಯ ಹೆಚ್ಚಳಕ್ಕಾಗಿ ದೇಶಗಳು ಹೀಗೆ ಮಹಿಳಾ ದುಡಿಮೆಯನ್ನು ರಫ್ತು ಮಾಡುತ್ತವೆ. ಆದರೆ ಶ್ರಮವಿಭಜನೆಯ ನೆಲೆಯಾದ ದಾಂಪತ್ಯ ಮತ್ತು ಸಂತಾನ ಪೋಷಣೆಗಳಲ್ಲಿ ಕೌಟುಂಬಿಕವಾಗಿ ಅದು ಹಲವಾರು ಸಂದಿಗ್ಧ ಪರಿವರ್ತನೆಗಳನ್ನೂ ಹುಟ್ಟಿಸಿದೆ ಎಂಬುದು ಒಂದು ಮಹತ್ವದ ಸಂಗತಿ. ಏಕೆಂದರೆ ವಿವಾಹಿತ ಮಹಿಳೆಯರೂ, ಮಕ್ಕಳ ತಾಯಂದಿರೂ ಏಕಾಕಿಗಳಾಗಿ ಹೀಗೆ ವಲಸೆ ಹೋಗತೊಡಗಿದ್ದಾರೆ.

ಫೋರ್ಡ್‌ನ ಅನಂತರದ ಉತ್ಪಾದನಾ ವ್ಯವಸ್ಥೆ (ಸಾಪೇಕ್ಷವಾಗಿ ಈಗಲೂ ಕೇಂದ್ರೀಕೃತ ಮಾದರಿಯಲ್ಲಿದ್ದರೂ) ದೂರದ ದೇಶಗಳಲ್ಲಿ ಚೆದುರಿದಂತೆ ಹರಡಿದ್ದು ಆ ದೇಶಗಳ ನಿವೇಶನಗಳಲ್ಲಿ ಅದು ಕಾಣೆಯಾಗಿದೆ. ಒಟ್ಟಾಗಿ ಶೇಖರಿಸಿದ ಪದಾರ್ಥಗಳು ಮಾತ್ರ ಮೂಲದ ಕೇಂದ್ರಕ್ಕೆ ಸೇರಿವೆ. ಈಗ ಗುಮಾಸ್ತರ ಕೆಲಸಗಳು, ದೂರವಾಣಿ ಸೇವೆಗಳೇ

ಮುಂತಾದ ಸೇವೆಗಳನ್ನು ತೀವ್ರವಾಗಿ (out source) ಹೊರ ಮೂಲದ್ದನ್ನಾಗಿ ಮಾಡುವ ಮೂಲಕ ಹೊಸ ರೂಪದಲ್ಲಿ ಎಲ್ಲವನ್ನೂ ಚೆದುರಿಸುವಿಕೆ (Disaggregating) ಹಾಗೂ ಶ್ರಮದ ಅಭೌತಿಕೀಕರಣ (Dematerialization) ಉಂಟಾಗಿದೆ. ದಿನವೂ ನಡೆಯುವ ಅತಿದೂರದ, ಗಡಿಯಾಚೆಗಿನ ಸೇವೆಗಳೂ ಅಷ್ಟೇ ಅನಾಮಿಕವೂ ಅದೃಶ್ಯರೂಪದ್ದೂ ಆಗಿವೆ. ಹೀಗೆ ಹೊರಕ್ಕೆ ಸಾಗಿಸಲ್ಪಟ್ಟ ಕೆಲಸಗಾರಳು ಅಥವಾ ಎಲೆಕ್ಟ್ರಾನಿಕ್ ದುಡಿಮೆಗಾರಳಾಗಿ ವಲಸೆಗಾರಳಾದ ಮಹಿಳೆ ತನ್ನದೇ ದೇಶದಲ್ಲಿ ವಾಸಿಸುತ್ತಿದ್ದೂ ಬೇರೊಬ್ಬರ ದೈನಂದಿನ ಬದುಕಿನೊಳಗೆ ದುಡಿಯುತ್ತಿರುತ್ತಾಳೆ. ತನ್ನ 'ಹೊರಗಿನ' ಸೇವೆಗಳ ಮೂಲಕ ಬೇರೆ ದೇಶದ ಕಾರ್ಯವನ್ನು ಸಲೀಸಾಗಿ ನಿರ್ವಹಿಸಲು ನೆರವಾಗುತ್ತಿರುತ್ತಾಳೆ. ಅದೇ ಹೊತ್ತಿಗೆ ಕಾರ್ಮಿಕ ವಲಸೆಯು ದೇಶದಾದ್ಯಂತ ಸ್ವದೇಶೀ ಸೇವಾವಲಯಗಳನ್ನೂ, ಪೋಷಣಾ ಉದ್ಯಮದಲ್ಲಿ ಹೊಸರೀತಿಯ ಆದರೆ 'ಅನ್ಯ'ರನ್ನು ಆತಿಥೇಯ ದೇಶಗಳಲ್ಲಿ ಕಣ್ಣಿಗೆ ಕಾಣಬಲ್ಲ ರೀತಿಗಳಲ್ಲಿ ಒಗ್ಗೂಡಿಸುತ್ತಿದೆ. ನಾವು ಈಗ ಕಾಣುತ್ತಿರುವುದು ದುಡಿಮೆಯು ಸಾಪೇಕ್ಷವಾಗಿ ವಿಕೇಂದ್ರಿತವಾಗಿರುವ ಉತ್ಪಾದನಾ ವ್ಯವಸ್ಥೆಯನ್ನು. ಇದರೊಂದಿಗೆ ಜನಗಳ, ಕುಟುಂಬಗಳ ಹಾಗೂ ದೇಶಗಳ ಗಡಿರೇಖೆಗಳ ಆಚೆಗೆ ಪ್ರಚಲಿತಗೊಳ್ಳುತ್ತಿರುವ ಅಥವಾ ಮತ್ತೆ ಸೇರ್ಪಡೆಯಾಗುತ್ತಿರುವ ತಮ್ಮನ್ನು ಬಲವಾಗಿ ಹೇರಿಕೊಳ್ಳುವ ಲಿಂಗವಾದಿ, ಜನಾಂಗವಾದಿ ತಾತ್ವಿಕತೆಗಳು ಎದ್ದು ಬರತೊಡಗಿವೆ.

ಈ ಹೊಸ ಕಾರ್ಮಿಕ ವರ್ಗವು ಶ್ರಮಗಾರಿಕೆಯ ಹೊರಕ್ಕೆ ರವಾನೆಯಾಗುವ ದುಡಿಮೆ ಶಕ್ತಿಯುಳ್ಳ ಕಾರ್ಮಿಕರ ಸಂದರ್ಭದಲ್ಲಿರುವಂತೆ ಅಭೌತಿಕೀಕರಣ ಮತ್ತು ನಿಷ್ಪ್ರಾಂತೀಕರಣ ಈ (Deterritorialisation) ಎರಡರ ಲಕ್ಷಣಗಳನ್ನೂ ಒಳಗೊಂಡದ್ದಾಗಿದೆ. ವಲಸೆಗಾರ ಶ್ರಮಿಕರು (ಕಾನೂನುಬದ್ಧವಿರಲಿ ಅಲ್ಲದಿರಲಿ) ಅವರ ಹಕ್ಕುಗಳ ನೆಲೆಯ ಸಂದಿಗ್ಧತೆಗೆ ಒಳಗಾಗಿದ್ದಾರೆ. ದೇಶದ ಸರ್ಕಾರದೊಂದಿಗಿನ ಸಂಬಂಧ ಕೂಡ ಸಂದಿಗ್ದತೆಗೆ ಒಳಗಾಗಿದೆ. ರಾಷ್ಟ್ರೀಯ ಪ್ರಜೆ ಎಂಬ ಸ್ಥಿತಿಯನ್ನು ಇದು ವಿಚಲಿತಗೊಳಿಸುತ್ತದೆ. ಏಕೆಂದರೆ ಸ್ಥಳಾಂತರಿಸಲ್ಪಟ್ಟ ದುಡಿಮೆಗಾರರ ಹಕ್ಕುಗಳನ್ನು ಸ್ವಂತ ದೇಶದ ಸರ್ಕಾರವೂ ಅನ್ಯದೇಶೀಯ ಸರ್ಕಾರವು Truncate ಅಥವಾ ನಿರಾಕರಿಸಲೂಬಹುದು. ವಲಸೆಗಾರ ಕಾರ್ಮಿಕರನ್ನು ಕಳಿಸುವ ಹಾಗೂ ಬರಮಾಡಿಕೊಳ್ಳುವ ದೇಶವಾಗಿ ಭಾರತದ ಸ್ಥಾನ ಏನು ಎಂಬುದನ್ನು ಅಂತಾರಾಷ್ಟ್ರೀಯ ಮಾನದಂಡದಿಂದ ಅದರ ಕೆಳಸ್ತರತ್ವ ಮತ್ತು ಏಷ್ಯಾದಲ್ಲಿ ಅದರದೇ ಯಜಮಾನಿಕೆಯ ಆಳುವಿಕೆಗಳೆರಡರ ದೃಷ್ಟಿಯಿಂದ ನೋಡಬೇಕಾಗುತ್ತದೆ. ಶ್ರಮಸಂಬಂಧಿಯಾದ ವಲಸೆಗಾರಿಕೆ (ವೇಶ್ಯಾಗಾರಿಕೆಯೂ ಸೇರಿದಂತೆ) ದಕ್ಷಿಣ ಏಷ್ಯಾದಲ್ಲಿ ಜರಗುತ್ತಿದ್ದು, ವಿವಿಧ ದೇಶಗಳ ನಡುವೆ ಏರ್ಪಟ್ಟಿರುವ ಇಂತಹ ಸರ್ಕ್ಯೂಟಿನಲ್ಲಿ ಭಾರತ ಕೂಡ ಒಂದು ಮುಖ್ಯಭಾಗವಾಗಿದೆ. ಭಾರತದ ಸವಲತ್ತುರಹಿತರನ್ನು ಹೊರ ದೇಶಕ್ಕೆ (ಕೂಲಿಗಾಗಿ) ರವಾನಿಸುವಿಕೆಯಲ್ಲಿ ಯಾವ ಕಾರ್ಮಿಕೀಕರಣವು ಕೆಲಸ ಮಾಡುತ್ತದೆಯೋ ಅದೇ ಕಾರ್ಮಿಕೀಕರಣದ ಭಾಗವಾಗಿ ಭಾರತದಲ್ಲಿ ದೆವ್ವದಾಕಾರಕ್ಕೆ ಬೆಳೆದ (Demonized) ಕಾಯಿದೆಬದ್ಧವಲ್ಲದ ವಲಸೆಗಾರಿಕೆಗೂ (ವಿಶೇಷವಾಗಿ ಬಾಂಗ್ಲಾದೇಶದ ಸಂಬಂಧದಲ್ಲಿ) ಕಾರಣವಾಗಿರುತ್ತದೆ. ಬಂಡವಾಳದ ಚಲನೆಯು ಹೆಚ್ಚುತ್ತಿರುವಷ್ಟು ವೇಗವಾಗಿ ಚಲಿಸುತ್ತಿರದ ದುಡಿಮೆಗಳು ವರ್ಗದ ಸ್ವರೂಪವನ್ನು ಮರುನಿರ್ವಚಿಸಬೇಕಾದ ಹೊಸ ಒತ್ತಡಗಳನ್ನು ಸೃಷ್ಟಿಸುತ್ತಿವೆ. ದುಡಿಮೆಗಾರರನ್ನು ರವಾನಿಸುವ ಮತ್ತು ಆಮದು ಮಾಡಿಕೊಳ್ಳುವ ದೇಶದಲ್ಲಿ ವರ್ಗದ ಸ್ವರೂಪವು ಎರಡು ರೀತಿಗಳಲ್ಲಿ ಮರುಸಂಯೋಜನೆಗೊಳ್ಳುತ್ತದೆ. ಹಾಗಿರುವಾಗ ಶ್ರೀಲಂಕೆಯ ಮನೆಗೆಲಸದ ಆಳುಗಳು ಅಥವಾ ಕೇರಳದ ನರ್ಸುಗಳು ಕೊಲ್ಲಿ ದೇಶಗಳಲ್ಲಿ ಯಾವ ಜಾಗದಲ್ಲಿ ಇರಿಸಲ್ಪಡಬೇಕು? ಆ ದೇಶಗಳ ಸಂಬಂಧದಲ್ಲೋ ಅಥವಾ ವಿಸ್ತಾರವಾದ ಅಂತರದೇಶೀಯ ಸ್ವರೂಪಗಳಲ್ಲೋ? ಈ ಹೊಸ ಕಾರ್ಮಿಕವರ್ಗದ ವರ್ಗಸಂಬಂಧವು ದೈಹಿಕವಾಗಿ ದುಡಿಮೆಯ ವಲಸೆಯ ಮೂಲಕವಾಗಿ ಹೊರ ಮೂಲಕ್ಕೆ ರವಾನೆಗೊಂಡ ಅತಿ ದೂರದ ಸೇವೆಗಳಿಂದಲೂ ಸೃಷ್ಟಿಯಾದದ್ದಾಗಿರುತ್ತದೆ. ದುಡಿಮೆಯ ಮೂಲಸ್ಥಾನ ಅಥವಾ ದುಡಿಮೆಯ ಜಾಗದ ಪ್ರಶ್ನೆಗೆ ಅದು ಉತ್ತರಿಸಲಾರದು. ವೇಗಗೊಳಿಸಲ್ಪಟ್ಟ ಚಲನಶೀಲತೆಯ ಪರಿಮಿತಿಗಳಲ್ಲೂ ಅದಕ್ಕೆ ಉತ್ತರವನ್ನು ಹುಡುಕಬೇಕಾಗುತ್ತದೆ. ಹೀಗೆ ವರ್ಗ ಎಂಬುದನ್ನು ಅರ್ಥೈಸಿಕೊಳ್ಳಲು ದೇಶೀಯ ಉತ್ಪಾದನಾ ಸಂಬಂಧವೊಂದೇ ಸಾಲದಾಗುತ್ತದೆ. ಶ್ರಮವು ಲಿಂಗತ್ವವನ್ನು ಆಧರಿಸಿ ಹೇಗೆ ಸ್ಥಾನಾಂತರಗೊಳ್ಳುತ್ತಿದೆ ಮತ್ತು ಜಾಗತಿಕ ಅರ್ಥವ್ಯವಸ್ಥೆಯಲ್ಲಿ ಉಳಿವಿಗಾಗಿ ಹೇಗೆ ಯತ್ನಿಸುತ್ತಿದೆ ಎಂಬುದನ್ನೂ ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಸಮಕಾಲೀನ ಬಂಡವಾಳಶಾಹಿಯು ಶ್ರಮದ ವಲಸೆಗಾರಿಕೆಯ ಅಥವಾ ದೇಶಾಂತರದ ಹಿತಾಸಕ್ತಿಯಲ್ಲಿ ಕುಟುಂಬವನ್ನು ದುರ್ಬಲಗೊಳಿಸುತ್ತದೆ. ಆದರೆ ಕೌಟುಂಬಿಕವಾದ ಪಿತೃಪ್ರಾಧಾನ್ಯದ ತಾತ್ವಿಕತೆಗಳನ್ನು ತೊಡೆದು ಹಾಕುವುದಿಲ್ಲ. ಅದು ಕುಟುಂಬ – ಗೃಹಕೃತ್ಯ ಹಾಗೂ ಮಹಿಳೆಯರ ವೇತನ ಸಹಿತ ದುಡಿಮೆಗಳ ಬೆಸುಗೆಗಳನ್ನು ಮರುಸಂಯೋಜನೆ ಮಾಡುತ್ತದೆ, ಶಾಶ್ವತವಾಗಿ ಮುಂದುವರೆಸುತ್ತದೆ. ಚಲನಶೀಲರಾದ ಮಹಿಳೆಯರು ಸೇವಾವಲಯವನ್ನು ವಿಸ್ತರಿಸುತ್ತಿರುವಲ್ಲಿ ವಿವಾಹ ಸಂಸ್ಥೆಯನ್ನು, ಸಾರ್ವಜನಿಕ ಸೇವೆಯ ಕೊರತೆಯನ್ನು ತುಂಬಿಸಿಕೊಡಬಲ್ಲ ಒಂದು ಸೇವಾಸಂಸ್ಥೆಯನ್ನಾಗಿ ಕಾಪಾಡಿಕೊಳ್ಳುವುದು ಅವಶ್ಯಕವಾಗುತ್ತದೆ. ವಿಧೇಯರಾದ, ವಿನೀತರಾದ ಮಹಿಳೆಯರು ಕುಟುಂಬಗಳ ಒಳಗೂ ಅವಶ್ಯಕವಾದವರು, ದುಡಿಮೆ ಜಾಗದಲ್ಲೂ ಬೇಕಾಗಿರುವವರು. ಮಹಿಳೆಯರ ಮೇಲಿನ ಹಿಂಸಾಚಾರಗಳು ಬಗೆಬಗೆಯಾಗಿ ಹೆಚ್ಚುತ್ತಿರುವುದಕ್ಕೆ ಇದೂ ಒಂದು ಕಾರಣ. ಏಕೆಂದರೆ ಹಿಂಸೆಯು ಮಹಿಳೆಯರಿಗೆ ಅವರ ಜಾಗದಲ್ಲೇ ಇರಬೇಕಾದವರು ಎಂಬ ಸಂದೇಶವನ್ನು ರವಾನಿಸುವ ಸಂಕೇತವಾಗಿದ್ದು, ಹೆಂಗಸರನ್ನು ವಿವಾಹ ಸಂಸ್ಥೆಯೊಳಗೇ ಕಟ್ಟಿ ಇರಿಸಲು, ಅದು ಒಂದು ಬಾಳಿಕೆ ಬರುವ ಸಂಸ್ಥೆಯಾಗುವಂತೆ ಮಾಡಲು ಹಾಗೂ ಮಹಿಳೆಯರ ಚಲನೆಯನ್ನು ಬೇಕಾದಂತೆ ನಿಯಂತ್ರಿಸಲು, ಅವರ ವೇತನ ಹಾಗೂ ಸಂಪನ್ಮೂಲಗಳಿಗೆ ಪ್ರವೇಶಿಸಲೂ ಅದು ಸಂದೇಶ ನೀಡುತ್ತದೆ.

ಶ್ರಮದ ಅಭೌತಿಕೀಕರಣ ಮತ್ತು ನಿಷ್ಪ್ರಾಂತೀಕರಣಗಳು ಕಾರ್ಮಿಕರ ಹಕ್ಕುಗಳು ಅಸ್ಥಿರಜಾಗಗಳಲ್ಲಿ ಇರುವುದು, ಎಲ್ಲದಕ್ಕೂ ಒಗ್ಗಿಕೊಳ್ಳಬಲ್ಲ ಹೊಸ ಶಿಸ್ತು (flexibility) ಇವುಗಳು ಹೊಸ ಶ್ರಮರಾಜ್ಯಗಳ ಅವಿಭಾಜ್ಯ ಅಂಗಗಳಾಗಿವೆ. ಇವುಗಳನ್ನು ನಿರ್ವಹಿಸಲು ಇದುವರೆಗೂ ನಮಗೆ ರೂಢಿಯಾಗಿ ಹೋಗಿರುವ ಸಂಸ್ಥಾತ್ಮಕವಾದ ಹಾಗೂ ಮುಖಾಮುಖಿಯಾದ ಹೋರಾಟ ತಂತ್ರಗಳಿಗಿಂತ ಹೆಚ್ಚಿನದು ಬೇಕಾಗಿದೆ. ಆದರೆ ಭಾರತೀಯ ಮಹಿಳಾ ಚಳವಳಿಯು ಮಹಿಳಾ ಸಮಸ್ಯೆಗಳ ವಿಶಾಲವಾದ ದೃಷ್ಟಿಕೋನವನ್ನು ತಳೆಯುವುದಕ್ಕೆ ಸರ್ಕಾರದೊಂದಿಗೆ ಬೇಡಿಕೆಗಳನ್ನು ಮುಂದಿಟ್ಟೂ ಆ ಸರ್ಕಾರವನ್ನೇ ವಿಮರ್ಶೆಗೆ ಗುರಿಮಾಡುವುದಕ್ಕೆ ಹಸ್ತಾನುಕೂಲವಾಗಿ ಒಂದು ಹೊಸ ಶಕ್ತಿಯಾಗಿ ಒದಗಬಹುದಾಗಿದೆ. ದೇಶದ ಸ್ಥಳಾವಕಾಶದೊಳಗೆ ತನ್ನ ಹೋರಾಟಗಳನ್ನು ಉಳಿಸಿಕೊಂಡು ಮುಂದುವರೆಸುವುದು ಹೇಗೆ ಎಂಬುದರ ಜೊತೆಗೆ ಹೊಸ ಆರ್ಥಿಕ ವ್ಯವಸ್ಥೆಯಲ್ಲಿ ರಾಷ್ಟ್ರೀಯ ಗಡಿರೇಖೆಗಳು ಕರಗುವುದು, ಪುನಾರಚನೆಯಾಗುವುದನ್ನು ಎದುರಿಸುವುದು ಹೇಗೆ

ಎಂಬುದೂ ಇಂದು ಮಹಿಳಾ ಚಳವಳಿಯ ಎದುರಿಗಿರುವ ತುರ್ತಿನ ಪ್ರಶ್ನೆಯಾಗಿದೆ. ಮುಂಬರುವ ದಶಕಗಳಲ್ಲಿ ಪಿತೃಪ್ರಾಧಾನ್ಯಗಳು ರಾಷ್ಟ್ರೀಯವಾಗಿಯೂ, ಪರದೇಶಗಳಲ್ಲೂ ಶ್ರಮದ ಸರಕೀಕರಣ, ಕೊಳ್ಳುಬಾಕತನ ಹಾಗೂ ಹಿಂಸೆಗಳ ಸುತ್ತಲೂ ತಮ್ಮನ್ನು ಮತ್ತೆ ಒಗ್ಗೂಡಿಸಿಕೊಳ್ಳುತ್ತವೆ ಎಂದು ನಾನು ನಂಬಿದ್ದೇನೆ. ನಾವು ನಮ್ಮ ವಿಶ್ಲೇಷಣೆಯನ್ನೂ ನವೀಕರಿಸಬೇಕಾಗಿದೆ. ಈಗಿನ ಈ ಊಹೆಯನ್ನು ಗ್ರಹಿಸಲಿಕ್ಕೆ ಪಿತೃಪ್ರಾಧಾನ್ಯವು ಅಷ್ಟಿಷ್ಟು ಪರಿಷ್ಕಾರ ಗಳೊಂದಿಗೆ, ಬೇರೆ ಯಾವುದೇ ಶಬ್ದಕ್ಕಿಂತಲೂ ಹೆಚ್ಚು ಉಪಯುಕ್ತ ವಾಗಿದೆ. ಪಿತೃಪ್ರಾಧಾನ್ಯದ ಪರಿಕಲ್ಪನೆಯ ಸಂಬಂಧದಲ್ಲಿ ಸಮಾನವಾಗಿ ವ್ಯಕ್ತವಾಗುತ್ತಿರುವ ಸಮಸ್ಯೆಗಳು ಎಂದರೆ ಅದರ ಚರಿತ್ರಾತೀತ ಲಕ್ಷಣ ಹಾಗೂ ಸಂಸ್ಕೃತಿಗಳನ್ನು ದಾಟಿ, ಸಾರ್ವತ್ರಿಕವಾಗಿರುವ ಅದರ ಸ್ವರೂಪ, ಜಾತಿ, ಜನಾಂಗ, ವರ್ಗಗಳ ಒಳಬಂಧನಗಳನ್ನು ಪರಿಗಣನೆಗೆ ತೆಗೆದುಕೊಳ್ಳುವಲ್ಲಿ ಅದರ ಅಸಾಮರ್ಥ್ಯ ಹಾಗೂ ಅಂತಃಸತ್ವವಾದಿ ನೆಲೆಯಿಂದ ಗುರುತಿಸಲಾಗುವ 'ಮಹಿಳೆ' ಎಂಬ ಘಟಕದ ಮೇಲೆ ಅದು ಸಮಾವೇಶಗೊಂಡಿರುವುದು. ಈ ಶಬ್ದದ ಬಹುತ್ವಕರಣ ಹಾಗೂ ಮರುನಿರ್ವಚನವನ್ನು ಈ ಪ್ರಬಂಧದ ಮೊದಲಲ್ಲೇ ಮಾಡಲಾಗಿದ್ದು ಅದು ಈ ಮೇಲಿನ ಆಕ್ಷೇಪಣೆಗಳನ್ನು ಎದುರಿಸುವುದಕ್ಕೆ ಸಾಕಷ್ಟು ಸಮರ್ಥವಾಗಿದೆ. ಆದರೂ ಇನ್ನೂ ಕೆಲವು ಆಕ್ಷೇಪಣೆಗಳನ್ನು ನಾವೀಗ ಎದುರಿಸಬೇಕಾಗಿದೆ. ಮಹಿಳೆ ಎಂಬುದನ್ನು (ontologise) ಮೂಲತತ್ತ್ವವನ್ನಾಗಿ ಮಾಡುವುದು ನಿಜಕ್ಕೂ ಒಂದು ಸಮಸ್ಯೆಯೇ. ಆದರೆ ಪಿತೃಪ್ರಾಧಾನ್ಯವು ಮಹಿಳೆಯರೊಂದಿಗೆ ವಿನಿಮಯಮಾಡಿಕೊಳ್ಳು ವಂತಹುದಲ್ಲ, ಅದು ಒಂದು ಮೂಲತಾತ್ತ್ವಿಕ ವಾದ ಘಟಕವೂ ಅಲ್ಲ. ಪಿತೃಪ್ರಧಾನ ವ್ಯವಸ್ಥೆಗಳು ದಮನಕಾರಿ ಆಚರಣೆಗಳ ಮೇಲೆ ಅವಲಂಬಿತವಾಗಿದ್ದು ಅವು ಸ್ತ್ರೀಪುರುಷರನ್ನು ಮಹಿಳೆಯರು ಮತ್ತು ಪುರುಷರು–ದಬಾವಣೆ ಮಾಡುವವರು ದಮನಕ್ಕೆ ಒಳಗಾದವರು ಎಂದು ತಮ್ಮ ಕಾರ್ಯವಿಧಾನಗಳಿಂದ ಸುತ್ತುವರೆದಿರುತ್ತವೆ. ರಾಚನಿಕವಾದ ಇನ್ನಿತರ ಸಾಮಾಜಿಕ ವಿಭಜನೆಗಳು, ಇತರ ಅಸಮಾನ ವ್ಯವಸ್ಥೆಗಳೊಂದಿಗೆ ಇವು ಸಂಬಂಧ ಹೊಂದಿರುತ್ತವೆ. ಹೊಸ ಬಗೆಯ ಸಾಮಾಜಿಕ ಬಿಗಿತಗಳು ಹೊಮ್ಮಿರುವುದಕ್ಕೆ ಇವು ಕಾರಣವಾಗಿರುತ್ತವೆ. ಪಿತೃಪ್ರಾಧಾನ್ಯಗಳು ಸಂಬಂಧಾತ್ಮಕವಾಗಿದ್ದು ಬೇರೆ ಬೇರೆ ಚಾರಿತ್ರಿಕ ಸಂಯೋಜನೆಗಳನ್ನು ಆಶ್ರಯಿಸಿರುತ್ತವೆ. ಮತ್ತು ನಿರಂತರವಾಗಿ ಮರುಸೂತ್ರೀಕರಣಗೊಳ್ಳುತ್ತಿರುತ್ತವೆ. ಚಾರಿತ್ರಿಕವಾಗಿ ಮಹಿಳೆಯರಿಗೆ ದಕ್ಕಬಹುದಾದ ಅಂತಃಸತ್ವದ ಜಾಗ ಯಾವುದೂ ಇಲ್ಲ.

ಪಿತೃಪ್ರಾಧಾನ್ಯಕ್ಕೆ ಪರ್ಯಾಯವಾಗಿ ಬಹುವಾಗಿ ಬಳಕೆಯಾಗುವ ಪದವೆಂದರೆ 'ಜೆಂಡರ್' ಈ ಜೆಂಡರ್ ಎಂಬುದರ ಅರ್ಥಕೂಡ ಲಿಂಗಭಿನ್ನತೆಯ ಸೂಚಕವಾದ ಸಾಮಾಜಿಕ ರಚನೆ ಎಂಬುದರ ಆಚೆಗೂ ವೇಗವಾಗಿ ಚಲಿಸುತ್ತಿದೆ. ಸಾಮಾಜಿಕ ಸಂಸ್ಥೆಗಳು ಹಾಗೂ ಸಂಘಟನೆಗಳು, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಗಳು ಮತ್ತು ಅಧಿಕಾರ ಸಂಬಂಧ ಗಳನ್ನು ಸಂಕೇತಿಸುವ ಪ್ರಾಥಮಿಕ ವಿಧಾನವಾಗುವತ್ತ ಸಾಮಾಜಿಕ ಸಂಬಂಧಗಳ ಸಂವಿಧಾನಾತ್ಮಕ ಘಟಕವಾಗಿ ಅದರ ಅರ್ಥವು ಬೆಳೆದಿದೆ. ಕಾಲಕ್ರಮದಲ್ಲಿ ಜೆಂಡರ್ ಎಂಬುದರ ವಿಶ್ಲೇಷಿತ ಅರ್ಥವು ಜನಾಂಗ ಹಾಗೂ ವರ್ಗಗಳ ಅಂತರ ವಿಭಾಗೀಕರಣ ಮತ್ತು ಸಂಬಂಧಾತ್ಮಕತೆಯನ್ನು, ಸಂರಚನೆ, ಸಂಪನ್ಮೂಲಗಳನ್ನೂ ಅಧಿಕಾರಗಳ ಹಂಚಿಕೆಯನ್ನು ನಿರ್ಧರಿಸುವ ದುಡಿಮೆಯನ್ನು ಮನೆ ಹಾಗೂ ದುಡಿಮೆ ಕ್ಷೇತ್ರವೆಂದು ವಿಭಜಿಸುವ ತತ್ತ್ವವಾಗಿ ಹಾಗೂ ಪ್ರತಿನಿಧೀಕರಣದ ಆಚರಣೆಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಕಡೆಗೆ ವಿಸ್ತರಿಸಿದೆ. ಹೀಗೆ ಜೆಂಡರ್ ಮತ್ತು ಜಾತಿಜನಾಂಗಗಳ ವಿಭಜನಾತ್ಮಕತೆಗಳು ಒಟ್ಟಾಗಿ ಪಿತೃಪ್ರಾಧಾನ್ಯಗಳು ಮಾಡುವಷ್ಟೇ ಸೈದ್ಧಾಂತಿಕವಾಗಿ ಕೆಲಸ ಮಾಡುತ್ತವೆ ಎಂದು ಭಾವಿಸಬಹುದು. ನನ್ನ ಅನಿಸಿಕೆಯೆಂದರೆ ಜೆಂಡರ್ ಎಂಬುದು ಒಂದು ಪ್ರಕ್ರಿಯೆಯನ್ನು ಸೂಚಿಸಲು ಕ್ರಿಯಾಪದವಾಗಿ (ಜೆಂಡರಿಂಗ್) ಹೆಚ್ಚು ಅರ್ಥವತ್ತಾಗಿದೆಯೇ ಹೊರತು ನಾಮಪದವಾಗಿ ಅಲ್ಲ. ವ್ಯತ್ಯಾಸಗಳನ್ನು ಉತ್ಪಾದಿಸುವ ಈ ಶಬ್ದವು ನಿಯಮಾವಳಿಗಳನ್ನು, ಅಸ್ಮಿತೆಗಳನ್ನು, ಪ್ರತಿನಿಧೀಕರಣವನ್ನು, ಚರ್ಚೆಗಳನ್ನು ರೂಪಿಸುವಂಥ ಬದಲಾಗಬಹುದಾದ, ಪರಿವರ್ತನಾಶೀಲವಾದ ಹಾಗೂ ಗೊಂದಲಕಾರಿಯಾದ ಪ್ರಕ್ರಿಯೆಯಾಗಿದ್ದು ಅಸಮಾನತೆಯ ತಳಹದಿಮೇಲೆ ಅವಲಂಬಿಸಿರುತ್ತದೆ. ಏಕೆಂದರೆ ಒಂದು ಪಿತೃಪ್ರಧಾನವ್ಯವಸ್ಥೆಯ ಒಳಗೆ ನಿರ್ದಿಷ್ಟವಾದ ರಾಜಕೀಯ ಹಾಗೂ ಆರ್ಥಿಕ ರೂಪಗಳಲ್ಲಿ ಅದು ಕ್ರಿಯಾನಿರತವಾಗಿರುತ್ತದೆ. ಅತಿಯಾದ ಅರ್ಥ ಹೇರದೆ ಅಥವಾ ಇರುವ ಅರ್ಥವನ್ನು ಚೆದುರಿಸದೆ ಇದ್ದಲ್ಲಿ ಜೆಂಡರ್ ಎನ್ನುವುದು ಇಡೀ ಪಿತೃಪ್ರಧಾನ ವ್ಯವಸ್ಥೆಯ (conjectural system) ಊಹಾತ್ಮಕ ವ್ಯೂಹವನ್ನು ಸೂಚಿಸಲಾರದು. ಹಾಗೆ ಸೂಚಿಸಲು ಯತ್ನಿಸಿದಲ್ಲಿ ಅತಿಯಾಗಿ ಸಂಬಂಧವಾದಿಯಾದ ಇಲ್ಲವೆ ತಟಸ್ಥವಾದ ಮಾನವಶಾಸ್ತ್ರೀಯ ಕ್ಷೇತ್ರವಾದ 'ಲಿಂಗತ್ವ ವ್ಯವಸ್ಥೆಗಳು' ಎಂಬುದರ ಒಳಗೆ ಪ್ರವೇಶಿಸುವಂತಾಗಬಹುದು. ಒಂದು ಸ್ತ್ರೀವಾದಿ ಪರಿಕಲ್ಪನೆಯಾಗಿ ಜೆಂಡರ್ ಒಂದು ಅಂಚಿನ (edge) ಹಾಗೆ ಇದ್ದು ಈಗ ಒಂದು ಅಪಾಯದ ಸ್ಥಿತಿಯನ್ನು ಅದು ಎದುರಿಸುತ್ತಿದೆ. ಸ್ತ್ರೀವಾದಿ ಚಿಂತಕಿ ಜೋನ್‌ಸ್ಕಾಟ್ ಹೇಳುವಂತೆ 1970ರ ಹಾಗೂ 1980ರ ದಶಕಗಳಲ್ಲಿ ಜೆಂಡರ್ ಎಂಬುದಕ್ಕೆ ಒಂದು ಅಂಚು ಇದ್ದು ಅದು ಜೀವಶಾಸ್ತ್ರವನ್ನು ಸಂಸ್ಕೃತಿಯಿಂದ ಬೇರೆ ಮಾಡಿ ನೋಡುವಲ್ಲಿ ಬಹುಮುಖ್ಯ ಪಾತ್ರವನ್ನು ನಿರ್ವಹಿಸಿತ್ತು. ಆದರೆ ಅದು ಇನ್ನು ಮುಂದೆ ಯಾರನ್ನೂ 'ಬೆಚ್ಚುಬೀಳಿಸಿ ಪ್ರಚೋದಿಸ'ಲಾರದು, ಯಾವುದೇ ರಾಜಕೀಯ ಚರ್ಚೆಯನ್ನೂ ಅದು ಬದಲಾಯಿಸಲಾರದು, ಇಲ್ಲವೆ ಅಸ್ಥಿರಗೊಳಿಸಲಾರದು. ಅಂತಿಮವಾಗಿ, ಪಿತೃಪ್ರಾಧಾನ್ಯದ ಸಾಮಾನ್ಯ ಅರ್ಥೈಸುವಿಕೆ ಅದನ್ನು ಒಂದು ಏಕಶಿಲಾಕಾರದಲ್ಲಿ ನೋಡುವ ಐರೋಪ್ಯ ಪರಿಕಲ್ಪನೆಯಲ್ಲಿ ಇನ್ನಷ್ಟು ಹೆಚ್ಚಿನದನ್ನು ಒಳಗೊಳ್ಳಬಲ್ಲ ಜೆಂಡರ್ ಎಂಬ ಪರಿಕಲ್ಪನೆ ಬಿಳಿಯದಲ್ಲದ ಇತರ ವರ್ಣಗಳವರ ಒತ್ತಡಗಳಿಂದ ಬೇರೆ ಪ್ರದೇಶಗಳ ಅವಶ್ಯಕತೆಗಳನ್ನೂ ತನ್ನೊಳಗೆ ದಾಖಲಿಸುವಂಥ ಪರಿಕಲ್ಪನೆಗೆ ಆಸ್ಪದ ನೀಡಿತು. ಐರೋಪ್ಯ ಸಮಾಜವಾದಿ ಹಾಗೂ ಮಾರ್ಕ್ಸ್‌ವಾದಿ ಸ್ತ್ರೀವಾದಿಗಳಿಗಿದ್ದ ಪ್ರಾಥಮಿಕ ಸಮಸ್ಯೆ ಬಂಡವಾಳಶಾಹಿ ಹಾಗೂ ಪಿತೃಪ್ರಾಧಾನ್ಯಕ್ಕೆ ಇರುವ ಸಂಬಂಧದ ಪ್ರಶ್ನೆಯಾಗಿತ್ತು. ಆ ಎರಡೂ ಗುಂಪಿನವರ ಬೆಳಕು ಬೀರಬಲ್ಲ ಒಳನೋಟಗಳು, ಈ ಶಬ್ದದ ಪರಿಣಾಮಶೀಲತೆಯನ್ನು ಕುರಿತು ಅವರ ವಿಮರ್ಶೆಗಳು, ಈ ವಿಷಯದಲ್ಲಿ ಒರೆಹಚ್ಚಲ್ಪಟ್ಟಿದ್ದು ಕ್ಲಾಸಿಕಲ್ ಮಾರ್ಕ್ಸ್‌ವಾದಕ್ಕೂ ಕೇಂದ್ರ ಸಮಸ್ಯೆಯಾಗಿದ್ದ ಅಂಶವನ್ನೇ ಅವರೂ ಪುನರುಚ್ಚರಿಸಿದ್ದರು. ಬಂಡವಾಳಶಾಹಿಯಲ್ಲದ/ವಸಾಹತುಶಾಹಿಗೆ ಒಳಪಟ್ಟ ಸಮಾಜಗಳಲ್ಲಿ ಈ ಬಗ್ಗೆ ಇರುವ ವ್ಯತ್ಯಾಸಗಳ ಅರಿವಾಗಲಿ, ಅಂಥ ಕಡೆಗಳಲ್ಲಿ ತಾವು ಚರ್ಚಿಸುವ ಸಮಸ್ಯೆಯು ಅರ್ಥಹೀನವಾಗಬಹುದು ಎಂಬುದಾಗಲಿ ಅವರಿಗೆ ಅರಿವಿದ್ದಿಲ್ಲ ಎಂದೇನೂ ಅಲ್ಲ. ಬದಲಾಗಿ ಬಂಡವಾಳಶಾಹಿ ಬಗ್ಗೆ ಅವರ ಸೈದ್ಧಾಂತೀಕರಣವು ಯೂರೋ ಕೇಂದ್ರಿತವಷ್ಟೇ ಆಗಿತ್ತು. ಅದನ್ನು ಭಾರತದಂಥ ದೇಶಕ್ಕೆ ಸುಮ್ಮನೆ ಅನ್ವಯಿಸುವುದು ಅಸಾಧ್ಯವಿತ್ತು. ಏಕೆಂದರೆ ಭಾರತದಲ್ಲಿ ಬಂಡವಾಳಶಾಹಿಯು ಚಾರಿತ್ರಿಕವಾಗಿ ತುಂಬಾ ತಡವಾಗಿ ಪ್ರವೇಶಿಸಿತು, ಬಿಡಿ ಬಿಡಿ ವಲಯಗಳಲ್ಲಿ ಅದು ಪ್ರವೇಶಿಸಿತು ಮತ್ತು ಉತ್ಪಾದನೆಯ ವಿಭಿನ್ನ ವಿಧಾನಗಳು ಬಹು ದೀರ್ಘಕಾಲದವರೆಗೂ ಜೊತೆಯಾಗಿಯೇ ಸಾಗಿದ್ದವು. ಏಕಾಕಾರದ ಊಳಿಗಮಾನ್ಯತೆಯಿಂದ ಏಕಾಕಾರದ

ಬಂಡವಾಳಶಾಹಿಯತ್ತ ಹೊರಳುವ ಪರಿಕಲ್ಪನೆಗೆ ಇಲ್ಲಿ ಅವಕಾಶವಿರಲಿಲ್ಲ. ಜಾತಿ ಆಧರಿತ ವಿಭಜನೆಗಳು, ಶ್ರಮವಿಭಜನೆ, ಪ್ರಾದೇಶಿಕ ಅರ್ಥವ್ಯವಸ್ಥೆ, ಬುಡಕಟ್ಟುಗಳು, ಮಾತೃಮೂಲೀಯವಾದ ಹಾಗೂ ಪಿತೃಮೂಲೀಯ ಕೌಟುಂಬಿಕ ವ್ಯವಸ್ಥೆಗಳು, ಬಹುರೂಪದ ಕಾನೂನುಗಳುಳ್ಳ ಅಥವಾ ಧಾರ್ಮಿಕ ಕಾಯ್ದೆ ವ್ಯವಸ್ಥೆಗಳು ಹಾಗೂ ವೈವಿಧ್ಯಮಯ ಕಟ್ಟಳೆಗಳು ನಿಯಮಗಳ ಮೂಲಕ ಪಿತೃಪ್ರಾಧಾನ್ಯಗಳು ಇಲ್ಲಿ ಭಿನ್ನ ರೀತಿಗಳಿಂದ ಹರಳುಗಟ್ಟಿದ್ದವು ಇದರಿಂದಾಗಿ ಈ ಪರಿಕಲ್ಪನೆಯನ್ನು ಗಡಿಪಾರು ಮಾಡುವುದಕ್ಕಿಂತ ಹೆಚ್ಚಾಗಿ ಅದರ ನವೀಕರಣದ ಅಗತ್ಯವಿದೆ ಎಂದು ನನಗೆ ತೋರುತ್ತದೆ. ಪುರುಷಪ್ರಾಧಾನ್ಯ (ಲಿಂಗಗಳ ಯುದ್ಧ) ಎಂಬ ಅರ್ಥದಿಂದ 'ಪಿತೃಪ್ರಾಧಾನ್ಯ' ಎಂಬುದನ್ನು ಬೇರ್ಪಡಿಸಿದ್ದಾದರೆ ಮತ್ತು ಅದರ ಜಾಗದಲ್ಲಿ ಸಂರಾಚನಿಕ ಪ್ರಾಧಾನ್ಯವನ್ನು (ಮಹಿಳೆಯರೂ ಏಜೆನ್ಸಿ ಹೊಂದಿರುವಂಥಾದ್ದನ್ನು) ಅಳವಡಿಸಿದ್ದಾದರೆ, ಪಿತೃಪ್ರಾಧಾನ್ಯದ ಚರಿತ್ರಾತೀತತೆ ಹಾಗೂ ಸಾರ್ವತ್ರಿಕತೆಯ ಲಕ್ಷಣಗಳನ್ನು ಕೈಬಿಟ್ಟದ್ದೇ ಆದರೆ ಆಗ ಈ ಪದವು 'ಬಹುತ್ವರೂಪದ ಪಿತೃಪ್ರಾಧಾನ್ಯಗಳು' ಎಂಬಂತಾಗಬಲ್ಲುದು. ಅದು ಸೆಕ್ಯುಲರ್ ಹಾಗೂ ಭೌತವಾದಿಯಾದ ಸಿದ್ಧಾಂತದ ಒಂದು ಭಾಗವಾಗಿ ಒಂದೇ ದೇಶದ ಒಳಗಿರುವ ಪಿತೃ ಪ್ರಾಧಾನ್ಯಗಳ ನಡುವಿನ ಹೋಲಿಕೆ ವ್ಯತ್ಯಾಸಗಳಿಗೂ ಬೇರೆ ದೇಶಗಳಲ್ಲಿ ಕಾಣಿಸುವ ಅಂಥ ವ್ಯತ್ಯಾಸ, ಹೋಲಿಕೆಗಳಿಗೂ ಅದರಿಂದ ಅರ್ಥ ದೊರೆಯಬಹುದು ಅಲ್ಲದೆ ಧಾರ್ಮಿಕ, ಜಾತೀಯ, ಪ್ರಾದೇಶಿಕ ಮುಂತಾದ ಇತರ ವ್ಯತ್ಯಾಸಗಳಿಗೂ ಸಂಬಂಧಿಸಿದಂತೆ ಒಂದು ವಿಶ್ಲೇಷಣೆಗೆ ಒದಗಬಲ್ಲ ಅಂಚನ್ನು ಅದು ಒಳಗೊಳ್ಳಬಹುದು. ರಾಜಕೀಯವಾಗಿ ಇದು ಒಂದು ಮುಖ್ಯವಾದ ಪರಿಕಲ್ಪನೆ. ಏಕೆಂದರೆ, ಅದು ಅಸಮಾನತೆಯ ತಳಹದಿಯಾಗಿದೆ. ಮಹಿಳೆಯರ ಹಕ್ಕುಗಳು ತಮ್ಮ ನೈತಿಕ ಬಲವನ್ನು ಗಳಿಸಿಕೊಳ್ಳುವುದು, ಸಾರ್ವತ್ರಿಕ ಹಕ್ಕುಗಳ ಚರ್ಚೆಗಳು ಸಶಕ್ತವಾಗುವುದು ಈ ಸಂರಚಿತ ಅಸಮಾನತೆಯ ನೆಲೆಯಿಂದಲೆ. ನಿರ್ವಚನಾತ್ಮಕವಾಗಿ ಈ ಪರಿಕಲ್ಪನೆಯು ಜಾತಿ, ವರ್ಣ, ಪ್ರಭುತ್ವಗಳಂತಹ ಅಸಮಾನತೆಯಲ್ಲೇ ಬೇರು ಹೊಂದಿರುವ ಶ್ರಮವಿಭಜನೆಯಲ್ಲೇ ತಳವೂರಿರುವ ಇತರ ಪ್ರಕಾರದ ಅಸಮಾನತೆ ಗಳೊಂದಿಗೆ ತಾನೂ ಸಂವಾದ ನಡೆಸಿದ್ದ ಅರ್ಥವನ್ನು ತಂದುಕೊಡ ಬಲ್ಲದು. ಈ ವಿವಿಧ ಅಸಮಾನತೆ ಆಧರಿತ ಸಂರಚನೆಗಳು ಜೆಂಡರ್ ಸಂಬಂಧಿತವಾಗಿರಬಹುದು ಅಥವಾ ಸ್ವತಂತ್ರವೂ ಆಗಿರಬಹುದು. ಪಿತೃಪ್ರಾಧಾನ್ಯಗಳು ಒಂದೇ ಹೊತ್ತಿಗೆ ಸ್ವಾಯತ್ತವೂ, ಸ್ಯಾಟಲೈಟ್ ಸ್ವರೂಪದ್ದೂ ಆಗಿರುತ್ತವೆ. ಏಕೆಂದರೆ ಅವು ಎಲ್ಲಾ ಬಗೆಯ ಉತ್ಪಾದನಾ ವಿಧಾನಗಳು ಅದರ ಮೇಲೆ ಅವಲಂಬಿಸಿರುತ್ತವೆ. ಅವು ಸಾಪೇಕ್ಷವಾಗಿ ಸ್ವಾಯತ್ತತೆ ಪಡೆಯಲು ಅವು ದೀರ್ಘಕಾಲ ಉಳಿದಿರುವುದೇ ಅರ್ಥಕಾರಣವಾಗಿದೆ. ಉತ್ಪಾದನಾಕ್ರಮವು ಭಿನ್ನವಾಗುತ್ತ ಹೋದಂತೆಲ್ಲ ಅವು ತಮ್ಮ ಸ್ವರೂಪವನ್ನು ಅದಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳುತ್ತಾ ಸನ್ನಿವೇಶಗಳಿಗೆ ಹೊಂದಿಕೊಳ್ಳುತ್ತ ಹಿಂದೆ ಇದ್ದ ಭೌತಿಕ, ತಾತ್ತ್ವಿಕ ಮತ್ತು ಸಾಂಸ್ಕಿಕ ತಾರತಮ್ಯಗಳನ್ನು ಮತ್ತೆ ಚಾಲನೆಗೊಳಿಸುತ್ತಾ ಇರುತ್ತವೆ. ಚಾರಿತ್ರಿಕವಾಗಿ 'ಉತ್ಪಾದನಾ ವಿಧಾನಗಳು ಬದಲಾದಂತೆಲ್ಲ ಪಿತೃಪ್ರಾಧಾನ್ಯ ಸಂರಚನೆಗಳು ಹಾಗೂ ವರ್ಗದ ಜಾಗಗಳು ಮತ್ತೆ ಒಗ್ಗೂಡುತ್ತವೆ ಮತ್ತು ಬೇರೆಯಾಗುತ್ತಿರುತ್ತವೆ'. ಮತ್ತು ಪಿತೃಪ್ರಾಧಾನ್ಯಗಳು ಯಾವುದೇ ಉತ್ಪಾದನಾ ವಿಧಾನದೊಂದಿಗೆ ಒಂದಕೊಂದು ಎಂಬಂತೆ ಸಂಬಂಧ ಪಡೆದಿರುವುದಿಲ್ಲ. ಬದಲಾಗಿ ಒಂದರ ಪದರದ ಮೇಲೆ ಮತ್ತೊಂದು ಹರಡಿಕೊಂಡು ಮರು ಸೂತ್ರೀಕರಣಗೊಳ್ಳುತ್ತ ಬದಲಾಗುತ್ತದೆಂದು ತೋರುತ್ತದೆ. ಯಾವುದೇ ಪಿತೃಪ್ರಧಾನ ವ್ಯವಸ್ಥೆ ಒಂದು ಉತ್ಪಾದನಾ ವಿಧಾನದೊಳಗೇ ಅಳವಡಿಸಿದ್ದು ತನ್ನದೇ ಪ್ರತ್ಯೇಕವಾದ / ಪ್ರತ್ಯೇಕಿಸ ಬಹುದಾದ (imbricate) ಅಸ್ತಿತ್ವ ಹೊಂದಿರುವುದಿಲ್ಲ ಈ ಅರ್ಥದಲ್ಲಿ ಪಿತೃಪ್ರಾಧಾನ್ಯಗಳು ಸ್ಯಾಟಲೈಟ್‌ಗಳು ಎನ್ನಬಹುದಾಗಿದೆ.

ಈ ಶಬ್ದವನ್ನು ಬಹುವಚನದ್ದಾಗಿಸುವುದರಿಂದ ಅದು ಯುರೋಕೇಂದ್ರಿತವಲ್ಲದ ಜನಾಂಗಕೇಂದ್ರಿತವೂ ಅಲ್ಲ ಹಾಗೆ ಹೆಚ್ಚಿನ ವ್ಯಾಪ್ತಿಯನ್ನು ಪಡೆದುಕೊಳ್ಳಬಹುದಾಗಿದೆ. ಏಕವಚನವಾಗಿ ಬಳಸಿದಾಗ ಈ ಪದದಲ್ಲಿ ಬಹುರೂಪದ ಪಿತೃಪ್ರಾಧಾನ್ಯಗಳು ಸೂಚಿಸುವ ತಾತ್ತ್ವಿಕವಾದ ಹಾಗೂ ವ್ಯವಸ್ಥಿತವಾದ ಐಕ್ಯತೆಗಳು ಮತ್ತು ತಾರತಮ್ಯಗಳು ಒರೆಸಿಹೋಗುತ್ತವೆ. ಬಹುರೂಪದ ಪಿತೃಪ್ರಾಧಾನ್ಯಗಳು ಐರೋಪ್ಯ ಹಾಗೂ ಐರೋಪ್ಯೇತರ ಸಮಾಜಗಳ ವಿಶಿಷ್ಟ ಚಾರಿತ್ರಿಕತೆಗಳಿಗೆ ಪ್ರವೇಶಾವಕಾಶ ಪಡೆದಿರುತ್ತವೆ. ಹಾಗೆಯೇ ದಕ್ಷಿಣ ಏಷ್ಯಾದ ಒಳಗೆ ಮಹಿಳೆಯರ ಶೋಷಣೆಗಳಲ್ಲಿರುವ ಹೋಲಿಕೆಗಳು, ವ್ಯತ್ಯಾಸಗಳನ್ನು ಗುರುತಿಸಲೂ ಅದು ಒದಗಬಲ್ಲದು. ಒಟ್ಟಿನಲ್ಲಿ ಬಹುರೂಪದ ಪಿತೃಪ್ರಾಧಾನ್ಯಗಳನ್ನು ಚಾರಿತ್ರಿಕ ಖಚಿತತೆ ಹಾಗೂ ಸೈದ್ಧಾಂತಿಕ ತೀವ್ರತೆಯೊಂದಿಗೆ ವಿವರಿಸಿದ್ದಾದರೆ ಅಮೂರ್ತ ಐಕ್ಯತೆಗಳು, ಚಾರಿತ್ರಿಕ ವೈಶಿಷ್ಟ್ಯಗಳು ಹಾಗೂ ಪ್ರಯೋಗಿಕ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳಲು ಒಂದು ದಾರಿಯನ್ನು ಅವು ಒದಗಿಸಬಲ್ಲವು. ಈ ಅರ್ಥೈಸುವ ದಾರಿಯು ಹೋಲಿಕೆಗಳನ್ನಾಗಲಿ ವ್ಯತ್ಯಾಸಗಳನ್ನಾಗಲಿ ವೈಭವೀಕರಿಸದೆ ಅವುಗಳನ್ನು ಗತಿತಾರ್ಕಿಕ ರೀತಿಯಲ್ಲಿ ಸಾದೃಶ್ಯ, ವ್ಯತ್ಯಾಸ, ಒಂದರ ಮೇಲೊಂದು ಹರಡಿಕೊಂಡಿರುವಿಕೆ, ಒಳವಿಭಾಗಗಳಿರುವಿಕೆ, ಪರಸ್ಪರ ಅವಲಂಬಿತವಾದ ವ್ಯತ್ಯಾಸಗಳುಳ್ಳ ಸಂಬಂಧಗಳೆಂದು ನೋಡುವುದನ್ನು ಸಾಧ್ಯವಾಗಿಸಬಲ್ಲದು ದೇಶೀಯವಾದ ಹಾಗೂ ಅನ್ಯದೇಶಗಳ ಸರ್ಕಾರಗಳ ಮೂಲಕವಾಗಿ ಹೊಮ್ಮಿ ಬರುತ್ತಿರುವ ಶೋಷಣೆಗಳನ್ನು ಅರ್ಥಮಾಡಿಕೊಳ್ಳಲು ಇದರಿಂದ ಸಾಧ್ಯವಾದೀತು.

ಹೀಗೆ ಅರ್ಥಮಾಡಿಕೊಳ್ಳುವುದರಿಂದ ಬೇರೆ ದೇಶಗಳ ಶಕ್ತಿಗಳನ್ನು ಪ್ರತಿರೋಧಿಸುವುದಕ್ಕೆ ಹಾಗೂ ಹೊಮ್ಮುತ್ತಿರುವ ಭೌತಿಕ ಪರಿಸ್ಥಿತಿಗಳ ನಡುವಿನ ಸಮಾನಾಂಶವನ್ನು ಗ್ರಹಿಸಲು, ಸಮಾನ ಕಾಳಜಿಗಳನ್ನು ಹೆಚ್ಚು ಸಾರವತ್ತಾಗಿ ಉಚ್ಚರಿಸಲು ಸ್ತ್ರೀವಾದಿ ಸಂಯುಕ್ತ ಗುಂಪುಗಳನ್ನು ದಕ್ಷಿಣ ಏಷ್ಯಾದಲ್ಲಿ ಕಟ್ಟಲು ಅನೇಕ ಹೊಸ ಸಾಧ್ಯತೆಗಳನ್ನು ಅವು ತೆರೆಯಬಲ್ಲವು. ಮೊಟ್ಟ ಮೊದಲಿನ ಹಾಗೂ ರಾಷ್ಟ್ರೀಯವಾದಿ ಮಹಿಳಾ ಚಳವಳಿ ಹಂತಗಳು ವಿಭಕ್ತ ಬಂಡವಾಳಶಾಹಿಗಳ ಮೂಲಕವಾಗಿ ವಸಾಹತುಶಾಹಿ ಶೋಷಣೆಗಳಿಂದ (ಆಗ ಇದನ್ನು ಸಂಪತ್ತಿನ ಪಲಾಯನ ಎನ್ನಲಾಗುತ್ತಿತ್ತು) ಹುಟ್ಟಿಕೊಂಡಿತ್ತು. ಎರಡನೆಯ ಹಂತದ ಮಹಿಳಾ ಚಳವಳಿಯು ಸ್ವಾತಂತ್ರ್ಯೋತ್ತರ ಬಂಡವಾಳಶಾಹಿ ಬೆಳವಣಿಗೆಗಳು ಸೃಷ್ಟಿಸಿದ ಅಸಮಾನತೆಗಳಿಂದ ಹುಟ್ಟಿತು. ಮೂರನೆಯ ಹಾಗೆ ಹೆಚ್ಚಾಗಿ ಪ್ರಾದೇಶಿಕ ಐಕ್ಯತೆಯುಳ್ಳ ಘಟ್ಟವೊಂದು ಇಂದು ನವ ಉದಾರವಾದಿ ಬಂಡವಾಳಶಾಹಿ ಉತ್ಪಾದಿಸುತ್ತಿರುವ ಹೊಸ ಬಗೆಯ ಸಾಮ್ಯತೆ, ವೈರುಧ್ಯಗಳು ಮತ್ತು ದಕ್ಷಿಣ ಏಷ್ಯಾ ದೇಶಗಳಲ್ಲಿನ ಪಿತೃಪ್ರಾಧಾನ್ಯಗಳ ಸ್ಪಷ್ಟವಾಗಿ ಕಂಡುಬರುವ ಮರುಸೂತ್ರೀಕರಣಗಳ ಫಲವಾಗಿ ಹೊಮ್ಮಿ ಬರಬಹುದಾಗಿದೆ.

❑

*Edited, Printed, Published and owned by Rajeshwari H.S., No. 114/5, 9th Cross, 2nd Main, Chamarajpet, Bangalore - 560 018.*
*Printed at ILA Mudrana, No. 36, 40 Ft. Road, Raghavanagara, New Timberyard Layout, Bangalore - 560 026.*
*Published at No. 114/5, 9th Cross, 2nd Main, Chamarajpet, Bangalore - 560 018. Editor : Rajeshwari H.S.*

# ಬಿಡುಗಡೆ

● ದರ್ಶಿನಿ ದಾದಾವಾಲ



**ಕ**ಡೆಗೆ ಅವಳು ಬೇರೆಯವರ ಹಾಗೆ ಆಗಲೇಯಿಲ್ಲ
ಬದುಕುವ ಆಸೆ ಕಳೆದುಕೊಂಡಳು
ಇದನ್ನವಳು ಸುತ್ತಲ ಪ್ರಪಂಚಕ್ಕೆ ಹೇಳಿ ತಿಳಿಸಲು ಆಗಲಿಲ್ಲ
ತನಗೆ ತಾನೇ ತಿಳಿಸಿ ಹೇಳಲೂ ಆಗಿರಲಿಲ್ಲ ಅನಿಸಿತ್ತು ಅವಳಿಗೆ

ಕಣ್ಣಿದ್ದೂ ಕುರುಡಾಗಿದ್ದ
ಕಿವಿಯಿದ್ದೂ ಕಿವುಡಾಗಿದ್ದ
ನಾಲಿಗೆಯಿದ್ದೂ ಮೂಕವಾಗಿದ್ದ ಜನಗಳ ನಡುವೆ
ತಾನು ಕೊಳೆಯುತ್ತಿದ್ದ ಹಾಗೆ ಅನಿಸಿತ್ತುಅವಳಿಗೆ
ಸುಮ್ಮನೆ ಹೀಗೆ ಕೊಳೆಯುವುದರ ಬದಲು
ಸಾಯುವುದೇ ಮೇಲು,
ಬಿಡುಗಡೆ ಯಾದರೂ ಸಿಕ್ಕೀತು ಎಂದವಳಿಗನಿಸಿತ್ತು

ಮನಸಿಗೆ ಯೋಚಿಸುವುದ ನಿಲ್ಲಿಸು ಅಂದಳು
ಬೇರೆಯವರ ಹಾಗೆ ಆಲೋಚಿಸಲಾರೆ ನೀನು
ಸ್ವಂತ ಆಲೋಚನೆಯನ್ನು ನಿಭಾಯಿಸಲಾರೆ ನೀನು
ಸಾಯಿ ನೀನು! ಅಂದಳು ಅದಕ್ಕೆ.
ಅದು ಸಾಯಲಿಲ್ಲ. ಬದಲಿಗೆ,
ಮೊದಲಿಗಿಂತ ಎರಡು ಪಟ್ಟು ಆಲೋಚಿಸ ಹತ್ತಿತು.
ಅವಳು ಹೆಚ್ಚೆಚ್ಚು ಸಂಕಟ ಪಟ್ಟಳು.

ಅವಳ ಕೈ ಕಾಲುಗಳೂ ಅವಳ ಸಾಥಿ ಬಿಟ್ಟಿದ್ದವು
ಎಷ್ಟೋ ಸಲ ಕೆಲಸ ನಿಲ್ಲಿಸಲು ಹೇಳಿದ್ದಳು ಅವಕ್ಕೆ
ಅವು ತಮ್ಮ ಕೆಲಸವನ್ನು ಬಿಟ್ಟಿರಲಿಲ್ಲ.
ಅವಳು ನಿಸ್ಸಹಾಯಕಳಾದಳು..
ಹೆಚ್ಚು ನಿಸ್ಸಹಾಯಕಳಾಗುತ್ತ ಹೋದಳು.

ಕಣ್ಣುಮುಚ್ಚಿಕೊಂಡಿರಲು ಕಣ್ಣುಗಳಿಗೆ ಹೇಳಿದಳು
ಕಣ್ಣುಗಳಿಗೂ ಅವಳು ಹೇಳಿದ್ದು ಕೇಳಿಸಿದ ಹಾಗೆ ಕಾಣಲಿಲ್ಲ.
ಅವಳು ನೋಡುತ್ತಲೇ ಇದ್ದಳು..
ನೋಡುತ್ತಲೇ ಇದ್ದಳು ಸುತ್ತಮುತ್ತ.

ಅವಳು ತನ್ನ ಹೊಟ್ಟೆಗೆ
ಊಟ ಕೇಳುವುದನ್ನು ಬಿಡು ಅಂದಳು
ಆದರೆ ಹೊಟ್ಟೆಯೋ ಸಮಯಕ್ಕೆ ಸರಿಯಾಗಿ ಬೇಡುತ್ತಲೇ ಇತ್ತು.

ರಕ್ತಕ್ಕೆ ಹೆಪ್ಪುಗಟ್ಟು ಅಂದಳು
ರಕ್ತ ಹರಿಯುತ್ತಲೇಯಿತ್ತು.. ಹರಿಯುತ್ತಲೇಯಿತ್ತು
ಹೇಳಿದ್ದೇನೂ ಕೇಳಲೇ ಇಲ್ಲವ್ರೋ ಅನ್ನುವಹಾಗೆ.

ಕೊನೆಯದಾಗಿ ತನ್ನ ಹೃದಯಕ್ಕೆ
ಬಡಿತ ನಿಲ್ಲಿಸು ಎಂದು ಬೇಡಿದಳು
ಆದರೆ ಹೃದಯ ಹೊಡೆದುಕೊಳ್ಳುತ್ತಲೇ ಇತ್ತು.

ಅವಳಿಗೆ ತಳಮಳದ ಒತ್ತಡ ಒಳಗಿಂದ...
ಹೇಗೆ ಜೀವಿಸುವುದು ಹೀಗೆ?
ಬೇರೆಯವರ ಮಾತು ಬೇಡ
ಅವಳ ದೇಹವೇ ಅವಳ ಮಾತ ಕೇಳುವುದಿಲ್ಲ

ಖಡಾ ಖಂಡಿತವಾಗಿ ಈಗವಳಿಗೆ
ಬದುಕುವುದು ಬೇಕಿರಲಿಲ್ಲ.
ಆದರೆ ಸಾಯುವುದೂ ಶಕ್ಯವಿರಲಿಲ್ಲ.

– ಮಮತ. ಜಿ ಸಾಗರ
(ಗುಜರಾತಿಯಿಂದ ಕನ್ನಡಕ್ಕೆ)

Registered with Registrar of Newspapers of India under No. KARKAN/2007/22289
**'NAMMA MANASA'**, REGD. No. : MAG(3) NPP/399(A) / 2006-07 KA/BGS/2074/2007-(

# ನಮ್ಮ ಮಾನಸ

- ಮಹಿಳೆಯರಿಗೆ ಸಂಬಂಧಿಸಿದ ಲೇಖನಗಳು, ವರದಿಗಳು ವಿಶ್ಲೇಷಣೆಗಳು, ವಿಮರ್ಶೆಗಳು, ಅನುಭವಗಳು, ಕತೆ-ಕವನಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.
- ಪತ್ರಿಕೆಯು ವಿಷಯಾಧರಿತವಾಗಿದ್ದು, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮಹಿಳೆಯರ ಬದುಕಿನ ಮೇಲೆ ಪರಿಣಾಮ ಬೀರುವ ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳನ್ನು ಚರ್ಚಿಸಲಾಗಿದೆ.
- ವಿವಾಹ, ಕುಟುಂಬದಂತಹ ಸಾಮಾಜಿಕ ಸಂಸ್ಥೆಗಳು, ಮನೆಗೆಲಸ, ಸಂಬಳರಹಿತ ದುಡಿಮೆ, ಆರ್ಥಿಕ ನೀತಿ, ಜಾತಿ, ವರ್ಗ, ಸೌಂದರ್ಯ, ಲಿಂಗ, ಹೆಣ್ತನ ಮುಂತಾದ ವಿಷಯಗಳನ್ನು ಚರ್ಚೆಗೊಳಪಡಿಸಿ ಪ್ರಕಟಿಸಲಾಗಿದೆ. ಗುತ್ತಿಗೆ ಪೌರಕಾರ್ಮಿಕರ ಹೋರಾಟಗಳಿಗೆ ಸ್ಪಂದಿಸಿ ಲೇಖನಗಳನ್ನು ಪ್ರಕಟಿಸಿದೆ.
- ಆರೋಗ್ಯ, ಲೈಂಗಿಕತೆ, ಅಪಾಯಕಾರೀ ಗರ್ಭ ನಿರೋಧಕ ಗಳು, ಆರ್ಥಿಕತೆ ಮತ್ತು ಅಭಿವೃದ್ಧಿ, ಅಭಿವೃದ್ಧಿ ಯೋಜನೆ ಗಳು ಮುಂತಾದ ವಿಚಾರಗಳನ್ನು ವಿಮರ್ಶೆಗೊಳ ಪಡಿಸಲಾಗಿದೆ.
- ಅಣ್ವಸ್ತ್ರೀಕರಣ, ಮಿಲಿಟರೀಕರಣ, ಜಾಗತೀಕರಣದಂಥ ಬೆಳವಣಿಗೆಗಳನ್ನು ಮಹಿಳಾ ದೃಷ್ಟಿಕೋನದಿಂದ ಪ್ರಶ್ನಿಸಲಾಗಿದೆ.
- ಇತರ ಪ್ರಜಾಸತ್ತಾತ್ಮಕವಾದ ಸಂಘಟನೆಗಳೊಡನೆ ಕೋಮುವಾದ, ಸಮಾನ ನಾಗರಿಕ ಸಂಹಿತೆ, ಮೀಸಲಾತಿ, ಲೈಂಗಿಕತೆ, ಪರಿಸರ, ಸ್ಥಳಾಂತರ ಮುಂತಾದ ವಿವಾದ ಗಳನ್ನು ಕುರಿತ ಚರ್ಚೆಗಳಲ್ಲಿ, ಆಂದೋಲನಗಳಲ್ಲಿ ಪಾಲ್ಗೊಳ್ಳಲಾಗಿದೆ.
- ಸ್ವಸಹಾಯ ಸಂಘಗಳನ್ನು ರಚಿಸುವ ಮೂಲಕ ಮಹಿಳೆಯರ ಸಬಲತೆಗೆ ಪ್ರೋತ್ಸಾಹ ನೀಡಲಾಗಿದೆ.
- ನಮ್ಮದೇ ಮಿತಿಯಲ್ಲಿ ತೊಂದರೆಗೊಳಗಾದ ಮಹಿಳೆ ಯರಿಗೆ ಸಲಹೆ, ನೈತಿಕ ಬೆಂಬಲಗಳಲ್ಲದೆ ಕಾನೂನಿನ ನೆರವನ್ನು ನೀಡುತ್ತಿದ್ದೇವೆ.
- ಮಹಿಳೆಯರು ತಾವಿದ್ದೆಡೆಯಲ್ಲಿ ಮಹಿಳಾ ಪತ್ರಿಕೆಗಳನ್ನು ಹೊರತರಲು ಪ್ರಯತ್ನಿಸಿದಲ್ಲಿ, ಗುಂಪುಗಳನ್ನು ರಚಿಸ ಬೇಕಾದಲ್ಲಿ ಸಹಕರಿಸಲು ಉದ್ದೇಶಿಸಿದ್ದೇವೆ.

Registered Magazine

*Posted on 9th of every month at Chamarajpet Post Office*

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ